

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 31 ಭಾನುವಾರ 2024

ಸಂಪುಟ: 44 | ಸಂಚಿಕೆ: 342 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಏ.2ರಿಂದ ರಾಜ್ಯದಲ್ಲಿ ಅಮಿತ್ ಷಾ ರಣಕಹಳೆ

ಬೆಂಗಳೂರು ಗ್ರಾಮಾಂತರ ಎನ್‌ಡಿಎ ಮೈತ್ರಿ ಅಭ್ಯರ್ಥಿ ಡಾ.ಮಂಜುನಾಥ್ ಪರ ಪ್ರಚಾರ

ಚನ್ನಪಟ್ಟಣ ಸುತ್ತಮುತ್ತ ರೋಡ್ ಶೋ


(ಸಂಗ್ರಹ ಚಿತ್ರ)


ಡಾ.ಸಿ.ಎನ್.ಮಂಜುನಾಥ್

ಬೆಂಗಳೂರು, ಮಾ.30(ಕೆಎಂಶಿ)– ಕರ್ನಾಟಕದ 28 ಕ್ಷೇತ್ರಗಳಲ್ಲೂ ಜಯ ಗಳಿಸಬೇಕೆಂದು ಪಣ ತೊಟ್ಟಿರುವ ಬಿಜೆಪಿ ನಾಯಕರು, ಕೇಂದ್ರ ಗೃಹ ಸಚಿವ ಹಾಗೂ ಚುನಾವಣಾ ತಂತ್ರ ನಿಪುಣ ಅಮಿತ್ ಷಾ ಪಕ್ಷದ ಅಭ್ಯರ್ಥಿಗಳ ಪರ ಏಪ್ರಿಲ್ 2ರಿಂದ ರಣಕಹಳೆ ಮೊಳಗಿಸಲಿದ್ದಾರೆ.

ಅಂದು ಸಂಜೆ 6 ಗಂಟೆಗೆ ಬೆಂಗಳೂರು ಗ್ರಾಮಾಂತರದಿಂದ ಸ್ಪರ್ಧಿಸಿರುವ ವೈದ್ಯ ಡಾ.ಮಂಜುನಾಥ್ ಪರ ಚನ್ನಪಟ್ಟಣ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ರೋಡ್ ಶೋ ನಡೆಸಲಿದ್ದಾರೆ. ರೋಡ್ ಶೋಗೂ ಮುನ್ನ ಮೊದಲ ಹಂತದಲ್ಲಿ ಜರುಗಲಿರುವ 14 ಕ್ಷೇತ್ರಗಳ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಹಾಗೂ ಮುಖಂಡರಿಗೆ ಚುನಾವಣಾ ಸಿದ್ಧತೆ ಮತ್ತು ಗೆಲುವಿನ ಮಾನದಂಡದ ಬಗ್ಗೆ ಪಾಠ ಮಾಡಲಿದ್ದಾರೆ. ರೋಡ್ ಶೋ ಜೊತೆಗೆ ಕಾರ್ಯಕರ್ತರ ಬೃಹತ್ ಸಮಾವೇಶ ನಡೆಸಲಿದ್ದು, ಎರಡೂ ಕಾರ್ಯಕ್ರಮಗಳಲ್ಲೂ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಅಮಿತ್ ಷಾ ಜೊತೆ ಭಾಗಿಯಾಗಲಿದ್ದಾರೆ. ಬೆಂಗಳೂರು ಗ್ರಾಮಾಂತರದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಹಾಗೂ ಸಂಸದ ಡಿ.ಕೆ.ಸುರೇಶ್ ಕಾಂಗ್ರೆಸ್‌ನಿಂದ ಚುನಾವಣಾ ಕಣಕ್ಕಿಳಿದಿದ್ದಾರೆ. ಸುರೇಶ್ ದೇಶ ವಿಭಜನೆಯ ಮಾತನಾಡಿದ್ದರು. ಇಂತಹವರನ್ನು ಚುನಾವಣೆಯಲ್ಲಿ ಸೋಲಿಸಲೇಬೇಕು ಎಂಬ ಉದ್ದೇಶದಿಂದ ಹೃದಯ ತಜ್ಞ ಡಾ. ಮಂಜುನಾಥ್ ಅವರನ್ನು ಬಿಜೆಪಿ ಕಣಕ್ಕಳಿಸಿದೆ. ಮಂಜುನಾಥ್ ಪರ ಅಮಿತ್ ಷಾ ರೋಡ್ ಶೋ ನಡೆಸುವ ಜೊತೆಗೆ ಅಲ್ಲಿಯೇ ಕಾರ್ಯಕರ್ತರ ಸಭೆ ನಡೆಸಿ, ಮತದಾರರಿಗೆ ದೊಡ್ಡ ಸಂದೇಶ ನೀಡಲಿದ್ದಾರೆಂದು ಪಕ್ಷದ ಮೂಲಗಳು ತಿಳಿಸಿವೆ. ಶಿವಮೊಗ್ಗದ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಡಾ.ಮಂಜುನಾಥ್ ಅವರನ್ನು ಸಾರ್ವಜನಿಕರಿಗೆ ಪರಿಚಯಿಸಿದ್ದರು. ಅಮಿತ್ ಷಾ ಪ್ರಚಾರ ಕಾರ್ಯವನ್ನು ಭಾರೀ ಯಶಸ್ಸುಗೊಳಿಸುವ ಉದ್ದೇಶ ದಿಂದ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮನೆಯಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಗ್ರಾಮಾಂತರ ಕ್ಷೇತ್ರದ ಉಭಯ ಪಕ್ಷಗಳ ಮುಖಂಡರು ಭಾಗವಹಿಸಿದ್ದರು. ಷಾ ಪ್ರವಾಸ ಮುಗಿಸಿ ಹಿಂತಿರುಗಿದ ತಕ್ಷಣವೇ ಪ್ರಧಾನಿ ಅವರು ಬೆಂಗಳೂರು ಗ್ರಾಮಾಂತರದಲ್ಲಿ ಪಕ್ಷದ ಅಭ್ಯರ್ಥಿ ಪರ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ.

ಮೈಸೂರಿಗೆ ಶೃಂಗೇರಿ ಶ್ರೀ ಶಾರದಾಪೀಠದ ಶ್ರೀ ವಿಧುಶೇಖರ ಭಾರತೀ ಶ್ರೀಗಳ ಆಗಮನ

ಶಂಕರ ಮಠದ ಅಭಿನವ ಶಂಕರಾಲಯದ ಶತಮಾನೋತ್ಸವಕ್ಕೆ ಶ್ರೀಗಳಿಂದ ಚಾಲನೆ: ಏ.6ರವರೆಗೆ ವಿವಿಧ ಕಾರ್ಯಕ್ರಮಗಳಲ್ಲಿ ಶ್ರೀಗಳು ಭಾಗಿ


ಮೈಸೂರಿನ ಶ್ರೀ ಶೃಂಗೇರಿ ಶಂಕರ ಮಠದ ಅಭಿನವ ಶಂಕರಾಲಯಕ್ಕೆ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರಭಾರತೀ ಸ್ವಾಮೀಜಿಯವರನ್ನು ಛತ್ರಿ–ಚಾಮರ ಹಿಡಿದು ಭಕ್ತಾದಿಗಳು ಕರೆತರುತ್ತಿರುವುದು.

ಮೈಸೂರು,ಮಾ.30(ಪಿಎಂ)– ಮೈಸೂರಿನ ಫೋರ್ಟ್ ಮೊಹಲ್ಲಾದಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠದ ಅಭಿನವ ಶಂಕರಾಲಯದ ಶತಮಾನೋತ್ಸವ ಸಂಭ್ರಮಾಚರಣೆಗೆ ಶೃಂಗೇರಿ ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ಶನಿವಾರ ಸಂಜೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಶಂಕರ ಮಠದ ಅಭಿನವ ಶಂಕರಾಲಯಕ್ಕೆ ಆಗಮಿಸಿದ ಶ್ರೀವಿಧುಶೇಖರ ಭಾರತೀ ಸನ್ನಿಧಾನಂಗಳವರು, ಇಲ್ಲಿನ ಶಂಕರಾಚಾರ್ಯರ ಮೂರ್ತಿ, ಶಾರದಾಂಬದೇವಿ ಮೂರ್ತಿ ಹಾಗೂ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಯವರ ಮೂರ್ತಿಗಳ ದರ್ಶನ ಪಡೆದು, ನಮಿಸಿದರು. ಬಳಿಕ ಇದೇ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ 'ಸಚ್ಚಿದಾನಂದ ವಿಲಾಸ ಗುರುಭವನ' ಉದ್ಘಾಟನೆ ನೇರವೇರಿಸಿದರು. ನಂತರ ಇದೇ ಭವನದಲ್ಲಿ ಆಸೀನರಾದ ಶ್ರೀಗಳಿಗೆ ಅಭಿನವ ಶಂಕರಾಲಯದ ಧರ್ಮಾಧಿಕಾರಿ ಹೆಚ್.ರಾಮಚಂದ್ರ ದಂಪತಿ ಪಾದ ಪೂಜೆ ನೆರವೇರಿಸಿದರು. ನಂತರ ಭಕ್ತರಿಗೆ ಆಶೀರ್ವಚನ ನೀಡಿದ ಶ್ರೀಗಳು, ಶಂಕರಾಚಾರ್ಯರು ಸನಾತನ ಧರ್ಮ ಉಳಿಸಿ ಬೆಳೆಸಲು ಅಪಾರ ● 9ನೇ ಪುಟಕ್ಕೆ


ಕೊಡವ ಕುಟುಂಬಗಳು 'ಕುಂಡೋಳಂಡ ಹಾಕಿ ಹಬ್ಬಕ್ಕೆ ಚಾಲನೆ
■ ಪುಟ–8

ಮತದಾನದ ದಿನ ಸಾರ್ವತ್ರಿಕ ರಜೆ

ಬೆಂಗಳೂರು, ಮಾ.30– ಕರ್ನಾಟಕದಲ್ಲಿ ಚುನಾವಣೆ ನಡೆಯುವ ಎರಡೂ ದಿನ ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ಮೊದಲ ಹಂತದ ಮತದಾನ ಏಪ್ರಿಲ್ 26 ಹಾಗೂ 2ನೇ ಹಂತದ ಮತದಾನ ಮೇ 7ರಂದು ನಡೆಯಲಿದೆ. ಈ ದಿನಗಳಂದು ಎಲ್ಲಾ ರಾಜ್ಯ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜುಗಳು, ವ್ಯವಹಾರಿಕ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು ಹಾಗೂ ಇನ್ನಿತರ ಸಂಸ್ಥೆಗಳಲ್ಲಿ ಖಾಯಂ ಆಗಿ ಹಾಗೂ ದಿನಗೂಲಿ ಮೇಲೆ ಕೆಲಸ ನಿರ್ವಹಿಸುವ ನೌಕರರಿಗೆ ವೇತನ ಸಹಿತ ರಜೆ ಘೋಷಣೆ ಮಾಡಿರುವುದಾಗಿ ಸರ್ಕಾರದ ಅಧೀನ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈತ್ರಿ ತಾತ್ಕಾಲಿಕವಲ್ಲ, ಚುನಾವಣೆ ನಂತರವೂ ನಮ್ಮ ಬಾಂಧವ್ಯ ಮುಂದುವರಿಯಲಿದೆ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪುನರುಚ್ಚಾರ



ತುಮಕೂರು: ಈ ನಮ್ಮ ಮೈತ್ರಿ ತಾತ್ಕಾಲಿಕವಲ್ಲ, ಲೋಕಸಭೆ ಚುನಾವಣೆ ನಂತರವೂ ಬಿಜೆಪಿ–ಜೆಡಿಎಸ್ ಮೈತ್ರಿ ಮುಂದುವರಿಯಲಿದೆ ಎಂದು ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ.

ತುಮಕೂರಿನಲ್ಲಿ ಶನಿವಾರ ಜೆಡಿಎಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು ಈ ಮೈತ್ರಿ ತಾತ್ಕಾಲಿಕವಲ್ಲ, ಮುಂದೆಯೂ ಇರಲಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆ ಬೆನ್ನಲ್ಲೇ ದೇವೇಗೌಡರು ಈ ಘೋಷಣೆ ಮಾಡಿದ್ದಾರೆ. ಇತರೆ ಪಕ್ಷದ ಬೆಂಬಲದೊಂದಿಗೆ ಸರ್ಕಾರ ರಚಿಸಿರುವುದು ಸೇರಿದಂತೆ ದೇಶದಲ್ಲಿ ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಸಿದ್ದರಾಮಯ್ಯ ಅವರ ಕುತಂತ್ರ ಬುದ್ಧಿಯಿಂದಾಗಿ ಕಾಂಗ್ರೆಸ್‌ಗೆ ಇಂತಹ ದುಃಸ್ಥಿತಿ ಬಂದಿದೆ. ಪಕ್ಷ ಹೀನಾಯ ಸ್ಥಿತಿಯಲ್ಲಿ ಇದ್ದರೂ ಜೆಡಿಎಸ್ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು. 2019ರ ಲೋಕ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡಿದ್ದರೂ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿದ್ದೆ. ಬಲವಂತವಾಗಿ ಕರೆತಂದು ತುಮಕೂರು ಕ್ಷೇತ್ರ ದಿಂದ ನಿಲ್ಲುವಂತೆ ಮಾಡಿ ಸೋಲಿಸಿದರು. ಮೈಸೂರು ಕ್ಷೇತ್ರದ ಟಿಕೆಟ್‌ಗಾಗಿ ನನ್ನನ್ನು ನಿಲ್ಲುವಂತೆ ಮಾಡಿದರು. ಸಚಿವ ಕೆ.ಎನ್.ರಾಜಣ್ಣ ಜತೆಗೆ ಸೇರಿಕೊಂಡು ರಾತ್ರಿ ಒಂದು ಗಂಟೆವರೆಗೂ ಸಭೆ ನಡೆಸಿ, ಪಿತೂರಿ ಮಾಡಿ ಸೋಲಿಸಲು ಕಾರಣಕರ್ತರಾಗಿದ್ದೀರಿ ಎಂದು ಆರೋಪಿಸಿದರು. ನಮ್ಮ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರಿಗೆ ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿಸಲು ಅಭ್ಯರ್ಥಿಗಳೇ ಇರಲಿಲ್ಲ. ಯಾವ ಸಚಿವರೂ ಸ್ಪರ್ಧಿಸುವುದಾಗಿ ಹೇಳಲಿಲ್ಲ. ಕಾಂಗ್ರೆಸ್ ಇಂತಹ ಸ್ಥಿತಿಯಲ್ಲಿ ಇರಬೇಕಾದರೆ ನನ್ನ ಮೇಲೆ ಇಲ್ಲಸಲ್ಲದ ಆಪಾದನೆ ಮಾಡುತ್ತಿದ್ದಾರೆ.

ಏ.3ಕ್ಕೆ ಮಂಡ್ಯದಲ್ಲೇ ನನ್ನ ನಿರ್ಧಾರ

● ಬೆಂಗಳೂರು ಜೆ.ಪಿ.ನಗರ ನಿವಾಸದಲ್ಲಿ ಅಭಿಮಾನಿಗಳ ಅಭಿಪ್ರಾಯ ಪಡೆದ ನಂತರ ಸುಮಲತಾ ಘೋಷಣೆ ● ನೀವೇ ಸ್ಪರ್ಧಿಸಿ; ಇಲ್ಲದಿದ್ದರೆ ನೋಟಾಕ್ಕೆ ನಮ್ಮ ಮತ ಹಾಕುತ್ತೇವೆ: ಅಭಿಮಾನಿಗಳ ಪಟ್ಟು



ಕಾಂಗ್ರೆಸ್‌ನಿಂದಲೂ ಆಹ್ವಾನ ಬಂದಿದೆ; ಮಂಡ್ಯ ಜನತೆ ಹಿತದೃಷ್ಟಿಯಿಂದ ನನ್ನ ನಿರ್ಧಾರ

ಬೆಂಗಳೂರು, ಮಾ.30–ಪಕ್ಷ ಸೇರ್ಪಡೆಗಾಗಿ ಬಿಜೆಪಿ ಮಾತ್ರವಲ್ಲದೆ ಕಾಂಗ್ರೆಸ್‌ನಿಂದಲೂ ಆಹ್ವಾನ ಬಂದಿದೆ. ಆದರೆ ನಾನು ಯಾವುದೇ ಪಕ್ಷವನ್ನು ನೋಡಿ ನಿರ್ಧಾರ ತೆಗೆದುಕೊಳ್ಳದೇ ಮಂಡ್ಯ ಜನತೆಯ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳುತ್ತೇನೆ ಎಂದು ಮಂಡ್ಯ ಸಂಸದೆ ಸುಮಲತಾ ತಿಳಿಸಿದ್ದಾರೆ. ಅಭಿಮಾನಿಗಳ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಮೊದಲಿನಿಂದಲೂ ಜನಾಭಿಪ್ರಾಯ ತೆಗೆದುಕೊಂಡೇ ನಿರ್ಧಾರ ಮಾಡುತ್ತಿದ್ದೇನೆ. ಇಂದು ಸಭೆಗೆ ಬಂದಿದ್ದವರು ಅವರವರ ಅಭಿಪ್ರಾಯವನ್ನು ತಿಳಿಸಿದ್ದಾರೆ. ನಾನೂ ಆಪ್ತರೊಂದಿಗೆ ಚರ್ಚಿಸಬೇಕು. ಇದು ಅಷ್ಟು ಸುಲಭವಾಗಿ ● 9ನೇ ಪುಟಕ್ಕೆ

ಮೈಸೂರು, ಮಾ. 30–ಮಂಡ್ಯ ಜನರನ್ನು ಬಿಟ್ಟು ಯಾವುದೇ ರಾಜಕೀಯ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಸಂಸದೆ ಸುಮಲತಾ ಅಂಬರೀಶ್, ಏ.3ರಂದು ಮಂಡ್ಯದಲ್ಲೇ ಸಭೆ ನಡೆಸಿ ನನ್ನ ನಿರ್ಧಾರ ಪ್ರಕಟಿಸುತ್ತೇನೆ ಎಂದು ಘೋಷಿಸಿದ್ದಾರೆ.


ಮಂಡ್ಯ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಬಯಸಿದ್ದ ಅವರು, ಕ್ಷೇತ್ರ ಜೆಡಿಎಸ್ ಪಾಲಾಗಿ ತಮಗೆ ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಇಂದು ಬೆಂಗಳೂರಿನ ಜೆ.ಪಿ.ನಗರದಲ್ಲಿರುವ ತಮ್ಮ ನಿವಾಸದಲ್ಲಿ ಬೆಂಬಲಿಗರು, ಮುಖಂಡರ ಸಭೆಯ ನಂತರ ಮಾತನಾಡಿದರು. ಸಭೆ ವೇಳೆ ಅವರ ಅಭಿಮಾನಿಗಳು ಹಲವಾರು ಸಲಹೆ–ಸೂಚನೆಗಳನ್ನು ನೀಡಿದ್ದಲ್ಲದೇ, ಮತ್ತೆ ಪಕ್ಷೇತರರಾಗಿ ಸ್ಪರ್ಧಿಸುವಂತೆಯೂ ಒತ್ತಾಯಿಸಿದರು. ನಾವು ನಿಮ್ಮ ಜೊತೆ ಇರುತ್ತೇವೆ. ನೀವೇ ಸ್ಪರ್ಧೆ ಮಾಡಿ. ನಮ್ಮನ್ನು ಬೇರೆಯವರ ಮನೆಗೆ ಕಳುಹಿಸಬೇಡಿ. ನಾವು ನಿಮಗೆ ಮಾತ್ರ ಮತ ಹಾಕುತ್ತೇವೆ. ಬೇರೆ ಯಾವ ಪಕ್ಷಕ್ಕೂ ಮತ ಹಾಕುವುದಿಲ್ಲ. ನೀವು ಸ್ಪರ್ಧಿಸದಿದ್ದರೆ ನೋಟಾಗೆ ಮತ ಹಾಕುತ್ತೇವೆ ಎಂದು ಅಭಿಮಾನಿಗಳು ಭಾವನಾತ್ಮಕವಾಗಿ ನುಡಿದರು. ಕೆಲವರು 'ನಿಮಗೆ ರಾಜ್ಯಸಭಾ ಸದಸ್ಯತ್ವ ಸಿಗುವುದಾದರೆ ಎನ್‌ಡಿಎ ● 9ನೇ ಪುಟಕ್ಕೆ





ದೇಶಕ್ಕೆ ಮೋದಿ, 'ಕಾವೇರಿ' ಉಳಿವಿಗೆ ಕುಮಾರಣ್ಣ ಅನಿವಾರ್ಯ

ಬಿಜೆಪಿ–ಜೆಡಿಎಸ್ ಸಮನ್ವಯ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ ಅಭಿಮತ


ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಶನಿವಾರ ಪಟ್ಟಣದ ಶ್ರೀ ಬಡಗೂಡಮ್ಮ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಜೆಡಿಎಸ್–ಬಿಜೆಪಿ ಕಾರ್ಯಕರ್ತರ ಸಮನ್ವಯ ಸಭೆಯನ್ನು ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ಉದ್ಘಾಟಿಸಿದರು. ಚಿತ್ರದಲ್ಲಿ ಸಂಸದ ಪ್ರತಾಪ್‌ಸಿಂಹ, ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇನ್ನಿತರರಿದ್ದಾರೆ.

ನಾಗಮಂಗಲ, ಮಾ.30– ದೇಶದ ಉಳಿವಿಗೆ ಪ್ರಧಾನಿ ಮೋದಿಯವರು ಎಷ್ಟು ಅಗತ್ಯವೋ ಅದೇ ರೀತಿ ನಮ್ಮ ಕಾವೇರಿಯ ಉಳಿವಿಗಾಗಿ ರಾಷ್ಟ್ರ ಮಟ್ಟದಲ್ಲಿ ರಾಜ್ಯದ ಧ್ವನಿಯಾಗಬಲ್ಲ ಕುಮಾರಸ್ವಾಮಿ ಅವರ ನಾಯಕತ್ವದ ಅಗತ್ಯವಿದೆ ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.

ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಶನಿವಾರ ಪಟ್ಟಣದ ಶ್ರೀ ಬಡಗೂಡಮ್ಮ ದೇವಾಲಯದ ಬಳಿ ಆಯೋಜಿಸಲಾಗಿದ್ದ ಜೆಡಿಎಸ್–ಬಿಜೆಪಿ ಕಾರ್ಯಕರ್ತರ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಮತ್ತು ಬಿಜೆಪಿ ಮುಖಂಡರ ಮನಸ್ಸಿನಲ್ಲಿ ಸಾಮರಸ್ಯದ ಸಮನ್ವಯತೆಯ ಇಚ್ಛಾಸಕ್ತಿ ಅನಾವರಣವಾಗಿದ್ದೇ ಆದರೆ ಗೆಲುವು ನಿಶ್ಚಿತ ಎಂಬುದಕ್ಕೆ ಈ ವೇದಿಕೆಯೇ ಸಾಕ್ಷಿ ಎಂದರು.

ಈ ಎರಡು ಪಕ್ಷಗಳ ಸಮನ್ವಯತೆಯ ಪ್ರಯತ್ನದ ಪ್ರತಿಫಲವಾಗಿ ಐತಿಹಾಸಿಕ ಗೆಲುವು ಸಾಧಿಸುವ ಕುಮಾರಣ್ಣ ಕೇಂದ್ರದಲ್ಲಿ ಸಚಿವರಾಗುತ್ತಾರೆ. ಅಂಬರೀಶ್ ನಂತರ ಕೇಂದ್ರ ಸಚಿವ ಸ್ಥಾನ ಮಂಡ್ಯಕ್ಕೆ ಸಿಕ್ಕಿಲ್ಲ. ಈ ಬಾರಿ ಒಳ್ಳೆಯ ಖಾತೆ ಪಡೆದು ಸಚಿವರಾಗುವ ಮೂಲಕ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗಬೇಕಿರುವ ಹಲವು ವಿಚಾರಗಳ ಸ್ಪಂದನೆಯ ಜೊತೆಗೆ ಕಾವೇರಿಯ ಉಳಿವಿಗಾಗಿ ಒಬ್ಬ ಉತ್ತಮ ಕಾವಲುಗಾರ ಕುಮಾರಸ್ವಾಮಿ ಆಗುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನೀರಾವರಿ ವಿಷಯದಲ್ಲಿ ಕರ್ನಾಟಕ ರಾಜ್ಯದ ಪಾಲಿಗೆ ಹೆಚ್.ಡಿ.ದೇವೇಗೌಡರ ಕೊಡುಗೆ ಪ್ರಾತಃ ಸ್ಮರಣೀಯ. ಅದೇ ನಿಟ್ಟಿನಲ್ಲಿ ದೇಶಕ್ಕೆ ಒಂದು ಒಳ್ಳೆಯ ನಾಯಕತ್ವ ನೀಡಿದ ಕೀರ್ತಿಗೆ ನಿಮ್ಮಗಳ ಮತದಾನ ಸಾರ್ಥಕವಾಗುತ್ತದೆ. ಆದ್ದರಿಂದ ಪಕ್ಷಾತೀತವಾಗಿ ಮತದಾನ ಮಾಡುವ ಮೂಲಕ ಕುಮಾರಣ್ಣನ ಐತಿಹಾಸಿಕ ಗೆಲುವು ಸಾಕ್ಷೀಕರಿಸಬೇಕು ಎಂದು ಮನವಿ ಮಾಡಿದರು.

ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಲೋಕಸಭಾ ಕ್ಷೇತ್ರದ ಹಾಲಿ ಸಂಸದರು, ಹಾಲಿ, ಮಾಜಿ ಶಾಸಕರು ಮಾತ್ರವಲ್ಲದೆ ಸ್ಥಳೀಯ ಕಾರ್ಯಕರ್ತರು ಮತ್ತು ಮುಖಂಡರ ಒತ್ತಾಯದ ಸಂದೇಶದ ಜೊತೆಗೆ ಪ್ರಧಾನಿ ಗಳು ಮತ್ತು ಕೇಂದ್ರ ಗೃಹ ಮಂತ್ರಿಗಳು ಸೇರಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಸಲಹೆಯಂತೆ ಕುಮಾರಸ್ವಾಮಿ ಅವರು ಮೈತ್ರಿ ಅಭ್ಯರ್ಥಿಯಾಗಿದ್ದಾರೆ. ಆದಾಗ್ಯೂ ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ನಮ್ಮ ತಂದೆಯವರ ಆರೋಗ್ಯದ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಅವರು ಇಷ್ಟೊಂದು ಕೀಳು ಮಟ್ಟದಲ್ಲಿ ಮಾತನಾಡುತ್ತಾರೆ ಎಂದು ನಾನು ಭಾವಿಸಿರಲಿಲ್ಲ. ಎಲ್ಲದಕ್ಕೂ ಕಾಲ ಉತ್ತರ ನೀಡಲಿದೆ. ಇದೇ ಏ.4ರಂದು ಕುಮಾರಸ್ವಾಮಿ ನಾಮಪತ್ರ ಸಲ್ಲಿಸಲಿದ್ದಾರೆ. ಎರಡೂ ಪಕ್ಷಗಳ ಕಾರ್ಯಕರ್ತರ ಜೊತೆಗೆ ಮತ ದಾರರ ಆಶೀರ್ವಾದವಿರಲಿ ಎಂದು ಮನವಿ ಮಾಡಿದರು.

ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ಮಾತನಾಡಿ, ಕೇವಲ ಒಂದು ಲೋಕಸಭಾ ಕ್ಷೇತ್ರಕ್ಕೆ ಸೀಮಿತವಾಗದೇ ರಾಜ್ಯ ಮಟ್ಟದಲ್ಲಿ ನಾಯಕತ್ವ ಹೊಂದಿರುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮುಖಂಡರ ಮತ್ತು ಕಾರ್ಯಕರ್ತರ ಒತ್ತಾಸೆಯಂತೆ ಎನ್‌ಡಿಎ ಮೈತ್ರಿ ಕೂಟದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವುದು ಮಂಡ್ಯದ ಪಾಲಿಗೆ ಅದೃಷ್ಟ ಎಂದು ಅಭಿಪ್ರಾಯಿಸಿದರು. ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಮ್ಮತವಾಗಿ 1.50 ಲಕ್ಷ ಮತಗಳನ್ನು ಕುಮಾರಸ್ವಾಮಿ ಅವರಿಗೆ ಹಾಕಿಸುತ್ತೇವೆ ಎಂದರು. ● 9ನೇ ಪುಟಕ್ಕೆ

ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳಿಗೆ ನಾಳೆ ಮೈಸೂರಲ್ಲಿ ಅಭಿನಂದನೆ



ಮೈಸೂರು, ಮಾ.30(ಜಿಎ)–ವಿದ್ಯಾರಣ್ಯಪುರಂನ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಏ.1ರಂದು ಸಂಜೆ 5.30 ಗಂಟೆಗೆ ನಗರದ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಎಸ್.ರವಿಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವಪ್ರಸನ್ನ ತೀರ್ಥರು ಅಯೋಧ್ಯೆಯಲ್ಲಿ ಬಾಲ ರಾಮಚಂದ್ರ ದೇವರನ್ನು ಪ್ರತಿಷ್ಠಾಪನೆ ಮಾಡಿ 48 ದಿನಗಳ ಕಾಲ ಮಂಡಲೋತ್ಸವ ಹಾಗೂ ಮಂಗಳೋತ್ಸವ ಮುಗಿಸಿಕೊಂಡು ಏ.1ರಂದು ನಗರಕ್ಕೆ ಆಗಮಿಸುತ್ತಿದ್ದಾರೆ. ಹೀಗಾಗಿ ಇವರನ್ನು ಅಭಿನಂದಿಸಲಾಗುವುದು. ಹಾಗೇ ಬಾಲರಾಮನ ಮೂರ್ತಿ ಕೆತ್ತಿದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಹಾಗೂ ಅಯೋಧ್ಯೆಯಲ್ಲಿ ಸುಧಾ ಮಂಗಳ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 14 ಮಂದಿ ಯುವ ವಿದ್ವಾಂಸರನ್ನೂ ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ಜಯಶ್ರೀ ಇದ್ದರು.

ಅಪೋಲೋ ಫಾರ್ಮಸಿ 6000ನೇ ಮಳಿಗೆ ಉದ್ಘಾಟನೆ



ಮೈಸೂರಿನ ಕುವೆಂಪುನಗರದ ಜೆಸಿಎಸ್‌ಟಿ ಲೇಔಟ್, ಕುವೆಂಪುನಗರ ಬಸ್ ನಿಲ್ದಾಣದ ಎದುರು ಅಪೋಲೋ ಫಾರ್ಮಸಿ ತನ್ನ 6000ನೇ ಮಳಿಗೆಯನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆಯ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಉದ್ಘಾಟಿಸಿದರು. ಅಪೋಲೊ ಬಿಜಿಎಸ್ ಆಸ್ಪತ್ರೆಗಳು, ಆಪರೇಷನ್ಸ್ ಮತ್ತು ಯುನಿಟ್ ಹೆಡ್ ಉಪಾಧ್ಯಕ್ಷ ಎನ್.ಜಿ.ಭರತೀಶ್ ರೆಡ್ಡಿ, ಅಪೊಲೊ ಫಾರ್ಮಸೀಸ್ ಲಿಮಿಟೆಡ್‌ನ ಸಿಇಒ ಪಿ. ಜಯಕುಮಾರ್ ಉಪಸ್ಥಿತರಿದ್ದರು.

ಇಂದು, ನಾಳೆ ಕುಸ್ತಿ ಪಂದ್ಯಾವಳಿ



ಮೈಸೂರು, ಮಾ.30(ಜಿಎ)–ಮೈಸೂರಿನ ರಮ್ಮನಹಳ್ಳಿಯ ಮಾರಮ್ಮ ದೇವಿ ಜಾತ್ರೆ ಪ್ರಯುಕ್ತ ಮಾ.31 ಮತ್ತು ಏ.1ರಂದು ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ವ್ಯವಸ್ಥಾಪಕ ಶಿವು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 31ರಂದು ಬೆಳಗ್ಗೆ 7ರಿಂದ ಪಾಯಿಂಟ್ ಕುಸ್ತಿ ತಯಾರಿ ನಡೆಯಲಿದ್ದು, ಸುಮಾರು 500 ಮಂದಿ ಭಾಗವಹಿಸುವರು. ಏ.1ರಂದು ನಾಡಕುಸ್ತಿ ಟೂರ್ನಿ ನಡೆಯಲಿದ್ದು 30 ಜೋಡಿಗಳು ಭಾಗವಹಿಸಲಿವೆ. ಒಂದು ಜೊತೆ ಮಹಿಳಾ ತಂಡವು ಸ್ಪರ್ಧಿಸಲಿದೆ. ಸರ್ವರಿಗೂ ಉಚಿತ ಪ್ರವೇಶವಿದೆ ಎಂದರು.

ರಾಜ್ಯ ಸರ್ಕಾರವು ಇತರೆ ಕ್ರೀಡೆಗಳಂತೆ ಕುಸ್ತಿಯನ್ನು ಪೋಷಿಸಲು ಅನುದಾನ ನೀಡಬೇಕು. ಆರ್ಥಿಕವಾಗಿ ಹಿಂದುಳಿದಿರುವ ಮತ್ತು ಮಧ್ಯಮ ವರ್ಗ ಕುಟುಂಬದ ಯುವಕರು ಮಾತ್ರ ಕುಸ್ತಿ ಪಟುವಾಗಲು ಶ್ರಮಿಸುತ್ತಾರೆ. ಹಾಗೇ ಕುಸ್ತಿ ಪರಂಪರೆಯನ್ನು ಉಳಿಸುತ್ತಾರೆ. ಆದ್ದರಿಂದ ಸರ್ಕಾರ ಕುಸ್ತಿಯನ್ನು ಪೋಷಿಸಬೇಕಿದೆ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ರವಿ, ಅಮೃತ್ ಪುರೋಹಿತ್, ಕುಮಾರ್, ರಮೇಶ್, ಮಧು ಉಪಸ್ಥಿತರಿದ್ದರು.

ಮೈಸೂರು–ಕೊಡಗು ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧೆ

ಮೈಸೂರು, ಮಾ.30(ಜಿಎ)–ಕೆ.ಆರ್. ನಗರ ಮೂಲದವರಾದ ತಾವು ಕರ್ನಾಟಕ ಆದಿ ಕರ್ನಾಟಕ ಯುವ ಜನ ಜಾಗೃತಿ ಮಹಾಸಭಾ ಅಧ್ಯಕ್ಷರೂ ಆಗಿದ್ದು, ಈ ಬಾರಿಯ ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದಾಗಿ ಡಿ.ರಾಮಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ರಾಜಕೀಯ ಪಕ್ಷಗಳು ದಲಿತರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುತ್ತಿಲ್ಲ. ಆದ್ದರಿಂದ ದಲಿತರು ರಾಜಕೀಯದಿಂದ ವಂಚಿತರಾಗಿದ್ದು, ಅಭಿವೃದ್ಧಿಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಬಾರಿ ಮತದಾರರು ನನಗೆ ಮತ ನೀಡಿದರೆ, ಮೈಸೂರು–ಕೊಡಗಿನ ಅಭಿವೃದ್ಧಿ ಮಾಡಲು ಶ್ರಮಿಸುತ್ತೇನೆ. ಈ ಚುನಾವಣೆಯಲ್ಲಿ ದಲಿತ ಸಮುದಾಯದವರು ತಮ್ಮ ಮತ ಯಾರಿಗೆ ಹಾಕಬೇಕೆಂಬ ಬಗ್ಗೆ ತಾವೇ ನಿರ್ಧಾರ ಮಾಡಿಕೊಳ್ಳಬೇಕು. ಜಾಗೃತರಾಗಿ ಮತ ಚಲಾಯಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಟಿ.ರಾಮಸ್ವಾಮಿ, ಕುಮಾರಸ್ವಾಮಿ, ಕೆ.ಆರ್.ಮಂಜು ಉಪಸ್ಥಿತರಿದ್ದರು.

ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ

ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ



ಮೈಸೂರು,ಮಾ.30–ಮೈಸೂರಿನ ಜೆಪಿ ನಗರದಲ್ಲಿರುವ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಕರುನಾಡ ಸೇವಾ ಸೇನೆ ವತಿಯಿಂದ ಕರ್ನಾಟಕ ರತ್ನ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕರುನಾಡು ಸೇವಾ ಸೇನೆ ಸಂಸ್ಥಾಪಕ ಅಧ್ಯಕ್ಷ ಬಿ.ಗಣೇಶ್ ಪಂದ್ಯಾವಳಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸರಳತೆ ಮತ್ತು ಪರೋಪಕಾರ ಗುಣಗಳನ್ನು ಅಳವಡಿಸಿಕೊಂಡು ಸಾಮಾಜಿಕ ಕಾರ್ಯಗಳಲ್ಲಿ ಎಲೆಮರೆ ಕಾಯಿಯಂತೆ ಕೆಲಸ ಮಾಡುತ್ತಿದ್ದ ಪುನೀತ್ ರಾಜ್ ಕುಮಾರ್ ಮಾನವೀಯ ಮೌಲ್ಯಗಳ ಗಣಿ ಆಗಿದ್ದರು ಎಂದು ಹೇಳಿದರು.

ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾಘವೇಂದ್ರ, ಸೇನಾ ಕಾರ್ಯದರ್ಶಿ ಕೆ.ಮುರಳಿ, ಸಂಘಟನಾ ಕಾರ್ಯದರ್ಶಿ ಎನ್.ನಂದೀಶ್, ವಿ.ಕುಮಾರಸ್ವಾಮಿ, ನಗರ ಕಾರ್ಯದರ್ಶಿ ಚೇತನ್, ಹೇಮಂತ್ ದಿಲೀಪ್, ಕುಮಾರ್, ಅನಂತ ನಾಗ್, ಸಾಧಿಕ್, ನಿಶಾದ್, ಅನಿಲ್ ಕುಮಾರ್ ಇನ್ನಿತರರು ಹಾಜರಿದ್ದರು.

ಕಂಪ್ಯೂಟರ್ ಶಿಕ್ಷಕರ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಮಾ.30–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮತ್ತು ಎಸ್‌ಎಸ್ ಎಸ್‌ಐಟಿ ಸಲ್ಯೂಷನ್ಸ್ ಸಹಯೋಗದಲ್ಲಿ ಮಾಂಟೆಸರಿ ಶಿಕ್ಷಕರ ತರಬೇತಿ ಹಾಗೂ ಕಂಪ್ಯೂಟರ್ ಶಿಕ್ಷಕರ ತರಬೇತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. 2024–25ನೇ ಸಾಲಿನ ಕಲಿಕಾ ತರಬೇತಿಯ ಶಿಬಿರ ಇದಾಗಿದ್ದು, ನುರಿತ ಶಿಕ್ಷಕರಿಂದ ಮಾಂಟೆಸರಿ ತರಬೇತಿಯ ಹಂತಗಳು, ಮಕ್ಕಳ ಮನೋವಿಕಾಸ, ಕಂಪ್ಯೂಟರ್ ತರಬೇತಿ ಮಾರ್ಗದರ್ಶನ ಕುರಿತಂತೆ ಪ್ರಾಯೋಗಿಕ ಮತ್ತು ಸಿದ್ಧಾಂತಿಕ ತರಗತಿಗಳು ನಡೆಯಲಿವೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಮುಗಿಸಿರುವ 18ರಿಂದ 55ರ ವಯೋಮಿತಿಯ ಎಲ್ಲಾ ವರ್ಗದ ಆಸಕ್ತರು ಈ ತರಬೇತಿಯ ಫಲಾನುಭವಿಗಳಾಗಿರುತ್ತಾರೆ. ಗೃಹಿಣಿಯರು, ಉದ್ಯೋಗಸ್ಥರು ಮತ್ತು ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ತರಬೇತಿಯ ಸೌಲಭ್ಯವನ್ನೂ ಸಹ ಒದಗಿಸಲಾಗುತ್ತದೆ. ಅರ್ಜಿಗಳನ್ನು ಪಡೆಯಲು ಏ.5 ಕಡೆಯ ದಿನವಾಗಿರುತ್ತದೆ. ಮಾಹಿತಿ, ನೋಂದಣಿಗೆ ಮೊ. 8310306882, 9964790442

ಮಹಿಳೆಯ ಆರೋಗ್ಯ ಚೆನ್ನಾಗಿದ್ದರೆ ಕುಟುಂಬದ ಆರೋಗ್ಯವೂ ಉತ್ತಮವಾಗಿರುತ್ತದೆ

ಕಾವೇರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞರಾದ ಡಾ.ಸರಳ ಚಂದ್ರಶೇಖರ್ ಅಭಿಮತ



ಮೈಸೂರು, ಮಾ. 30– ಮಹಿಳೆ ತನ್ನ ಆರೋಗ್ಯದ ಕಡೆ ಗಮನ ಕೊಡಬೇಕು. ಮಹಿಳೆಯ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ಕುಟುಂಬದ ಆರೋಗ್ಯ ಚೆನ್ನಾಗಿರುತ್ತದೆ ಎಂದು ಕಾವೇರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞರಾದ ಡಾ. ಸರಳ ಚಂದ್ರಶೇಖರ್ ತಿಳಿಸಿದರು.

ನೇಗಿಲ ಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಮಹಿಳಾದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆ ನಾನಾ ಜವಾಬ್ದಾರಿಯ ನಡುವೆ ಆರೋಗ್ಯವನ್ನು ನಿರ್ಲಕ್ಷಿಸಬಾರದು. ಉತ್ತಮ ಆರೋಗ್ಯ ಕಾಪಾಡಿಕೊಂಡರೆ ಕುಟುಂಬ ಆರೋಗ್ಯದಿಂದ ಇರುತ್ತದೆ. ಸಮಾಜ, ದೇಶ ಆರೋಗ್ಯದಿಂದ ಇರುತ್ತದೆ. ಆಗ ತೊಟ್ಟಿಲು ತೂಗಬಲ್ಲ ಕೈಗಳು ಜಗತ್ತನ್ನೇ ತೂಗಬಲ್ಲವಾಗುತ್ತವೆ ಎಂದರು.

ಕಾಲ ಮುಂದುವರಿದರೂ ಇಂದಿಗೂ ಮಹಿಳೆ ಶೋಷಣೆಗೆ ಒಳಗಾಗುತ್ತಿರುವುದು ಬೇಸರದ ಸಂಗತಿ. ಶಿಕ್ಷಣದ ಕೊರತೆಯಿಂದಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಮಹಿಳೆ ಸೂಕ್ತ ಶಿಕ್ಷಣ ಪಡೆಯಬೇಕು. ಅಲ್ಲದೆ ಸರ್ಕಾರಗಳು ಸ್ತ್ರೀಯರ ಏಳ್ಗೆಗೆ ತಂದಂತಹ ಅಂಥ ಯೋಜನೆಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಮಹಿಳೆಯರು ಆರ್ಥಿಕವಾಗಿ ಸದೃಢರಾಗಬೇಕು. ಕಷ್ಟ ಕಾಲದ ಆಪತ್ತಿಗಾಗಿ ಹೂಡಿಕೆಯಂತಹ ಪ್ರಕ್ರಿಯೆಯಲ್ಲೂ ತೊಡಗಬೇಕು. ಪೋಷಕರು ಹೆಣ್ಣು ಮಕ್ಕಳಿಗೆ ಆಸ್ತಿ ಮಾಡುವುದರ ಬದಲಿಗೆ ಅವರಿಗೆ ಒಳ್ಳೆಯ ಶಿಕ್ಷಣ ನೀಡಿದರೆ ಅದೇ ಒಂದು ದೊಡ್ಡ ಹೂಡಿಕೆಯಾಗುತ್ತದೆ ಎಂದರು.

ಕೆ.ಎಸ್.ಓ.ಯು ಕಾನೂನು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಾನ್ಹವಿ ಮಾತನಾಡಿ, ಭಾರತದಲ್ಲಿ ವಿವಾಹ ವಿಚ್ಛೇದನಾ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪತಿ ಪತ್ನಿಯರ ನಡುವೆ ತನ್ನದೆ ಸರಿ ಎನ್ನುವ ಮನೋಭಾವನೆ ಇದಕ್ಕೆ ಕಾರಣವಾಗಿದೆ. ಕುಟುಂಬದಲ್ಲಿ ಯಾರಾದರು ಒಬ್ಬರು ಸೋಲುವುದನ್ನು ಕಲಿಯಬೇಕು. ಸೋತರೆ ಮಾತ್ರ ಸಂಬಂಧ ಉಳಿಯುತ್ತದೆ. ಒಮ್ಮೆ ಸೋತು ಜೀವನವನ್ನು ಗೆಲ್ಲಬೇಕು ಎಂದರು.

ಮೈ.ವಿ.ವಿ ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್‌ನ ಸಹಾಯಕ ಪ್ರಾಧ್ಯಾಪಕಿ ಮೈಸೂರು ಡಾ.ಎಸ್. ಯಶಸ್ವಿನಿ, ಬಿಕೆಜಿ ಆಸ್ಪತ್ರೆ ಗೈನಕಾಲಜಿಸ್ಟ್ ಡಾ.ಡಿ.ಆರ್.ರಮ್ಯ, ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸಿ.ಸುಚೇತನ, ಡೆಕ್ಕನ್ ಹೆರಾಲ್ಡ್ ಹಿರಿಯ ವರದಿಗಾರ್ತಿ ಪಿ.ಶಿಲ್ಪ, ವೈದ್ಯೆ ಡಾ.ಎಚ್.ಸಿ.ಶೈಲಜಾ ರಾಣಿ ಮತ್ತು ಕರ್ನಾಟಕ ಕ್ರಿಕೆಟ್ ಮಹಿಳಾ ತಂಡದ ಮಾಜಿ ನಾಯಕಿ ರಕ್ಷಿತಾ ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು.

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ರಾಗಿಯಿಂದ ಮಾಡಿದ ಅಡುಗೆಗಳ ಸ್ಪರ್ಧೆಯಲ್ಲಿ ಮಮತಾ ಪ್ರಿಯಾ ಶ್ರೀನಿವಾಸ್ ದ್ವಿತೀಯ, ಸುಧಾ ಶ್ರೀನಿವಾಸ್ ತೃತೀಯ, ತೋರಣ ಕಟ್ಟುವ ಸ್ಪರ್ಧೆಯಲ್ಲಿ ಶ್ವೇತಾ ಪ್ರಥಮ, ಸುಶೀಲ ದ್ವಿತೀಯ ಮತ್ತು ರೇಣುಕಾ ತೃತೀಯ ಬಹುಮಾನ ಪಡೆದರು. ಅ ಆ ಇ ಈ ವೇಗವಾಗಿ ಬರೆಯುವ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಸೌಮ್ಯಶ್ರೀ, ದ್ವಿತೀಯ ಬಹುಮಾನವನ್ನು ಪ್ರಭಾ ಲೋಕೇಶ್ ಹಾಗೂ ತೃತೀಯ ಬಹುಮಾನವನ್ನು ಪ್ರಿಯ ಶ್ರೀನಿವಾಸ್ ಪಡೆದರು. ನೇಗಿಲ ಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಜೆ ಶೋಭಾ ರಮೇಶ್ ವಂದಿಸಿದರು. ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಮೈಸೂರು ಅಧ್ಯಕ್ಷ ರವಿಕುಮಾರ್, ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘ ಮೈಸೂರು ಕಾರ್ಯದರ್ಶಿ ಬಿ.ಪಿ.ಉಷಾರಾಣಿ, ಖಜಾಂಚಿ ಅನಿತಾ ಹೇಮಂತ್, ನಿರ್ದೇಶಕರಾದ ಅನಿತ ಮನೋಹರ್, ಬಿ.ಹೆಚ್.ಲತಾ, ಮಂಜುಳಾ ಭದ್ರೇಗೌಡ, ಲಲಿತಾ ರಂಗನಾಥ್, ಸುವರ್ಣ ರಾಜ್, ಎಂ.ಪ್ರತಿಮಾ, ಗೌರಮ್ಮ, ಟಿ.ಎಂ. ಸವಿತಾ ಇನ್ನಿತರರು ಉಪಸ್ಥಿತರಿದ್ದರು.

ಕಾವೇರಿ ವಿಚಾರವಾಗಿ ರಾಷ್ಟ್ರಪತಿಗಳ ಮಧ್ಯಪ್ರವೇಶಕ್ಕಾಗಿ ಅಂಚೆ ಚಳುವಳಿ



ಕಾವೇರಿ ನೀರಿನ ವಿಚಾರವಾಗಿ ರಾಷ್ಟ್ರಪತಿಗಳು ಮಧ್ಯಸ್ಥಿಕೆ ವಹಿಸಬೇಕೆಂದು ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೈಸೂರಿನ ಕೇಂದ್ರ ಅಂಚೆ ಕಚೇರಿ ಮುಂಭಾಗ ಶನಿವಾರ ಅಂಚೆ ಚಳುವಳಿ ನಡೆಸಲಾಯಿತು.

ಮೈಸೂರು, ಮಾ.30(ಜಿಎ)–ಕಾವೇರಿ ನೀರಿನ ವಿಚಾರವಾಗಿ ರಾಷ್ಟ್ರಪತಿಗಳು ಮಧ್ಯಸ್ಥಿಕೆ ವಹಿಸುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಶನಿವಾರ ಮೈಸೂರಿನ ಅಶೋಕ ರಸ್ತೆಯಲ್ಲಿರುವ, ಕೇಂದ್ರ ಅಂಚೆ ಕಚೇರಿ ಮುಂಭಾಗ ಅಂಚೆ ಚಳುವಳಿ ನಡೆಸಲಾಯಿತು.

ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಈ ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿ, ರಾಜ್ಯದಲ್ಲಿರುವ ಬರದ ಸ್ಥಿತಿ ಕುರಿತು ಕಾವೇರಿ ಕ್ರಿಯಾ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರು ಕಾವೇರಿ ನೀರಿನ ಸಮಸ್ಯೆಯನ್ನು ಬರೆದು ರಾಷ್ಟ್ರಪತಿಗಳಿಗೆ ಅಂಚೆ ಪತ್ರವನ್ನು ರವಾನಿಸಿದರು.

ಈ ವೇಳೆ ಸಮಿತಿ ಅಧ್ಯಕ್ಷ ಜಯಪ್ರಕಾಶ್ (ಜೆಪಿ) ಮಾತನಾಡಿ, ಈ ಬಾರಿ ಹಿಂದೆಂದೂ ಕಂಡರಿಯದಂತಹ ಭೀಕರ ಬರ ರಾಜ್ಯದಲ್ಲಿ ಉದ್ಭವಿಸಿದೆ. ನಮಗೆ ಇಲ್ಲಿ ಕುಡಿಯಲೇ ನೀರಿಲ್ಲ. ಇಂತಹ ಸಮಯದಲ್ಲೂ ಕಾವೇರಿ ನ್ಯಾಯ ಮಂಡಳಿ, ತಮಿಳುನಾಡಿನ ಅಣೆಕಟ್ಟೆಗಳಲ್ಲಿ ನೀರು ಬಹಳ ತುಂಬಿದ್ದರು ನೀರು ಹರಿಸಲು ಆದೇಶಿಸುತ್ತಿರುವುದು ಅತ್ಯಂತ ಖಂಡನೀಯ ಎಂದರು.

ಈಗಾಗಲೇ ನಮ್ಮ ಕಾವೇರಿ ಕೊಳ್ಳಗಳಲ್ಲಿ ನೀರು ಬರಿದಾಗಿ ಕುಡಿಯಲೇ ನೀರಿಲ್ಲ. ಈ ಪರಿಸ್ಥಿತಿಯಲ್ಲಿ ಈ ಕೂಡಲೇ ರಾಷ್ಟ್ರಪತಿಗಳು ಮಧ್ಯಸ್ಥಿಕೆಯನ್ನು ವಹಿಸಿ ಅಲ್ಪಸ್ವಲ್ಪ ಉಳಿದಿರುವ ನೀರನ್ನು ನಮಗೆ ಕುಡಿಯಲು ಅನುವು ಮಾಡಿಕೊಡಬೇಕು, ನಮಗೆ ಶಾಶ್ವತವಾದ ಪರಿಹಾರವನ್ನು ರಾಷ್ಟ್ರಪತಿಗಳು ನೀಡಲೇಬೇಕೆಂದು ಒತ್ತಾಯಿಸಿದರು.

ಈ ವೇಳೆ ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ಬೋಗಾದಿ ಸಿದ್ದೇಗೌಡ, ಸಿಂಧುವಳ್ಳಿ ಶಿವಕುಮಾರ್, ಕೃಷ್ಣಪ್ಪ, ನೇಹಾ, ಮಹದೇವಸ್ವಾಮಿ, ಶಿವಲಿಂಗಯ್ಯ, ಪ್ರಭುಶಂಕರ್, ರವೀಶ್, ಬಾಲಕೃಷ್ಣ ಮಂಜುಳಾ, ಸೋಮೇಗೌಡ, ಅಶೋಕ್, ಹನುಮಂತಯ್ಯ, ಪ್ರಭಾಕರ, ಮಹಾದೇವ, ವಿಷ್ಣು, ರಮೇಶ್ ಮತ್ತಿತರರಿದ್ದರು.

ಅಥ್ಲೆಟಿಕ್ಸ್‌ನಲ್ಲಿ ವಿದ್ಯಾವರ್ಧಕ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನ


ಮೈಸೂರು, ಮಾ. 30– ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರಿದ್ದಾರೆ. ಮೈಸೂರು ನಗರ ಅಂತರ ಕಾಲೇಜುಗಳ ಅಥ್ಲೆಟಿಕ್ಸ್ ಕೂಟದಲ್ಲಿ ತೃತೀಯ ಬಿಬಿಎ ವಿದ್ಯಾರ್ಥಿ ದರ್ಶನ್ ಟಿ.ಎಸ್. 100 ಮೀಟರ್ ಓಟದಲ್ಲಿ ಬೆಳ್ಳಿ ಪದಕ, ದ್ವಿತೀಯ ಬಿ.ಕಾಂ ವಿದ್ಯಾರ್ಥಿ ನಿತಿನ್.ಎಂ.ಎನ್. ಜಾವಲಿನ್ ಎಸೆತದಲ್ಲಿ ಬೆಳ್ಳಿಪದಕ ಹಾಗೂ ತೃತೀಯ ಬಿಕಾಂ ವಿದ್ಯಾರ್ಥಿಯಾದ ರವಿಕುಮಾರ್ ಹೆಚ್.ಎನ್ ಡಿಸ್ಕಸ್ ಎಸೆತದಲ್ಲಿ ಕಂಚಿನ ಪದಕವನ್ನು ಪಡೆದಿದ್ದಾರೆ.

ನಗರ ಅಂತರ ಕಾಲೇಜು ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ತೃತೀಯ ಬಿ.ಕಾಂ ವಿದ್ಯಾರ್ಥಿ ಶರತ್ ಪಾಟೀಲ್ ಸಿ ಚಿನ್ನದ ಪದಕ ಹಾಗೂ ಮಹಿಳೆಯರ ವಿಭಾಗದ ವೇಟ್ ಲಿಫ್ಟಿಂಗ್‌ನಲ್ಲಿ ಪ್ರಥಮ ಬಿ.ಕಾಂ ವಿದ್ಯಾರ್ಥಿನಿ ತೇಜಸ್ವಿನಿ.ಆರ್ ಬೆಳ್ಳಿ ಪದಕ ಮತ್ತು ರೇಣ್ಸಿ ಎಸ್. ಕಂಚಿನ ಪದಕ ಪಡೆದಿದ್ದಾರೆ. ಹಾಗೂ ನಗರ ಅಂತರ ಕಾಲೇಜುಗಳ ಉತ್ತಮ ದೇಹದಾರ್ಢ್ಯ ಸ್ಪರ್ಧೆಯಲ್ಲಿ ದ್ವಿತೀಯ ಬಿಸಿಎ ವಿದ್ಯಾರ್ಥಿ ಕುಮಾರಸ್ವಾಮಿಗೌಡ.ಸಿ.ಆರ್. 75 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಪಡೆದಿರುತ್ತಾರೆ. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿಗಳಾದ ಶೈಲ ರಾಮಣ್ಣವರ್, ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಮತ್ತು ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ನ್.ಹರಿಪ್ರಸಾದ್ ಹಾಗೂ ಪ್ರೊ.ಕುಮುದ ಕ್ರೀಡಾಪಟುಗಳನ್ನು ಅಭಿನಂದಿಸಿದ್ದಾರೆ.



ವಿಜೇತ ಕ್ರೀಡಾಪಟುಗಳನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.03.2024 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ

■ **ಪರಮಹಂಸ ಯೋಗ ಮಹಾವಿದ್ಯಾಲಯ, ಅಂತರರಾಷ್ಟ್ರೀಯ ಯೋಗ ಶಾಲೆ, ಅಂತರರಾಷ್ಟ್ರೀಯ ಯೋಗ ಸಂಸ್ಥೆ :** ರಜಾ ಮಜಾ ಆಟ ಕಲಿಕೆಗಳ ಬೇಸಿಗೆ ಶಿಬಿರ, ಉಪಸ್ಥಿತರು : ಅಂತರರಾಷ್ಟ್ರೀಯ ಯೋಗ ತರಬೇತುದಾರ ಶಿವಪ್ರಕಾಶ್ ಗುರೂಜಿ, ರಂಗ ನಿರ್ದೇಶಕ ಅರಸೀಕೆರೆ ಯೋಗಾನಂದ, ಪರಮಹಂಸ ಯೋಗ ಮಹಾವಿದ್ಯಾಲಯ ನಿರ್ದೇಶಕರಾದ ಡಾ. ಆರ್. ಭಾವನ, ಮನೋ ತರಬೇತುದಾರ ಸುಧೀ ಸುಬ್ರಮಣ್ಯ, ಸಂಗೀತ ವಿದುಷಿ ಶ್ರೀಮತಿ ಬಿ.ವಿ. ವಸಂತಲಕ್ಷ್ಮೀ, ಅಂತರರಾಷ್ಟ್ರೀಯ ಚಿನ್ನದ ಪದಕ ವಿಜೇತರಾದ ಕು. ಭಾರತೀ, ವಿದುಷಿ ಶ್ರೀಮತಿ ವಿ.ಆರ್. ವರ್ಷ, ಶಾರೀರಿಕ ಪ್ರಮುಖ್ ಮಂಜುನಾಥ್, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಬೆಳಗ್ಗೆ 9.30ಕ್ಕೆ.

■ **ಕಲಾಸುರುಚಿ ಹಾಗೂ ದೇವಗೀತಂ ಚಾರಿಟಬಲ್ ಟ್ರಸ್ಟ್:** ಸಂಗೀತ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಯ ಮೂಲಕ ಅಂಬಾಬಾಯಿಯವರ ಜೀವನ–ಕೃತಿ ದರ್ಶನ ಕುರಿತು ಡಾ.ಟಿ.ಎಸ್.ಸತ್ಯವತಿ ಮತ್ತು ಡಾ.ಶಾಂತಾ ನಾಗರಾಜ್ ಅವರೊಂದಿಗೆ ಸಂವಾದ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಓಪನ್ ಫೋರಂ :** ಅಸೋಸಿಯೇಷನ್ ಆಫ್ ಡೆಮೊಕ್ರಾಟಿಕ್ ರಿಫಾರ್ಮ್ ಅಧ್ಯಕ್ಷ ಪ್ರೊ. ತ್ರಿಲೋಚನ್ ಶಾಸ್ತ್ರಿ ಅವರಿಂದ ಚುನಾವಣಾ ಬಾಂಡ್‌ಗಳು ಮತ್ತು ರಾಜಕೀಯ ನಿಧಿ ಕುರಿತು ಉಪನ್ಯಾಸ, ಸ್ಥಳ: ವಿಜಯನಗರ 4ನೇ ಹಂತದಲ್ಲಿರುವ ಕಲ್ಪ ಕ್ಷೇತ್ರ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಸಂಶೋಧಕ ಡಾ. ಸಂತೋಷ ಹಾನಗಲ್ಲ ಅವರ ವೀರ ಸೌದಾಮಿನಿ ಕಿತ್ತೂರು ರಾಣಿ ಚನ್ನಮ್ಮ ಚಿತ್ರಸಂಪುಟ ಲೋಕಾರ್ಪಣೆ ಸಮಾರಂಭ, ಶುಭ ನುಡಿ: ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಚಿತ್ರ ಸಂಪುಟ ಲೋಕಾರ್ಪಣೆ: ಹಿರಿಯ ಸಂಸ್ಕೃತಿ ಚಿಂತಕ ಪ್ರೊ. ಎಸ್.ಜಿ.ಸಿದ್ದರಾಮಯ್ಯ, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಪ್ರಾಸ್ತಾವಿಕ ನುಡಿ: ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಡಾ.ಎಂ.ಎಸ್.ಶಶಿಕಲಾಗೌಡ, ಡಾ.ವೈ.ಡಿ. ರಾಜಣ್ಣ, ಡಾ. ಸಂತೋಷ ಹಾನಗಲ್ಲ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಅಭಿನವ ಶಂಕರಾಲಯ:** ಶತಮಾನೋತ್ಸವ ಸಂಭ್ರಮಾಚರಣೆ, ಬೆಳಗ್ಗೆ 9ಕ್ಕೆ ಮಹಾರುದ್ರ ಮತ್ತು ಶತಚಂಡಿ ಮಹಾಯಾಗದ ಸಂಕಲ್ಪ, ಬೆಳಗ್ಗೆ 10.30ಕ್ಕೆ ಸಾರ್ವಜನಿಕ ದರ್ಶನ ಪಾದಪೂಜೆ ಮತ್ತು ಭಿಕ್ಷಾವಂದನೆ, ಸಂಜೆ 4.30ಕ್ಕೆ ವಿವಿಧ ದೇವಾಲಯಗಳು ಹಾಗೂ ಸಂಘ ಸಂಸ್ಥೆಗಳಿಗೆ ಭೇಟಿ, ಸಂಜೆ 7 ರಿಂದ 8:30 ವಿದ್ವಾನ್ ಹೆಚ್.ಎಲ್.ಶಿವಶಂಕರಸ್ವಾಮಿ ಮತ್ತು ತಂಡದವರಿಂದ ಲಯಶಂಕರ ಸಂಗೀತ ಮೇಳ, ಸ್ಥಳ:ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.

■ **ಜಿಪಿಐಇಆರ್ :** ರಾಷ್ಟ್ರೀಯ ರಂಗೋತ್ಸವ, ಬೆಳಗ್ಗೆ 10.30ಕ್ಕೆ ರಾಷ್ಟ್ರೀಯ ವಿಚಾರಗೋಷ್ಠಿ, ಉದ್ಘಾಟನೆ: ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಆಶಯ ನುಡಿ: ರಂಗಕರ್ಮಿ ಅಬ್ದುಲ್ ಕರೀಮ್, ಅಧ್ಯಕ್ಷತೆ: ಹಿರಿಯ ಕಲಾವಿದ ಮೈಮ್ ರಮೇಶ್, ಬೆಳಗ್ಗೆ 11ರಿಂದ ಗೋಷ್ಠಿ 1 ವಿಷಯ: ಪರಿಣಾಮಕಾರಿ ಶಿಕ್ಷಣದಲ್ಲಿ ರಂಗಭೂಮಿಯ ಪಾತ್ರ, ವಿಚಾರ ಮಂಡನೆ: ಹಿರಿಯ ರಂಗ ನಿರ್ದೇಶಕ ಪ್ರೊ. ಎಚ್.ಎಸ್. ಉಮೇಶ್, ಪ್ರತಿಸ್ಪಂದನೆ: ಹಿರಿಯ ರಂಗ ನಿರ್ದೇಶಕ ಪ್ರೊ.ಎಸ್.ಆರ್.ರಮೇಶ್, ನಿವೃತ್ತ ಸಹ ಪ್ರಾಧ್ಯಾಪಕ ಡಾ.ಡಿ.ಶೀಲಾಕುಮಾರಿ, ಅಧ್ಯಕ್ಷತೆ: ಚಿಂತಕ ನಾ.ದಿವಾಕರ, ಮಧ್ಯಾಹ್ನ 2ರಿಂದ ಗೋಷ್ಠಿ 2 ವಿಷಯ: ಸಮಕಾಲೀನ ಸಂದರ್ಭದಲ್ಲಿ ವೃತ್ತಿ ಮತ್ತು ಉದ್ಯಮವಾಗಿ ರಂಗಭೂಮಿ, ವಿಚಾರ ಮಂಡನೆ: ಹಿರಿಯ ರಂಗಕರ್ಮಿ ಶಶಿಧರ್ ಭಾರಿಘಟ್, ಪ್ರತಿಸ್ಪಂದನೆ: ರಂಗ ನಿರ್ದೇಶಕ ಯತೀಶ್ ಕೊಳ್ಳೇಗಾಲ, ಲೇಖಕ ಗಣೇಶ್ ಅಮೀನಗಡ, ಅಧ್ಯಕ್ಷತೆ: ಹಿರಿಯ ರಂಗ ನುಡಿ: ಹಿರಿಯ ರಂಗ ನಿರ್ದೇಶಕ ಬಿ.ಸುರೇಶ್, ಸಂಜೆ 6ಕ್ಕೆ ರಾಷ್ಟ್ರೀಯ ರಂಗೋತ್ಸವ ಸಮಾರೋಪ ಸಮಾರಂಭ, ಸಮಾರೋಪ ಪ್ರೊ. ಎಸ್.ಆರ್. ರಮೇಶ್, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಹೆಚ್.ಎಸ್. ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಹಿರಿಯ ಕಲಾವಿದ ಮೈಮ್ ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಜಯಾ ರಾಜಶೇಖರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು– ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ–ಡಾ.ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಪ್ರೊ. ಲಕ್ಷ್ಮೀನಾರಾಯಣ ಅರೋರಾ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು –ಬಿ.ಆರ್.ಛಾಯಾ, 9.40 ನಮ್ಮ ಆರೋಗ್ಯ–ಸಂತಾನಹೀನತೆಗೆ ಆಯುರ್ವೇದ ಪರಿಹಾರ ಕುರಿತು ಆಯುರ್ವೇದ ತಜ್ಞರಾದ ಡಾ.ಪುನೀತ್‌ಕುಮಾರ್ ಪಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಸತ್ಯಸಾಯಿ ವಿದ್ಯಾಸಂಸ್ಥೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ– ಸದ್ವಿದ್ಯಾ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ವೃಂದಗಾನ, 12.45 ಜನಪದಸಂಗೀತ–ಬನ್ನೂರು ಬೇವಿನಹಳ್ಳಿಯ ನಂಜಮ್ಮ ಮತ್ತು ಸಂಗಡಿಗರು, 1.00 ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಕಾರ್ಯಕ್ರಮ, 1.20 ಭಾವಗೀತೆ, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಕಾದಂಬರಿ', 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಕುಮಾರ ವಿಜಯ–ಶಸ್ತ್ರ ಸನ್ಯಾಸ, ಪ್ರಸ್ತುತಿ– ಪೈವಳಿಕೆಯ ಬೆನಕ ಯಕ್ಷಕಲಾ ವೇದಿಕಯ ಕಲಾವಿದರು, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ–ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ 'ಗಂಜೀಫಾ ರಘುಪತಿ ಭಟ್' ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30 ಲೋಕ್ ಪ್ರಸಾರಕ್ ಕೆ ಸಾಥ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಅಮಿತವ ಭಟರ್ಜೀ–ಸಿತಾರ್ ವಾದನ

■ **ಮೈಸೂರು ಯಾದವ (ಗೊಲ್ಲರ) ಸಂಘ :** ಶ್ರೀ ಗೋಪಾಲಸ್ವಾಮಿ ದೇವಸ್ಥಾನ ಹಾಗೂ ಯಾದವ ಸಮುದಾಯ ಭವನ ಉದ್ಘಾಟನಾ ಸಮಾರಂಭ, ಬೆಳಗ್ಗೆ 5.30ಕ್ಕೆ ದೇವಸ್ಥಾನದ ಗೋಪುರದ ಕಳಶ ಪ್ರತಿಷ್ಠಾಪನೆ ಹಾಗೂ ಶ್ರೀ ಗೋಪಾಲಸ್ವಾಮಿಯ ಪ್ರಾಣ ಪ್ರತಿಷ್ಠಾಪನೆ, ಸಮಾಜದ ಗುರುಗಳಾದ ಶ್ರೀ ಕೃಷ್ಣಯಾದವಾನಂದ ಸ್ವಾಮೀಜಿಯವರಿಂದ ಸಮುದಾಯ ಭವನ ಉದ್ಘಾಟನೆ, ಮುಖ್ಯ ಅತಿಥಿಗಳು: ಕರ್ನಾಟಕ ಯಾದವ ಸಂಘದ ಅಧ್ಯಕ್ಷ ಡಿ.ಟಿ.ಶ್ರೀನಿವಾಸ್, ಅಧ್ಯಕ್ಷತೆ : ಮೈಸೂರು ಯಾದವ ಸಂಘದ ಅಧ್ಯಕ್ಷ ಡಿ. ಧ್ರುವಕುಮಾರ್, ಸ್ಥಳ: ಸಂಘದ ಆವರಣ, ದಿವಾನ್ಸ್ ರಸ್ತೆ, ಬೆಳಗ್ಗೆ 10.30ಕ್ಕೆ,

■ **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು:** ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ಕ್ಷೇತ್ರದ ಸಾಧಕರಿಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ದೊಡ್ಡಬಳ್ಳಾಪುರದ ಶಕ್ತಿ ಸ್ವರೂಪಿಣಿ ರೇಣುಕಾ ಎಲ್ಲಮ್ಮ ದೇವಸ್ಥಾನದ ಧರ್ಮದರ್ಶಿ ಡಾ.ಅನುಅಮ್ಮ, ಅಧ್ಯಕ್ಷತೆ : ಮಾನವ ಹಕ್ಕುಗಳ ಸೇವಾ ಸಮಿತಿ ರಾಜ್ಯಾಧ್ಯಕ್ಷ ಡಾ. ಸೀತಾರಾಮೇಗೌಡ, ಉದ್ಘಾಟನೆ: ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಸ್ಥಳ: ಪುರಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ಸದಾನಂದ ಸುಬ್ಬಾಜೆಟ್ಟಪ್ಪನವರ ಜೆಟ್ಟಿಗಳ ಗರಡಿ, ಶ್ರೀ ನಿಂಬುಜಾದೇವಿ ಅಮ್ಮನವರ ದೇವಸ್ಥಾನದ ಟ್ರಸ್ಟ್:** ಬಿಜೆಪಿ ಲೋಕಸಭಾ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಸನ್ಮಾನ, ಪ್ರಮುಖರ ಸಭೆ, ಅಧ್ಯಕ್ಷತೆ: ಶ್ರೀಕಂಠ ಜೆಟ್ಟಪ್ಪ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ರಘು ಕೌಟಿಲ್ಯ, ಸಂದೇಶ್‌ಸ್ವಾಮಿ, ಶಾಸಕರಾದ ಶ್ರೀವತ್ಸ, ಡಿ.ರವಿಶಂಕರ್, ಸ್ಥಳ: ಗರಡಿ ಆವರಣ, ಮಧ್ಯಾಹ್ನ 3ಕ್ಕೆ.


■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ:** ನೃತ್ಯೋತ್ಸವ, ಉದ್ಘಾಟನೆ: ರಂಗಾಯಣ ನಿವೃತ್ತ ಉಪನಿರ್ದೇಶಕ ಮ.ಗು ಸದಾನಂದಯ್ಯ, ಅಧ್ಯಕ್ಷತೆ: ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು ಪ್ರಾಧ್ಯಾಪಕ ಕೆ.ಇ. ಗೋವಿಂದೇಗೌಡ, ಉಪಸ್ಥಿತರು: ಶಿಬಿರದ ನಿರ್ದೇಶಕ ಕೃಷ್ಣ ಜನಮನ, ಡಾ.ದಿನಮಣಿ, ಸ್ಥಳ: ಕಲಾಮಂದಿರ, ಸಂಜೆ 6ಕ್ಕೆ.

ಸಿಂಧುವಳ್ಳಿಯಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಸಾನ್ನಿಧ್ಯ ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮುಖ್ಯ ಅತಿಥಿಗಳು: ಸಿಂಧುವಳ್ಳಿ ಗ್ರಾಪಂ ಅಧ್ಯಕ್ಷೆ ಜಿ.ಪ್ರೇಮ ಕೃಷ್ಣಸ್ವಾಮಿ, ಉಪಾಧ್ಯಕ್ಷ ರಹಮತ್ ಉಲ್ಲಾ, ಪಿಡಿಓ ಶಿವಕುಮಾರ್, ಮುಖ್ಯ ಶಿಕ್ಷಕ ಡಿ.ಜಿ.ಕುಮಾರ್, ಡಾ.ಎಂ.ಶಾರದಾ, ಡಾ.ಜಿ.ಪ್ರಸಾದಮೂರ್ತಿ, ಡಾ.ಎನ್.ಜಿ.ಲೋಕೇಶ್, ತ್ರಿವೇಣಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ



ಪ್ರಧಾನಿ ಮೋದಿ ನೇತೃತ್ವದಲ್ಲಿ ರಾಜ್ಯದಲ್ಲಿ 40 ಸ್ಟಾರ್ ಪ್ರಚಾರಕರು

ಸಂಸದ ಪ್ರತಾಪ್ ಸಿಂಹ, ಎನ್.ಮಹೇಶ್‌ಗೆ ಸ್ಥಾನ


ನರೇಂದ್ರ ಮೋದಿ


ಪ್ರತಾಪ್ ಸಿಂಹ


ಎನ್.ಮಹೇಶ್

ಬೆಂಗಳೂರು, ಮಾ.30(ಕೆಎಂಶಿ)– ಕರ್ನಾಟಕದಲ್ಲಿ ಲೋಕಸಭಾ ಚುನಾವಣಾ ಪ್ರಚಾರದ ನೇತೃತ್ವವನ್ನು ಪ್ರಧಾನಿ ನರೇಂದ್ರ ಮೋದಿ ವಹಿಸಿಕೊಂಡಿದ್ದರೆ, ರಾಜ್ಯದಲ್ಲಿ ಸಂಸದ ಪ್ರತಾಪ್ ಸಿಂಹ, ಎನ್.ಮಹೇಶ್ ಸೇರಿದಂತೆ ಒಟ್ಟು 40 ಮಂದಿ ಸ್ಟಾರ್ ಪ್ರಚಾರಕರಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಷಾ, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ರಾಜನಾಥ್ ಸಿಂಗ್ ಪ್ರಮುಖರಾಗಿದ್ದಾರೆ. ಇವರಲ್ಲದೆ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಎಸ್. ಜೈಶಂಕರ್, ನಿರ್ಮಲಾ ಸೀತಾರಾಮನ್, ಸ್ಮೃತಿ ಇರಾನಿ, ಶೋಭಾ ಕರಂದ್ಲಾಜೆ, ಎ.ನಾರಾಯಣ ಸ್ವಾಮಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯ ಚುನಾವಣಾ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗರ್‌ವಾಲ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ತಮಿಳುನಾಡಿನ ಬಿಜೆಪಿ ನಾಯಕ ಅಣ್ಣಾಮಲೈ, ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದ ಗೌಡ, ಸಂಸದ ನಳಿನ್‌ಕುಮಾರ್ ಕಟೀಲ್, ಸುಧಾಕರ ರೆಡ್ಡಿ, ಸಿ.ಟಿ.ರವಿ, ಗೋವಿಂದ ಕಾರಜೋಳ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಿ.ಶ್ರೀರಾಮುಲು, ಅರವಿಂದ ಲಿಂಬಾವಳಿ, ಬಸನಗೌಡ ಪಾಟೀಲ್ ಯತ್ನಾಳ್, ಬೈರತಿ ಬಸವರಾಜ್, ವಿ.ಸುನೀಲ್ ಕುಮಾರ್, ಜಿ.ವಿ.ರಾಜೇಶ್, ಪಿ.ರಾಜೀವ್, ಜೆ.ಪ್ರೀತಮ್‌ಗೌಡ, ಪ್ರಮೋದ್ ಮಧ್ವರಾಜ್, ಛಲವಾದಿ ನಾರಾಯಣಸ್ವಾಮಿ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿದ್ದಾರೆ.

ಸಂವಿಧಾನದ ಅಡಿಯಲ್ಲಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ

ರಮ್ಮನಹಳ್ಳಿಯಲ್ಲಿ ಯದುವೀರ್‌ಗೆ ಅದ್ಧೂರಿ ಸ್ವಾಗತ; ಜಾತ್ರೋತ್ಸವದಲ್ಲಿ ಭಾಗಿ


ರಮ್ಮನಹಳ್ಳಿ ಗ್ರಾಮದೇವತೆ ಮಾರಮ್ಮ ತಾಯಿ ಜಾತ್ರಾ ಮಹೋತ್ಸವದಲ್ಲಿ ಮೈಸೂರು–ಕೊಡಗು ಲೋಕಸಭಾ ಅಭ್ಯರ್ಥಿ ಯದುವೀರ್ ಭಾಗವಹಿಸಿದ್ದರು. ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮತ್ತಿತರರಿದ್ದರು.

ಮೈಸೂರು, ಮಾ.30(ಎಂಕೆ)– ಭಾರತ ಸಂವಿಧಾನದ ಅಡಿಯಲ್ಲಿ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡುವಂತೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರಮ್ಮನಹಳ್ಳಿ ಗ್ರಾಮಸ್ಥರಲ್ಲಿ ಮನವಿ ಮಾಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಮ್ಮನಹಳ್ಳಿ ಗ್ರಾಮದೇವತೆ ಮಾರಮ್ಮ ತಾಯಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ, ಗ್ರಾಮಸ್ಥರನ್ನುದ್ದೇಶಿಸಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವ ಶುಭ ಸಂದರ್ಭದಲ್ಲಿ ಮೊದಲ ಬಾರಿಗೆ ರಮ್ಮನಹಳ್ಳಿಗೆ ಭೇಟಿ ನೀಡಿದ್ದೇನೆ. ಮೈಸೂರು ಒಡೆಯರ್ ಮನೆತನ ಹಾಗೂ ಮೈಸೂರು ಭಾಗದ ಜನತೆಯ ನಡುವೆ ಅವಿನಾಭಾವ ಸಂಬಂಧವಿದೆ. ಅದರಂತೆ ರಾಜಧರ್ಮ ಪಾಲನೆ ದೃಷ್ಟಿಯಿಂದ ಹಲವು ಜನಪರ ಕಾರ್ಯಗಳನ್ನು ಮಾಡಿದ್ದಾರೆಯೇ ಹೊರತು ಋಣ ತೀರಿಸಲಿ ಎಂದಲ್ಲ. 9 ವರ್ಷ ಹಿಂದೆ ದತ್ತು ಸ್ವೀಕಾರವಾದಾಗಿನಿಂದ ನಿಮ್ಮೆಲ್ಲರ ಸಹಕಾರದಿಂದ ಅರಮನೆ ಕೈಂಕರ್ಯಗಳಲ್ಲಿ ಭಾಗಿಯಾಗಲು ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ನಾನು ನಿಮ್ಮೆಲ್ಲರ ಋಣ ತೀರಿಸಬೇಕಿದ್ದು, ಸಂವಿಧಾನದ ಅಡಿಯಲ್ಲಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದು ಕೋರಿದರಲ್ಲದೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕಾಗಿದೆ. ಈ ನಿಟ್ಟಿನಲ್ಲಿ ತಮ್ಮೆಲ್ಲರ ಮತ ನೀಡುವಂತೆ ಮನವಿ ಮಾಡಿದರಲ್ಲದೆ ಶ್ರೀ ಮಾರಮ್ಮ ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮಸ್ಥರಿಗೆ ಶುಭಾಶಯ ತಿಳಿಸಿದರು.

ಕೊಡುಗೆ ಸ್ಮರಿಸಿ ಮತ ನೀಡಿ: ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಮೈಸೂರು ಭಾಗಕ್ಕೆ ಮೈಸೂರು ಅರಸರು ನೀಡಿರುವ ಕೊಡುಗೆಯನ್ನು ಸ್ಮರಿಸಿ ರಾಜವಂಶಸ್ಥರಾದ ಯದುವೀರ್ ಅವರಿಗೆ ಮತ ನೀಡಿ. ಕೆಆರ್‌ಎಸ್ ಡ್ಯಾಂ, ಕೆಆರ್ ಆಸ್ಪತ್ರೆ, ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ಅಪಾರ ಕೊಡುಗೆ ನೀಡಿರುವುದಲ್ಲದೆ ಸ್ವಾತಂತ್ರ್ಯಕ್ಕೂ ಮುನ್ನವೇ ಮೀಸಲಾತಿ ನೀಡಿ ಸರ್ವರ ಅಭಿವೃದ್ಧಿಗೂ ಕಾರಣರಾದ ಒಡೆಯರ ಋಣ ತೀರಿಸುವ ಸದವಕಾಶ ಇದಾಗಿದೆ. ಲೋಕಸಭಾ ಚುನಾವಣೆಯಲ್ಲಿ ಯದುವೀರ್ ಅವರು ಗೆದ್ದು, ಸಂಸದರಾಗುವಂತೆ ತಾವೆಲ್ಲರೂ ಮಾಡಬೇಕು ಎಂದು ತಿಳಿಸಿದರು. ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ರಮ್ಮನಹಳ್ಳಿ ಯಜಮಾನರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಭವ್ಯ ಸ್ವಾಗತ: ರಮ್ಮನಹಳ್ಳಿ ಗ್ರಾಮಕ್ಕೆ ಮೊದಲ ಬಾರಿಗೆ ಆಗಮಿಸಿದ ಮೈಸೂರು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಗ್ರಾಮಸ್ಥರಿಂದ ಭವ್ಯ ಸ್ವಾಗತ ಕೋರಲಾಯಿತು. ವಾದ್ಯಮೇಳದೊಂದಿಗೆ ಅತ್ಯಂತ ಆತ್ಮೀಯವಾಗಿ ಬರಮಾಡಿಕೊಂಡು ಗೌರವ ಸಲ್ಲಿಸಲಾಯಿತು.

ಇಂದಿನಿಂದ ಕುಸ್ತಿ ಕಾಳಗ...

ರಮ್ಮನಹಳ್ಳಿ ಶ್ರೀ ಮಾರಮ್ಮ ತಾಯಿ ಜಾತ್ರಾ ಮಹೋತ್ಸವದ ಅಂಗವಾಗಿ 30 ಜೋಡಿ ನಾಡ ಕಾಟಾ ಕುಸ್ತಿ ಹಾಗೂ ಪಾಯಿಂಟ್ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಎರಡು ದಿನಗಳ ಕುಸ್ತಿ ಪಂದ್ಯಾವಳಿಯಲ್ಲಿ ನಾಳೆ(ಮಾ.31) ಪಾಯಿಂಟ್ ಕುಸ್ತಿಗಳು ನಡೆಯಲಿದ್ದು, ಏ.1 ರಂದು ನಾಡ ಕಾಟಾ ಕುಸ್ತಿ ಪಂದ್ಯಗಳು ನಡೆಯಲಿವೆ. ದಸರಾ ಕೇಸರಿ ವಿಜೇತ ಪೈಲ್ವಾನ್ ಕಾರ್ತಿಕ್ ಕಾಟೆ, ಕೊಲ್ಲಾಪುರ ಪೈಲ್ವಾನ್ ಕಿರಣ್ ಸಿಂದೆ ಪ್ರಮುಖ ಆಕರ್ಷಣೆಯಾಗಿದ್ದಾರೆ ಎಂದು ಪೈ.ಶಿವು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ವಿಶ್ರಾಂತ ಕುಲಪತಿ ಪ್ರೊ.ರಂಗಪ್ಪ ನಿವಾಸಕ್ಕೆ ಯದುವೀರ್ ಭೇಟಿ

ಪ್ರಧಾನಿ 'ವಿಕಸಿತ ಭಾರತ' ಕನಸು ನನಸಾಗಲು ಸಹಕಾರ ಕೋರಿಕೆ


ಮೈಸೂರು ಬೋಗಾದಿ 2ನೇ ಹಂತದಲ್ಲಿರುವ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರ ನಿವಾಸಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಶನಿವಾರ ಭೇಟಿ ನೀಡಿದ್ದರು.

ಮೈಸೂರು, ಮಾ.30(ಎಸ್‌ಪಿಎನ್)– ಮೈಸೂರು ಬೋಗಾದಿ 2ನೇ ಹಂತದಲ್ಲಿರುವ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರ ನಿವಾಸಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶನಿವಾರ ಭೇಟಿ ನೀಡಿ, ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್. ಹೆಗ್ಡೆ ಸೇರಿದಂತೆ ಮಾಜಿ ಕುಲಪತಿಗಳು ಹಾಗೂ 60ಕ್ಕೂ ಹೆಚ್ಚು ನಿವೃತ್ತ ಪ್ರಾಧ್ಯಾಪಕರನ್ನು ಭೇಟಿಯಾಗಿ 2047ರ ವಿಕಸಿತ ಭಾರತಕ್ಕಾಗಿ ಭಾರತೀಯ ಜನತಾ ಪಾರ್ಟಿಯನ್ನು ಬೆಂಬಲಿಸುವಂತೆ ಮನವಿ ಮಾಡಿದರು. ನಂತರ ಮಾತನಾಡಿದ ಯದುವೀರ್, ಮೈಸೂರು ರಾಜ ಮನೆತನದ ಆಳ್ವಿಕೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಆಗಿನ ರಾಜರು ಸಂಸ್ಥಾನದ ಪ್ರಜೆಗಳಿಗೆ ಶಿಕ್ಷಣ ನೀಡಲು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿಯವರಿಗೆ ವಿವಿ ಸ್ಥಾಪಿಸಿ, ಅಭಿವೃದ್ಧಿಪಡಿಸುವುದು ಅವರ ಕರ್ತವ್ಯವಾಗಿತ್ತು. ಈ ಮೂಲಕ ಇತರೆ ಸಂಸ್ಥಾನಗಳಿಗೆ ಮೈಸೂರು ಸಂಸ್ಥಾನ ಮಾದರಿಯಾಗುವಂತೆ ನೋಡಿಕೊಂಡಿದ್ದರು ಎಂದು ತಿಳಿಸಿದರು.

ಮೈಸೂರು ವಿವಿ ಶತಮಾನೋತ್ಸವ ಸಂದರ್ಭದಲ್ಲಿ ಪ್ರೊ. ಕೆ.ಎಸ್.ರಂಗಪ್ಪ ಅವರು, ಕುಲಪತಿಗಳಾಗಿ ಶತಮಾನೋತ್ಸವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ಅಲ್ಲದೆ, ನಮ್ಮ ಮನೆತನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ನೀಡಿ, ಗೌರವಿಸಿದ್ದರು ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. 2047ರ ವಿಕಸಿತ ಭಾರತದ ಅಭಿವೃದ್ಧಿಗಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಮತ್ತೊಮ್ಮೆ ಅಧಿಕಾರಕ್ಕೆ ಬರಲೇಬೇಕು. ಇದಕ್ಕೆ ಮೈಸೂರು–ಕೊಡಗು ಮತದಾರರು ಬಿಜೆಪಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಪ್ರೊ.ಕೆ.ಎಸ್.ರಂಗಪ್ಪ ಮೈಸೂರು ವಿವಿ ಕುಲಪತಿಗಳಾಗಿದ್ದಾಗ ಮೈಸೂರು ವಿವಿ ಕ್ರಾಫರ್ಡ್ ಹಾಲ್ ಮುಂಭಾಗ ನಮ್ಮ ಪೂರ್ವಜರಾದ ನಾಲ್ವಡಿ ಕೃಷ್ಣರಾಜ್ ಒಡೆಯರ್ ಪ್ರತಿಮೆಯನ್ನು ಸ್ಥಾಪಿಸಿ, ಮೈಸೂರು ರಾಜ ಮನೆತನಕ್ಕೆ ಗೌರವ ಸೂಚಿಸಿದ್ದಾರೆ ಎಂದು ನೆನೆದರಲ್ಲದೆ, ಪ್ರೊ.ಕೆ.ಎಸ್.ರಂಗಪ್ಪನವರು ಮತ್ತು ನಾನು ಮೈಸೂರಿನ ಬೇರೆಬೇರೆ ಕಾರ್ಯಕ್ರಮಗಳಲ್ಲಿ ಮುಖಾಮುಖಿಯಾಗಿದ್ದೇವೆ. ಈ ವೇಳೆ ಮೈಸೂರು ಇತಿಹಾಸ ಹಾಗೂ ಪರಂಪರೆ ರಕ್ಷಣೆ ಕುರಿತು ಚರ್ಚೆ ನಡೆಸಿದ್ದೇವೆ ಎಂದು ತಿಳಿಸಿದರು. ಇದೀಗ ಮತ್ತೊಮ್ಮೆ ಮೈಸೂರು ರಾಜ ಮನೆತನಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಅವಕಾಶವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಲ್ಪಿಸಿದ್ದಾರೆ. ಅವರ ಕೈ ಬಲಪಡಿಸಲು ಈ ಭಾಗದ ಮತದಾರರು ಬಿಜೆಪಿ ಬೆಂಬಲಿಸುವ ಮೂಲಕ ಭಾರತದ ಅಭಿವೃದ್ಧಿಗೆ ಕೈ ಜೋಡಿಸುವಂತೆ ಮನವಿ ಮಾಡಿದರು. ಈ ವೇಳೆ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಕುಟುಂಬ ವರ್ಗ, 60ಕ್ಕೂ ಹೆಚ್ಚು ನಿವೃತ್ತ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಚುನಾವಣಾ ಅಕ್ರಮಗಳ ಮೇಲೆ ಹದ್ದಿನಕಣ್ಣು

ನಗದು, ಮದ್ಯ, ಉಚಿತ ಉಡುಗೊರೆ ಸೇರಿ 60 ಕೋಟಿ ರೂ. ಮೌಲ್ಯದ ವಸ್ತು ಜಪ್ತಿ

ಬೆಂಗಳೂರು, ಮಾ.30– ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ಚುನಾವಣಾ ಆಯೋಗ ಹದ್ದಿನಕಣ್ಣಿಟ್ಟಿದೆ. ಚುನಾವಣೆಯ ಸಂದರ್ಭದಲ್ಲಿ ಮತದಾರರನ್ನು ಸೆಳೆಯುವ ನಿಟ್ಟಿನಲ್ಲಿ ನೀಡುತ್ತಿದ್ದ ಉಚಿತ ಉಡುಗೊರೆ, ನಗದು, ಮದ್ಯ ಸೇರಿ 60,38,41,15 ರೂಪಾಯಿ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದೆ.

ರಾಜ್ಯ ಚುನಾವಣಾ ಆಯೋಗದ ಆಯುಕ್ತ ಮನೋಜ್ ಕುಮಾರ್ ಮೀನಾ ಅವರು ಮಾತನಾಡಿ, ಚುನಾವಣೆಯಲ್ಲಿ ಹಣದ ಬಳಕೆ ಕಳವಳಕಾರಿ ವಿಷಯವಾಗಿದೆ. ಅದಕ್ಕಾಗಿಯೇ ನಾವು ಆರು ತಿಂಗಳ ಹಿಂದಿನಿಂದಲೂ ಸಭೆಗಳು, ಹಾಗೂ ಕಾರ್ಯಾಚರಣೆಗಳನ್ನು ಆರಂಭಿಸಿದ್ದೆವು. ಆರು ತಿಂಗಳ ಹಿಂದಿನಿಂದಲೂ ಗಡಿಯಲ್ಲಿ ತೀವ್ರ ತಪಾಸಣೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

ನಾಮಪತ್ರ ಸಲ್ಲಿಕೆ ಶುರುವಾಗುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಅಕ್ರಮಗಳು ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಹೀಗಾಗಿ ನಾವು ಮತ್ತಷ್ಟು ಜಾಗರೂಕರಾಗಿರಬೇಕಿದೆ. ಇದಕ್ಕಾಗಿ ಮಾದಕ ದ್ರವ್ಯ, ಕಸ್ಟಮ್ಸ್, ನಾಗರಿಕ ವಿಮಾನಯಾನ, ವಾಣಿಜ್ಯ ತೆರಿಗೆ, ಐಟಿ ಮತ್ತು ಇತರ ಇಲಾಖೆಗಳ ವಿಶೇಷ ತಂಡಗಳೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿದ್ದೇವೆ. ಈಗಾಗಲೇ ಅರೆಸೇನಾ ಪಡೆಗಳನ್ನು ನಿಯೋಜಿಸಲಾಗಿದ್ದು, ಮತ್ತಷ್ಟು ಭದ್ರತೆಯನ್ನು ನಿಯೋಜಿಸಲಾಗುವುದು ಎಂದು ತಿಳಿಸಿದ್ದಾರೆ.

ಚುನಾವಣಾ ನೀತಿ ಸಂಹಿತೆ ಘೋಷಣೆಯಾಗುವ ಮುನ್ನವೇ 2023ರ ಆಗಸ್ಟ್ 1ರಿಂದ ಮಾರ್ಚ್ 14ರವರೆಗೆ 537.51 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಈ ವೇಳೆ 4,710 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೊದಲ ಹಂತದ ಚುನಾವಣೆ ಮುಗಿದ ಕೂಡಲೇ ಪೊಲೀಸರು, ಅರೆಸೇನಾ ಪಡೆಗಳು ಮತ್ತು ಇತರ ಭದ್ರತಾ ಸಿಬ್ಬಂದಿಯನ್ನು ಕರ್ನಾಟಕಕ್ಕೆ ರವಾನಿಸಲಾಗುವುದು ಎಂದು ಹಿರಿಯ ಚುನಾವಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭದ್ರತಾ ಸಿಬ್ಬಂದಿಗಳ ಸಂಖ್ಯೆಯನ್ನು ಬಹಿರಂಗಪಡಿಸಲಾಗುವುದಿಲ್ಲ, ಆದರೆ, ಸಿಬ್ಬಂದಿಗಳ ನಿಯೋಜನೆ ಸಂಖ್ಯೆ ಹೆಚ್ಚುತ್ತಲೇ ಇದೆ. ಸೂಕ್ಷ್ಮ, ಅತಿ ಸೂಕ್ಷ್ಮ ಕ್ಷೇತ್ರಗಳು, ಬೂತ್‌ಗಳು ಮತ್ತು ಜಿಲ್ಲೆಗಳನ್ನು ಗುರುತಿಸಿ, ಅಲ್ಲಿ ವಿಶೇಷ ಭದ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಅಗತ್ಯಬಿದ್ದರೆ ಮತ್ತಷ್ಟು ಸಿಬ್ಬಂದಿಗಳ ನಿಯೋಜನೆಗೆ ಚುನಾವಣಾ ಆಯೋಗವನ್ನು ಸಂಪರ್ಕಿಸಲಾಗುವುದು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸ್ವಯಂ ಸೇವಕರೊಂದಿಗೆ ಮತದಾನ ಜಾಗೃತಿ



ಮೈಸೂರು, ಮಾ.30(ಎಂಕೆ)– ತಾಲೂಕಿನ ನಾಗನಹಳ್ಳಿ ಗ್ರಾಮದಲ್ಲಿ ಜಿಲ್ಲಾ ಮತ್ತು ತಾಲೂಕು ಸ್ವೀಪ್ ಸಮಿತಿ, ಮಹಾರಾಜ ಕಾಲೇಜು ಎನ್‌ಎಸ್‌ಎಸ್ ಘಟಕ ಹಾಗೂ ಸ್ವಯಂ ಸೇವಕರೊಂದಿಗೆ ಮತದಾನ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಗ್ರಾಮದ ಮನೆ ಮನೆಗೂ ತೆರಳಿ ಏ.26ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ತಪ್ಪದೆ ಮತದಾನ ಮಾಡುವಂತೆ ಕೋರಲಾಯಿತು. ಹಾಗೆಯೇ ಮತದಾನದ ಮಹತ್ವ ಮತ್ತು ಜಾಗೃತಿ ಅರಿವು ಮೂಡಿಸುವ ಕರಪತ್ರಗಳನ್ನು ವಿತರಿಸಲಾಯಿತು. ಬಳಿಕ ಮಹಾರಾಜ ಕಾಲೇಜು ಎನ್‌ಎಸ್‌ಎಸ್ ಘಟಕದ ಸಂಚಾಲಕ ಡಾ.ಎಸ್.ಕೃಷ್ಣಪ್ಪ ಮಾತನಾಡಿ, ಮತದಾನ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ದೇಶದ ಅಭಿವೃದ್ಧಿ ದೃಷ್ಟಿಯನ್ನಿಟ್ಟುಕೊಂಡು ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಎಂದು ಕರೆ ನೀಡಿದರು. ಹಾಗೆಯೇ ಮತ ಚಲಾಯಿಸುವ ವಿಧಾನವನ್ನು ಅಣುಕು ಪ್ರದರ್ಶನದ ಮೂಲಕ ಗ್ರಾಮಸ್ಥರಿಗೆ ಅರ್ಥ ಮಾಡಿಸಲಾಯಿತು. ನಾಗನಹಳ್ಳಿ ಗ್ರಾಪಂನ ಪಿಡಿಓ ಭವ್ಯ, ಡಾ.ಪಿ.ಎಸ್.ಮಧುಸೂದನ್ ಮತ್ತಿತರರು ಉಪಸ್ಥಿತರಿದ್ದರು.

ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ..?: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪ್ರಶ್ನೆ




ತುಮಕೂರು, ಮಾ.30–'ಜೆಡಿಎಸ್ ಎಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸುತ್ತಿದ್ದಾರೆ. ಹಾಗಾದರೆ ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಜೆಡಿಎಸ್ ಮುಖಂಡರ ಸಭೆಯಲ್ಲಿ ಮಾತನಾಡಿ, ಇತರೆ ಪಕ್ಷದ ಬೆಂಬಲದೊಂದಿಗೆ ಸರ್ಕಾರ ರಚಿಸಿರುವುದು ಸೇರಿದಂತೆ ದೇಶದಲ್ಲಿ ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಸಿದ್ದರಾಮಯ್ಯ ಅವರ ಕುತಂತ್ರ ಬುದ್ಧಿಯಿಂದಾಗಿ ಕಾಂಗ್ರೆಸ್‌ಗೆ ಇಂತಹ ದುಃಸ್ಥಿತಿ ಬಂದಿದೆ. ಪಕ್ಷ ಹೀನಾಯ ಸ್ಥಿತಿಯಲ್ಲಿ ಇದ್ದರೂ ಜೆಡಿಎಸ್ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು. 2019ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡಿದ್ದರೂ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ್ದೆ. ಬಲವಂತವಾಗಿ ಕರೆತಂದು ತುಮಕೂರು ಕ್ಷೇತ್ರದಿಂದ ನಿಲ್ಲುವಂತೆ ಮಾಡಿ ಸೋಲಿಸಿದರು. ಮೈಸೂರು ಕ್ಷೇತ್ರದ ಟಿಕೆಟ್‌ಗಾಗಿ ನನ್ನನ್ನು ನಿಲ್ಲುವಂತೆ ಮಾಡಿದರು. ಸಚಿವ ಕೆ.ಎನ್.ರಾಜಣ್ಣ ಜತೆಗೆ ಸೇರಿಕೊಂಡು ರಾತ್ರಿ ಒಂದು ಗಂಟೆವರೆಗೂ ಸಭೆ ನಡೆಸಿ, ಪಿತೂರಿ ಮಾಡಿ ಸೋಲಿಸಲು ಕಾರಣಕರ್ತರಾಗಿದ್ದೀರಿ ಎಂದು ಆರೋಪಿಸಿದರು. ವಾಲ್ಮೀಕಿ ಸಮುದಾಯಕ್ಕೆ ನಾನು ಮಾಡಿದ ಸೇವೆ ಸ್ಮರಿಸುವುದಾದರೆ ಯಾವುದೇ ಕಾರಣಕ್ಕೂ ಕೆ.ಎನ್.ರಾಜಣ್ಣ ಅವರನ್ನು ನಂಬಬಾರದು. ಅವರು ನಂಬಿಕೆ, ವಿಶ್ವಾಸಕ್ಕೆ ಅರ್ಹರಲ್ಲ ಎಂದು ಮನವಿ ಮಾಡಿದರು. ನಮ್ಮ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರಿಗೆ ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿಸಲು ಅಭ್ಯರ್ಥಿಗಳೇ ಇರಲಿಲ್ಲ. ಯಾವ ಸಚಿವರೂ ಸ್ಪರ್ಧಿಸುವುದಾಗಿ ಹೇಳಲಿಲ್ಲ. ಕಾಂಗ್ರೆಸ್ ಇಂತಹ ಸ್ಥಿತಿಯಲ್ಲಿ ಇರಬೇಕಾದರೆ ನನ್ನ ಮೇಲೆ ಇಲ್ಲಸಲ್ಲದ ಆಪಾದನೆ ಮಾಡುತ್ತಿದ್ದಾರೆ. ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಂಡರು ಎನ್ನುತ್ತಿದ್ದಾರೆ. ಅದಕ್ಕೆ ಯಾರು ಕಾರಣ. ನಮ್ಮ ಮೈತ್ರಿ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದರು. ಬಿಜೆಪಿ ಜತೆಗೆ ಮಾಡಿಕೊಂಡಿರುವ ಮೈತ್ರಿ ಲೋಕಸಭೆ ಚುನಾವಣೆಯ ನಂತರವೂ ಮುಂದುವರಿಯಲಿದೆ ಎಂದರು.

ನನ್ನದು ಗರ್ವವೂ ಅಲ್ಲ, ಅಹಂಕಾರವೂ ಅಲ್ಲ, ಕನ್ನಡಿಗರ ರಕ್ತದ ಕಣಕಣದಲ್ಲಿರುವ ಸ್ವಾಭಿಮಾನ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಸಿದ್ದರಾಮಯ್ಯ ತಿರುಗೇಟು



ಬೆಂಗಳೂರು, ಮಾ.30– ಜೆಡಿಎಸ್ ವರಿಷ್ಠರಾದ ಹೆಚ್.ಡಿ. ದೇವೇಗೌಡರು ನನ್ನ ಗರ್ವಭಂಗ ಮಾಡುತ್ತೇನೆಂದು ಶಪಥ ಮಾಡಿದ್ದಾರೆ. ನನ್ನದು ಗರ್ವವೂ ಅಲ್ಲ, ಅಹಂಕಾರವೂ ಅಲ್ಲ. ನನ್ನದು ಕನ್ನಡಿಗರ ರಕ್ತದ ಕಣಕಣದಲ್ಲಿರುವ ಸ್ವಾಭಿಮಾನ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಕನ್ನಡ–ಕನ್ನಡಿಗ–ಕರ್ನಾಟಕದ ರಕ್ಷಣೆಗಾಗಿ ತಲೆ ಎತ್ತಿ, ಎದೆಯುಬ್ಬಿಸಿ ಪ್ರಶ್ನಿಸುವ ಮತ್ತು ಹೋರಾಟ ನಡೆಸುವ ಸ್ವಾಭಿಮಾನ ಎನ್ನುವುದನ್ನು ಅತ್ಯಂತ ವಿನಯಪೂರ್ವಕವಾಗಿ ಅವರ ಗಮನಕ್ಕೆ ತರಬಯಸುತ್ತೇನೆ ಎಂದಿದ್ದಾರೆ. ಸನ್ಮಾನ್ಯ ದೇವೇಗೌಡರೇ, ವೈಯಕ್ತಿಕ ಇಲ್ಲವೆ ರಾಜಕೀಯ ಲಾಭಕ್ಕಾಗಿ ನಾನು ಯಾರ ಜೊತೆಯಲ್ಲಿಯೂ ರಾಜಿ ಮಾಡಿಕೊಳ್ಳಲಾರೆ, ಅಂತಹ ಪರಿಸ್ಥಿತಿ ಬಂದೊದಗಿದರೆ ರಾಜಕೀಯವಾಗಿ ನಿವೃತ್ತಿಯಾಗುತ್ತೇನೆ ವಿನಃ ಕರ್ನಾಟಕದ ಹಿತಾಸಕ್ತಿಯ ವಿರೋಧಿಗಳ ಜೊತೆಯಲ್ಲಿ ನಿಮ್ಮಂತೆ ಹೊಂದಾಣಿಕೆ ಮಾಡಿಕೊಳ್ಳಲಾರೆ. ದೇವೇಗೌಡರ ಜೊತೆ ರಾಜಕೀಯವಾಗಿ ನನಗೆ ಭಿನ್ನಾಭಿಪ್ರಾಯವಿದ್ದರೂ ನಮ್ಮ ನೆಲ, ಜಲ ಮತ್ತು ಭಾಷೆಯ ರಕ್ಷಣೆಯ ಬಗೆಗಿನ ಅವರ ನಿಲುವಿನ ಬಗ್ಗೆ ಗೌರವ ಇತ್ತು. ಆದರೆ ಕಳೆದ ಹತ್ತು ವರ್ಷಗಳ ಅಧಿಕಾರವಧಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೆಜ್ಜೆಹೆಜ್ಜೆಗೂ ಕರ್ನಾಟಕದ ಹಿತಾಸಕ್ತಿಯ ವಿರುದ್ಧವೇ ಕೆಲಸ ಮಾಡಿದೆ ಎಂದು ಹೇಳಿದ್ದಾರೆ.

ನಾಡಧ್ವಜಕ್ಕೆ ವಿರೋಧ, ಹಿಂದಿ ಹೇರಿಕೆ, ಕಾವೇರಿ, ಕೃಷ್ಣ, ಮಹದಾಯಿ ಜಲವಿವಾದಗಳಲ್ಲಿ ಅನ್ಯಾಯ, ಕೇಂದ್ರ ಸ್ವಾಮ್ಯದ ಸಂಸ್ಥೆಗಳಲ್ಲಿ ಕನ್ನಡಿಗ ಯುವಜನರಿಗೆ ವಂಚನೆ. ಹೀಗೆ ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ದ್ರೋಹ ಎಸಗುತ್ತಾ ಬಂದಿದೆ.

ಕೇಂದ್ರದ ಬಿಜೆಪಿ ಸರ್ಕಾರ ತೆರಿಗೆ ಹಂಚಿಕೆಯಲ್ಲಿ ಮಾಡಿರುವ ಅನ್ಯಾಯಕ್ಕೆ ಕ್ಷಮೆಯೇ ಇಲ್ಲ. ತೆರಿಗೆ ರೂಪದಲ್ಲಿ ಕೇಂದ್ರ ಸರ್ಕಾರದ ಖಜಾನೆಗೆ ಸಂದಾಯವಾಗುವ ಕನ್ನಡಿಗರ ಒಂದು ರೂಪಾಯಿಗೆ ಪ್ರತಿಯಾಗಿ ಕೇವಲ ಹದಿಮೂರು ಪೈಸೆಯಷ್ಟು ಹಣ ಮಾತ್ರ ಕರ್ನಾಟಕಕ್ಕೆ ವಾಪಸು ಬರುತ್ತಿದೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮೊದಲಾದ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಕೂಡಾ ಕೇಂದ್ರ ಸರ್ಕಾರದ ಅನ್ಯಾಯವನ್ನು ಕೂಗಿ ಕೂಗಿ ಹೇಳುತ್ತಿವೆ. ಆದರೆ ಕರ್ನಾಟಕದ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಮಾತ್ರ ನಮ್ಮ ನೆಲ–ಜಲ–ಭಾಷೆಯ ವಿರೋಧಿಗಳ ಜೊತೆಯಲ್ಲಿ ರಾಜಿ ಮಾಡಿಕೊಂಡು ಕನ್ನಡಿಗರಿಗೆ ದ್ರೋಹ ಎಸಗಿದೆ ಎಂದು ಆರೋಪಿಸಿದ್ದಾರೆ. ಸನ್ಮಾನ್ಯ ದೇವೇಗೌಡರೇ, ಎಪ್ಪತ್ತು ವರ್ಷಗಳ ಕಾಲ ರಾಜಕೀಯದಲ್ಲಿದ್ದು ಕನ್ನಡಿಗರ ಪ್ರೀತಿ–ಅಭಿಮಾನವನ್ನು ಉಂಡು ಬೆಳೆದ ನೀವು "ನಾವು ಪ್ರಧಾನಿ ನರೇಂದ್ರ ಮೋದಿಯವರ ಹೆಸರಿನಲ್ಲಿಯೇ ಚುನಾವಣೆ ನಡೆಸುತ್ತೇವೆ" ಎಂಬ ಶರಣಾಗತಿಯ ಹೇಳಿಕೆಯನ್ನು ನೀಡುವಾಗ ಕನಿಷ್ಠ ನಿಮ್ಮ ಆತ್ಮಾಭಿಮಾನವೂ ಕುಟುಕಲಿಲ್ಲವೇ? ಕನ್ನಡ–ಕರ್ನಾಟಕ ವಿರೋಧಿ ನಾಯಕನಿಗೆ ಈ ರೀತಿ ಶರಣಾಗುವುದು ಸಮಸ್ತ ಕನ್ನಡಿಗರಿಗೆ ಮಾಡುವ ದ್ರೋಹ ಎಂದು ನಿಮಗೆ ಅನಿಸಲಿಲ್ಲವೇ? ನಿಮ್ಮೊಳಗಿನ ರಾಜಕೀಯ ನಾಯಕ ಅಷ್ಟೊಂದು ದುರ್ಬಲ ಅಸಹಾಯಕನಾಗಿ ಹೋದನೇ? ಎಂದು ಲೇವಡಿ ಮಾಡಿದ್ದಾರೆ.

ತಮ್ಮ ರಾಜಕೀಯ ಜೀವನದುದ್ದಕ್ಕೂ ಪ್ರಾದೇಶಿಕ ಆಶೋತ್ತರಗಳನ್ನು ಪ್ರತಿಪಾದಿಸಿಕೊಂಡು ಕೇಂದ್ರದ ಅಧಿಪತ್ಯವನ್ನು ಪ್ರಶ್ನಿಸುತ್ತಾ ಬಂದ ದೇವೇಗೌಡರು ಈ ಇಳಿವಯಸ್ಸಿನಲ್ಲಿ ಈ ರೀತಿಯ ರಾಜಕೀಯ ರಾಜಿ ಮಾಡಿಕೊಳ್ಳುವಂತೆ ಮಾಡಿದ ಶಕ್ತಿ ಮತ್ತು ವ್ಯಕ್ತಿ ಯಾರೇ ಇರಬಹುದು, ಆದರೆ ದೇವೇಗೌಡರು, ಕೇವಲ ರಾಜಕೀಯ ಲಾಭಕ್ಕಾಗಿ ಮೈತ್ರಿ ಮಾಡಿಕೊಂಡು ಸಮಸ್ತ ಆರುವರೆ ಕೋಟಿ ಕನ್ನಡಿಗರು ತಲೆತಗ್ಗಿಸುವಂತೆ ಮಾಡಿದ್ದಾರೆ. ಈ ದ್ರೋಹಕ್ಕಾಗಿ ದೇವೇಗೌಡರು ಮತ್ತು ಅವರ ಪಕ್ಷ ಭಾರಿ ಬೆಲೆ ತೆರಲಿರುವುದು ಖಚಿತ ಎಂದು ಹೇಳಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆತ : ಸಾರ್, ನೀವು ಕೊಟ್ಟ ಲಕೋಟೆ ಅಂಚೆ ಡಬ್ಬದಲ್ಲಿ ಹಾಕಿ ಬಂದೆ. ಅದರ ಮೇಲೆ ವಿಳಾಸ ಬರೆದಿರಲಿಲ್ಲ.
ಅವರು : ಮೊದಲೇ ಯಾಕೆ ಹೇಳಬಾರದಿತ್ತು!
ಆತ : ನೀವು ಯಾರಿಗೆ ಪತ್ರ ಕಳಿಸ್ತಿದ್ದೀರಿ ಅನ್ನೋದು ನನಗೂ ಸಹ ತಿಳಿಯಬಾರದು ಅಂತ ನೀವು ವಿಳಾಸ ಬರೆದಿಲ್ಲ ಅಂದುಕೊಂಡೆ ಸಾರ್!

ಮೈಸೂರು ಮಿತ್ರ
ಭಾನುವಾರ, 31 ಮಾರ್ಚ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........
ಬುದ್ಧಿವಂತರು ತಾವು ಇಚ್ಛಾ ಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ–ಸಮಯೋಚಿತ ಪದ್ಯಮಾಲಿಕಾ

ವೇದ ಸುಳ್ಳಾದರೂ { ಕೈಗೆಟುಕದ
ಗಾದೆ ಸುಳ್ಳಾಗದು { ದ್ರಾಕ್ಷಿ ಹುಳಿ

ನಿಮ್ಮ ಪತ್ರಗಳು

ಪಿಹೆಚ್.ಡಿಗೆ ನೆಟ್ ಅಂಕ ಪರಿಗಣನೆ ಸ್ವಾಗತಾರ್ಹ

ಮಾನ್ಯರೆ,
ಪಿಹೆಚ್.ಡಿ ಪದವಿ ಪಡೆಯುವುದು ಸುಲಭದ ಕೆಲಸವಲ್ಲ. ಅಪಾರ ಶ್ರದ್ಧೆ, ಸಂಶೋಧನಾ ಪ್ರವೃತ್ತಿ, ತಾಳ್ಮೆ ಮತ್ತು ಸಂಶೋಧನಾ ವಿಷಯದ ಬಗೆಗಿನ ಆಳವಾದ ಜ್ಞಾನ ಅಗತ್ಯವಾಗಿರುತ್ತದೆ. ಆದರೆ ಎಲ್ಲರಿಗೂ ಪಿಹೆಚ್.ಡಿ ಪದವಿ ಸಿಗುವುದು ಸುಲಭವಲ್ಲ.

ಪ್ರಸ್ತುತ ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗ ನಡೆಸುವ ನೆಟ್, ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಪಿಹೆಚ್.ಡಿ ಪದವಿಗೆ ಅರ್ಹತೆ ಪಡೆಬಹುದೆಂದು ಯುಜಿಸಿ ವಿಶ್ವವಿದ್ಯಾನಿಲಯಗಳಿಗೆ ಸೂಚಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ.

ಯುಜಿಸಿ ನೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಜ್ಯೂನಿಯರ್ ರಿಸರ್ಚ್ ಫೆಲೋಷಿಪ್, ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಮತ್ತು ಪಿಹೆಚ್.ಡಿ ಪದವಿಗೆ ಅರ್ಹತೆ ಪಡೆಯುವ ಅವಕಾಶವನ್ನು ಯುಜಿಸಿ ಕಲ್ಪಿಸಿರುವುದು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ.

ಯುಜಿಸಿ ನೆಟ್ ಪರೀಕ್ಷೆ ವರ್ಷದಲ್ಲಿ ಎರಡು ಬಾರಿ ಅಂದರೆ ಜೂನ್ ಮತ್ತು ಡಿಸೆಂಬರ್‌ನಲ್ಲಿ ನಡೆಸಲಾಗುತ್ತದೆ. ಆದರೆ ಈ ಪರೀಕ್ಷೆಗೆ ಪೂರ್ವ ತಯಾರಿ ನಡೆಸುವುದು ಅನಿವಾರ್ಯವಾಗಿರುತ್ತದೆ ಮತ್ತು ಸಂಬಂಧಪಟ್ಟ ವಿಷಯದ ಬಗ್ಗೆ ಆಳವಾದ ಜ್ಞಾನ ಅವಶ್ಯಕವಾಗಿರುತ್ತದೆ.

ಯುಜಿಸಿ ಈ ಆದೇಶ 2024–25ನೇ ಸಾಲಿನಿಂದ ಜಾರಿಯಾಗಲಿದ್ದು ಇದರಿಂದಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ನಿಶ್ಚಿತ. ದೇಶದ ವಿದ್ಯಾರ್ಥಿಗಳ ಪರವಾಗಿ ನೆಟ್ ಪರೀಕ್ಷೆಯ ಅಂಕಗಳನ್ನು ಪಿಹೆಚ್.ಡಿ ಪದವಿ ಪ್ರವೇಶಕ್ಕೆ ಮಾನದಂಡವಾಗಿ ಬಳಸಿರುವುದಕ್ಕೆ ಧನ್ಯವಾದಗಳು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಉದ್ಯಾನವನಗಳ ಅವ್ಯವಸ್ಥೆ



ಮಾನ್ಯರೆ,
ಸಾಂಸ್ಕೃತಿಕ ನಗರಿ ಮೈಸೂರಿನ ಡಿಸಿ ಆಫೀಸ್ ಹಿಂಭಾಗದಲ್ಲಿರುವ ಉದ್ಯಾನವನದಲ್ಲಿ ಸ್ವಚ್ಛತೆ ಕಾಣದಾಗಿದೆ. ತಂಪಾದ ಗಾಳಿಯ ವಾತಾವರಣ ಬಯಸಿ ಬರುವ ಸಾರ್ವಜನಿಕರು ದುರ್ವಾಸನೆ ಅನುಭವಿಸುವಂತಾಗಿದೆ. ಈ ರೀತಿಯ ದೃಶ್ಯ ನಗರದ ಹಲವು ಉದ್ಯಾನವನಗಳಲ್ಲಿ ಕಂಡುಬಂದಿದೆ. ನಗರದ ಸೌಂದರ್ಯ ಹೆಚ್ಚಿಸುವಲ್ಲಿ ಉದ್ಯಾನವನಗಳು ಪ್ರಮುಖ ಪಾತ್ರ ವಹಿಸುತ್ತವೆ. ಮಹಾನಗರ ಪಾಲಿಕೆಯು ಇದರ ಕಡೆ ಗಮನ ಹರಿಸಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕು.

–ಎನ್ .ಸುಶ್ಮಿತಾ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ರಾಜಕಾರಣಿಗಳಿಗೆ ಸಭ್ಯತೆ ಇಲ್ಲವೇ?

ಮಾನ್ಯರೆ,
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿಯವರು ಪ್ರಧಾನಿ ಮೋದಿ ಅವರ ಬಗ್ಗೆ ಅವಾಚ್ಯ ಪದ ಬಳಕೆ ಮಾಡಿದ್ದಾರೆಂದು ಮಾಜಿ ಸಚಿವ ಸಿ.ಟಿ. ರವಿಯವರು ತಂಗಡಗಿಯವರನ್ನು ಉದ್ದೇಶಿಸಿ ಅವರು "ಅಪ್ಪನಿಗೆ ಹುಟ್ಟಿದ್ದರೇ ಎಂಬ ಪದ ಪ್ರಯೋಗ ಮಾಡಿದ್ದು, ಇದು ಎಷ್ಟು ಸರಿ ಎಂಬ ಪ್ರಶ್ನೆ ಕಾಡುತ್ತಿದೆ.

ಇದಕ್ಕೆ ಪ್ರತಿಯಾಗಿ ಸಚಿವ ತಂಗಡಗಿಯವರು ನಾವು ಯಾರಿಗೆ ಹುಟ್ಟಿದ್ದು ಎಂಬುದು ನಮ್ಮ ತಾಯಿಗೆ ಗೊತ್ತಿರುತ್ತದೆ. ನಾನು ನನ್ನ ತಾಯಿಯನ್ನು ನಿಮ್ಮ ಬಿಜೆಪಿ ಪಕ್ಷದ ಕಚೇರಿಗೆ ಕರೆದುಕೊಂಡು ಬರುತ್ತೇನೆ. ನೀವು (ಸಿ.ಟಿ. ರವಿ) ನಿಮ್ಮ ತಾಯಿಯನ್ನು ಕರೆದುಕೊಂಡು ಬರಲು ಸಿದ್ಧರಿದ್ದೀರಾ? ಯಾರು ಅಪ್ಪನಿಗೆ ಹುಟ್ಟಿದ್ದಾರೆ ಎಂಬುದು ತಿಳಿಯುತ್ತದೆ ಎಂಬ ಅರ್ಥದಲ್ಲಿ ಹೇಳಿದ್ದಾರೆ.

ರಾಜಕಾರಣ ಏನೇ ಇರಲಿ, ಸಾರ್ವಜನಿಕ ಜೀವನದಲ್ಲಿ ಇವರ ನಡವಳಿಕೆ ಒಬ್ಬ ಅನಕ್ಷರಸ್ಥರಿಗಿಂತಲೂ ಕಡೆಯದು. ಹಳ್ಳಿಯಲ್ಲಿ ದನ ಕಾಯುವವ ಸಹ ತನ್ನ ಎದುರಾಳಿಯನ್ನು ಬೈಯಲು, ಇಂತಹ ಕೆಟ್ಟ ಪದ ಪ್ರಯೋಗ ಮಾಡಲು ಹಿಂದೆ – ಮುಂದೆ ನಾಲ್ಕು ಬಾರಿ ಯೋಚಿಸುತ್ತಾನೆ.

ಜನಪ್ರತಿನಿಧಿಗಳು ಎನಿಸಿಕೊಂಡಿರುವ ನಾಯಕರು ಆಡುತ್ತಿರುವ ಮಾತುಗಳಿಂದ ನೀವು ಸಾರ್ವಜನಿಕರ ಜೀವನದಲ್ಲಿ ಚಿಕ್ಕವರಾಗುವುದಿಲ್ಲವೇ? ನಿಮಗೆ ಮಾನ ಮರ್ಯಾದೆ ಇದೆಯಾ? **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**

ಮೋದಿ... ಮೋದಿ...ಕೂಗು ಮತವಾಗುವುದೇ?

ಮಾನ್ಯರೆ,
ರಾಜ್ಯಕ್ಕೆ ಮೋದಿ ಅಗಮಿಸಿದಾಗ ಕಾರ್ಯಕರ್ತರು, ಅಭಿಮಾನಿಗಳು ಮೋದಿ ಮೋದಿ ಎಂದು ಕೂಗುವುದು ಸಾಮಾನ್ಯವಾಗಿಬಿಟ್ಟಿದೆ. ಆದರೆ ಬಿಜೆಪಿಯೇತರ ಪಕ್ಷಗಳ ಕಾರ್ಯಕ್ರಮದಲ್ಲೂ ಹೀಗೆ ಕೂಗುವುದು ಸರಿಯಲ್ಲ. ಏಕೆಂದರೆ ಅಲ್ಲಿ ಕೂಗುವವರು ಕಾಂಗ್ರೆಸ್ ಪಕ್ಷದ ಸದಸ್ಯರಲ್ಲ. ಹೀಗೆ ಕೂಗಿದಾಗ ಸಹಜವಾಗಿ ಸಂಘರ್ಷ ಏರ್ಪಡುತ್ತದೆ. ಬಿಜೆಪಿ ಕಾರ್ಯಕ್ರಮದಲ್ಲಿ ಕೂಗಿದರೆ ಏನೂ ಅನಿಸುವುದಿಲ್ಲ. ಬೇರೆ ಪಕ್ಷದ ಸಭೆಗಳಲ್ಲಿ ಇಂತಹ ಘಟನೆ ನಡೆದರೆ ಸಮಸ್ಯೆಗೆ ಎಡೆಮಾಡಿಕೊಡುತ್ತದೆ. ಜನತೆಗೆ ಅಭಿಮಾನ ಇರಬೇಕು, ಅಂಧಾಭಿಮಾನ ಇರಬಾರದು. ಮೋದಿ ಮೋದಿ ಎಂದು ಕೂಗಿದಾಕ್ಷಣ ಕೂಗು ಮತವಾಗಿ (ಓಟು) ಮಾರ್ಪಡುವುದೇ, ಇಲ್ಲವಲ್ಲ. ಅಭಿಮಾನ ಅಂತರಾಳದಲ್ಲಿ ಇರಬೇಕು ಆಚರಣೆಯಲ್ಲಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೋದಿ ರಾಜ್ಯಕ್ಕೆ ಪದೇ ಪದೆ ಬಂದರೂ ಬಿಜೆಪಿ ಅಧಿಕಾರಕ್ಕೆ ಬರಲಿಲ್ಲ ಏಕೆ? ಮತದಾರ ಮುನಿದರೆ ಮೋದಿಯಂತಹ ನೂರು ಜನರನ್ನು ಅಧಿಕಾರಕ್ಕೆ ತರಬಹುದು. ಅಧಿಕಾರದಿಂದ ಕಿತ್ತೊಗೆಯಲೂಬಹುದು. ನಾಲ್ಕು ಜನ ಕೂಗಾಡುವುದರಿಂದ ಏನೂ ಪ್ರಯೋಜನವಿಲ್ಲ. ಇದು ಸಂಘರ್ಷಕ್ಕೆ ಕಾರಣವಾಗದಿರಲಿ ಎನ್ನುವುದೇ ಜನತೆಯ ಆಶಯ.


–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ


ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನ ದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

14. ದಳವಾಯಿ ದೇವರಾಜ ಅರಸ್





ಗೌರಿ ಸತ್ಯ
ಹಿರಿಯ ಪತ್ರಕರ್ತರು

ಹಲವಾರು ಅರಸು ಮನೆತನದವರು ಮಹಾರಾಜರ ಸರ್ಕಾರದಲ್ಲಿ ಪ್ರಮುಖ ಸ್ಥಾನಗಳಲ್ಲಿ ನೇಮಕಗೊಂಡಿದ್ದರು. ಹಾಗೆ ಅಧಿಕಾರದಲ್ಲಿದ್ದವರಲ್ಲಿ ಅರಸು ಮನೆತನದ ದಳವಾಯಿ ದೇವರಾಜ ಅರಸು ಅವರು. ಇವರು ಮೈಸೂರಿನ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಆಗಿ, ಪೊಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನ ಹೊಂದಿದ್ದರು. ಇಲಾಖೆಯ ಪ್ರಗತಿಗೆ ಶ್ಲಾಘನೀಯ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು.

ಡಿ.ದೇವರಾಜ ಅರಸ್ ಅವರು 1857ರ ಮಾರ್ಚ್ 28ರಂದು ಜನಿಸಿದರು. ದಳವಾಯಿ ನಂಜರಾಜ ಅರಸ್ ತಮಗೆ ಮಕ್ಕಳಿಲ್ಲದಿದ್ದ ಕಾರಣ ದೇವರಾಜ ಅರಸು ಅವರನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸಿದರು. ಈ ಕಾರಣ ದೇವರಾಜ ಅರಸ್ ಅವರ ಹೆಸರಿಗೂ 'ದಳವಾಯಿ' (ಸೈನ್ಯದ ಕಮಾಂಡರ್–ಇನ್–ಛೀಫ್) ಸೇರಿ ಹೋಗಿತ್ತು. ದೇವರಾಜ ಅರಸ್ ಅವರು ಮೈಸೂರಿನ ಇತಿಹಾಸದ ಹಾಸು ಹೊಕ್ಕಾಗಿರುವ ಕಳಲೆ ಕುಟುಂಬದವರು. ಅರಸು ಕ್ಷತ್ರಿಯ ಜನಾಂಗಕ್ಕೆ ಸೇರಿದವರು. ಇವರುಗಳು ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಮೈಸೂರು ರಾಜ್ಯ ವಿಸ್ತರಿಸಿ ಒಗ್ಗೂಡಲು ಬಹಳ ಮಟ್ಟಿಗೆ ನೆರವಾಗಿದ್ದರು.

1752ರಲ್ಲಿ ಮೊಹಮ್ಮದ್ ಆಲಿ ತಿರುಚಿನಾಪಳ್ಳಿಗೆ ಮುತ್ತಿಗೆ ಹಾಕಿದಾಗ ಮೈಸೂರಿನ ಸೈನ್ಯ ಅವನ ಬೆಂಬಲಕ್ಕೆ ನಿಂತಿತು. ತಿರುಚಿನಾಪಳ್ಳಿಗೆ ಮುತ್ತಿಗೆ ಹಾಕಲು ಮೊಹಮ್ಮದ್ ಆಲಿ ಆರ್ಕಾಟಿನ ನವಾಬ ಚಂದಾಸಾಹೇಬನನ್ನು ಕಳುಹಿಸಿದ್ದ. ಅವನಿಗೆ ಬೆಂಬಲಕ್ಕೆ ಹೋದ ಮೈಸೂರಿನ ಸೈನ್ಯದ ನೇತೃತ್ವವನ್ನು ಅದೇ ಕಳಲೆ ರಾಜ ಮನೆತನದ ದಳವಾಯಿ ನಂಜರಾಜಯ್ಯ ವಹಿಸಿದ್ದರು. 1746ರಲ್ಲಿ ಹೈದರ್ ಆಲಿ ದೇವನಹಳ್ಳಿ ಮುತ್ತಿಗೆಯಲ್ಲಿ ನಂಜರಾಜಯ್ಯನ ಗಮನ ಸೆಳೆದಿದ್ದ ಸೇನಾನಿ ಹೈದರ್, ನಂಜರಾಜಯ್ಯನ ಕೃಪೆಯಿಂದಾಗಿ ಮೈಸೂರು ಸೈನ್ಯದ ಒಂದು ತುಕಡಿಗೆ ನಾಯಕನಾದ. ದಳವಾಯಿ ನಂಜರಾಜಯ್ಯ ನಗರಡಿಯಲ್ಲಿ ಪಳಗಿದ ಹೈದರ್ ಮುಂದೆ ಎಲ್ಲಿಯವರೆಗೆ ಬೆಳೆದನೆಂದರೆ ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರನ್ನು (1734–1766) ಮೂಲೆಗುಂಪು ಮಾಡಿತಾನೇ ಸರ್ವಾಧಿಕಾರಿಯಾದ. ರಾಜ್ಯದ ಆಡಳಿತವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡ. ಕೊನೆಗೆ ತಾನು ಮೇಲೆ ಬರಲು ಕಾರಣಕರ್ತನಾಗಿದ್ದ ನಂಜರಾಜಯ್ಯನನ್ನೇ ಸೆರೆಯಿಟ್ಟ.

ಬ್ರಿಟಿಷರು ಟಿಪ್ಪುವನ್ನು ನಾಲ್ಕನೇ ಮೈಸೂರು ಯುದ್ಧದಲ್ಲಿ ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ತರುವಾಯ ಕಳಲೆ ಮನೆತನದ ದಳವಾಯಿ ವೀರರಾಜಯ್ಯನಿಗೆ ವರ್ಷವೊಂದಕ್ಕೆ 1,500 ಪಗೋಡಾಗಳನ್ನು ಭತ್ಯೆಯನ್ನಾಗಿ ಕೊಡಲಾರಂಭಿಸಿತು. ನಾಲ್ವಡಿ ಕೃಷ್ಣರಾಜ ಒಡೆಯರ ಅವಧಿಯಲ್ಲೂ ಈ ಭತ್ಯೆಯನ್ನು ಅವರ ಮನೆತನದವರಿಗೆ ಕೊಡಲಾಗುತ್ತಿತ್ತು.

ನಂಜನಗೂಡಿನ ಬಳಿಯ 'ದಳವಾಯಿ ಸೇತುವೆ' ಪ್ರಸಿದ್ಧಿ ಗಳಿಸಿದೆ. ಅದನ್ನು ಈಗ ಪ್ರಸ್ತಾಪ ಮಾಡಲಾಗುತ್ತಿರುವ ಡಿ. ದೇವರಾಜ ಅರಸ್ ಅವರ ಪೂರ್ವಿಕರಲ್ಲಿ ಒಬ್ಬರಾದ ದಳವಾಯಿ ದೇವರಾಜ ಅರಸು ಅವರು ನಿರ್ಮಿಸಿದರು. ಈ ಸೇತುವೆ ನಿರ್ಮಿಸಿದ ದಳವಾಯಿ ದೇವರಾಜ ಅರಸ್ ಅವರು ದಳವಾಯಿ ನಂಜರಾಜಯ್ಯನ ಸಹೋದರರು. ಅಂದಿನ ಮಹಾರಾಜರ ಆಡಳಿತದಲ್ಲಿ ಅವರು ಓರ್ವ ಸಚಿವರಾಗಿದ್ದರು.

ಈ ಸೇತುವೆಯನ್ನು ನಂಜನಗೂಡು ಬಳಿ ಹರಿಯುವ ಕಬಿನಿ ನದಿಯ ಮೇಲೆ 1735ರಲ್ಲಿ ನಿರ್ಮಿಸಲಾಯಿತು. ಇದನ್ನು ನಿರ್ಮಿಸಿ 289 ವರ್ಷಗಳಾದರೂ ಈಚಿನವರೆಗೂ ಯಾವುದೇ ರಿಪೇರಿ ಅವಶ್ಯಕತೆ ಕಂಡು ಬರದೆ ಇಂದಿಗೂ ಅದು ಗಟ್ಟಿ ಮುಟ್ಟಾಗಿದೆ. 164 ವರ್ಷಗಳ ನಂತರ, ಅಂದರೆ 1899ರಲ್ಲಿ ಇದರ ಮೇಲೆ ಮೈಸೂರು–ನಂಜನಗೂಡು ಮೀಟರ್‌ಗೇಜ್ ರೈಲು ಮಾರ್ಗವನ್ನು ನಿರ್ಮಿಸಿದಾಗ ಇದು ರೈಲು ಮತ್ತು ರಸ್ತೆ ಸೇತುವೆಯಾಗಿ ಪರಿವರ್ತನೆಯಾಯಿತು. ಅಲ್ಲಿಯವರೆಗೆ ಇದರ ಮೇಲೆ ಎತ್ತಿನಗಾಡಿಗಳು, ಒಂಟೆ, ಕುದುರೆ ಗಾಡಿಗಳು, ಹಾಗೂ ಜನ ಓಡಾಡುತ್ತಿದ್ದರು. ಇದರಿಂದಾಗಿ ಇದು ಸಂಪೂರ್ಣ 'ರಸ್ತೆ ಸೇತುವೆ' ಯಾಗಿತ್ತು. ಇದರ ಮೇಲಿನ 300 ಮೀಟರ್ ಉದ್ದದ ರೈಲು ಮಾರ್ಗ 2007ರ ಜನವರಿವರೆಗೆ, ಅಂದರೆ ಒಂದು ಶತಮಾನಕ್ಕೂ ಹೆಚ್ಚಿನ ಕಾಲ ಬಳಕೆಯಲ್ಲಿತ್ತು. 2007ರಲ್ಲಿ ಇನ್ನೊಂದು ಹೊಸ ಸೇತುವೆಯನ್ನು ನಿರ್ಮಿಸಿ, ಅದರ ಮೇಲೆ ದೊಡ್ಡದಾದ ಬ್ರಾಡ್‌ಗೇಜ್ ರೈಲು ಮಾರ್ಗವನ್ನು ಅಳವಡಿಸಿದ ಮೇಲೆ ದಳವಾಯಿ ಸೇತುವೆಯ ಮೀಟರ್ ಗೇಜ್ ರೈಲು ಮಾರ್ಗ ಉಪಯೋಗಕ್ಕೆ ಬಾರದೆ ಹೋಗಿ ಇತಿಹಾಸದ ಹಿಂದಕ್ಕೆ ಸರಿದುಹೋಯಿತು. ಈ ಸೇತುವೆಯನ್ನು ಗೋಥಿಕ್ ವಾಸ್ತು ಶಿಲ್ಪದ ಶೈಲಿಯಲ್ಲಿ ನಿರ್ಮಿಸಲಾಗಿದ್ದು ಇದು ವಿಶ್ವದ ಅತ್ಯಂತ ಹಳೆಯ ಸೇತುವೆ ಎಂದು ಪರಿಗಣಿಸಲಾಗಿದೆ.

ಹತ್ತು ಅಡಿಯ 51 'ಸ್ಪಾನ್' (ಲಯ)ಗಳ ಈ ಸೇತುವೆ ಇಂದು ಇತಿಹಾಸದಲ್ಲಿ ದಾಖಲೆ ಬರೆದು ಪಾರಂಪರಿಕ ಸೇತುವೆಯಾಗಿದೆ. ಶ್ರೀರಂಗಪಟ್ಟಣದಲ್ಲಿ ಹೈದರಾಲಿ ಖಾನನೊಂದಿಗೆ ವ್ಯವಹರಿಸಲು ಈಸ್ಟ್ ಇಂಡಿಯಾ ಕಂಪನಿ ಕಳುಹಿಸಿದ್ದ ಡ್ಯಾನಿಶ್ ಕ್ರೈಸ್ತ ಮಿಷನರಿ ರೆವರಂಡ್ ಶ್ವಾರ್ಟ್ಸ್ 1779ರ ಆಗಸ್ಟ್ 23ರಂದು ಕಬಿನಿ ನದಿಯನ್ನು ದಾಟಲು ಈ ಸೇತುವೆಯ ಮೇಲೆ ಹೋದದ್ದನ್ನು ದಾಖಲಿಸಿದ್ದಾನೆ. ಗಣನೀಯ 23 ಕಮಾನುಗಳ ಈ ಸೇತುವೆ ಸಮರ್ಥವಾಗಿದೆ ಎಂದಿದ್ದಾನೆ ತನ್ನ ದಾಖಲೆಗಳಲ್ಲಿ. ಅಂದರೆ ಉಳಿದ 28 ಕಮಾನುಗಳನ್ನು ನಂತರ ಕಟ್ಟಿರಬೇಕು. ಇದರ ಪ್ರತಿ ಕಮಾನು ಹತ್ತು ಅಡಿ ವ್ಯಾಪ್ತಿ ಹೊಂದಿದ್ದು ಎರಡು ಸೇತು ಬಂಧಗಳ (ಪಿಯರ್ಸ್) ನಡುವೆ ಎಂಟು ಅಡಿ ಅಗಲವಾಗಿದೆ. ಸೇತುವೆಯನ್ನು ಇಟ್ಟಿಗೆ, ಮರಳು, ಸುಣ್ಣದಗಾರೆ ಹಾಗೂ ಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ಇಂದು ಇದೊಂದು ಕೌತುಕದ ಸೇತುವೆಯಾಗಿದ್ದು 'ಪಾರಂಪರಿಕ ಸೇತುವೆ' ಎಂದು ಪರಿಗಣಿಸಿ ರಕ್ಷಿಸಲು ಉದ್ದೇಶಿಸಲಾಗಿದೆ ಎಂದು ಮೈಸೂರು ವಿಭಾಗದ ನೈರುತ್ಯ ರೈಲ್ವೆ ಮೂರು ವರ್ಷಗಳ ಹಿಂದೆ ಪ್ರಕಟಿಸಿತ್ತು.


ಡಿ. ದೇವರಾಜ ಅರಸ್ ಅವರನ್ನು 1878ರ ಫೆಬ್ರವರಿ 11ರಂದು ಮೈಸೂರು ಕಮೀಷನ್ನಿನ 'ಅಟ್ಯಾಚೆ'ಯಾಗಿ, ನಂತರ 1884ರ ನವೆಂಬರ್ ತಿಂಗಳಲ್ಲಿ ನಾಲ್ಕನೇ ದರ್ಜೆ ಅಸಿಸ್ಟೆಂಟ್ ಕಮೀಷನರ್ ಆಗಿ ನೇಮಿಸಲಾಯಿತು. ನಂತರದ ವರ್ಷಗಳಲ್ಲಿ ಅವರು ಕಂದಾಯ ಮತ್ತು ಪೊಲೀಸ್ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. 1898ರಲ್ಲಿ ಅವರಿಗೆ ಡೆಪ್ಯೂಟಿ ಕಮೀಷನರ್ ಹುದ್ದೆಗೆ ಬಡ್ತಿ ನೀಡಲಾಯಿತು. ಆ ಹುದ್ದೆಯಲ್ಲಿ ಹತ್ತು ವರ್ಷಗಳ ಸೇವೆಯ ನಂತರ ಅವರು 1908ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಕಗೊಂಡರು. ಈ ಅವಧಿಯಲ್ಲಿ ಅವರು ಪೊಲೀಸ್ ಇಲಾಖೆಯ ಅತ್ಯುನ್ನತ ಅಧಿಕಾರಿಯಾಗಿ 1912ರಲ್ಲಿ ವೆಲ್ಲೂರಿಗೆ ಭೇಟಿ ಕೊಟ್ಟು ಅಲ್ಲಿ ಪೊಲೀಸರಿಗೆ ತರಬೇತಿ ನೀಡುತ್ತಿದ್ದ ರೀತಿಯನ್ನು ಅಭ್ಯಸಿಸಿ ಬಂದರು. ಹಾಗೆ ಅವರು ಅಲ್ಲಿ ಅರಿತು ಬಂದ ತರಬೇತಿ ರೀತಿಯನ್ನು ಬೆಂಗಳೂರಿನಲ್ಲಿರುವ ಪೊಲೀಸ್ ಶಾಲೆಯಲ್ಲಿ ಅನುಷ್ಠಾನಗೊಳಿಸಿ ಮಹತ್ವದ ಬದಲಾವಣೆಗಳನ್ನು ತಂದರು. ಈ ಪೊಲೀಸ್ ತರಬೇತಿ ಶಾಲೆಯನ್ನು 1892ರಲ್ಲಿ ಸ್ಥಾಪಿಸಲಾಗಿತ್ತು. ಇದರಿಂದಾಗಿ ಮೈಸೂರು ರಾಜ್ಯದಲ್ಲಿ ಪೊಲೀಸ್ ತರಬೇತಿ ಮತ್ತಷ್ಟು ಉತ್ತಮಗೊಂಡು ಕ್ರಿಯಾತ್ಮಕವಾಗಿ ಬೆಳೆಯಿತು. ಹೀಗೆ ಬದಲಾವಣೆ ತಂದ ಕೀರ್ತಿ ದೇವರಾಜ ಅರಸ್ ಅವರಿಗೆ ಸಲ್ಲುತ್ತದೆ. ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯಲ್ಲಿದ್ದ ದೇವರಾಜ ಅರಸ್ ಅವರಿಗೆ ಮೈಸೂರು ಸರ್ಕಾರ ಕ್ಯಾಬಿನೆಟ್ ದರ್ಜೆಯ ಕೌನ್ಸಿಲ್‌ಷಿಪ್ ಹುದ್ದೆಗೆ ಪದೋನ್ನತಿ ನೀಡಿ ಅವರ ಸೇವಾ ದಕ್ಷತೆಗೆ ಮನ್ನಣೆ ನೀಡಿತು. ದೇವರಾಜ ಅರಸ್ ಅವರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಸ್ಥಾನದಿಂದ ಸಚಿವ ಮಟ್ಟಕ್ಕೆ ಏರಿದ ಮೊದಲ ಪೊಲೀಸ್ ಅಧಿಕಾರಿಯಾದರು.

ಇವರ ನಂತರ 1930ರಲ್ಲಿ ಖ್ಯಾತ ಪೊಲೀಸ್ ಅಧಿಕಾರಿ ಹ್ಯಾಮಿಲ್ಟನ್ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಕಗೊಂಡರು. ಇವರು ಎಂಟು ವರ್ಷಗಳ ಕಾಲ ಈ ಹುದ್ದೆಯಲ್ಲಿದ್ದರು. ಇವರ ಅವಧಿಯಲ್ಲೇ ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಕೇಂದ್ರ ಅಂಚೆ ಕಚೇರಿಯ ಎದುರಿರುವ ಲಷ್ಕರ್ ಪೊಲೀಸ್ ಸ್ಟೇಷನ್ ಮುಂದೆ ಐತಿಹಾಸಿಕ 'ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ' ಮಾಡಿದ್ದು. ಲಷ್ಕರ್ ಮೊಹಲ್ಲಾಗೆ ಸೇರಿದ ಈ ಕಟ್ಟಡ ಎಫ್. ಎ. ಹ್ಯಾಮಿಲ್ಟನ್ ಅವರ ಕಚೇರಿಯಾಗಿದ್ದು 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದೇ ಹೆಸರು ಪಡೆದಿತ್ತು. ಮೈಸೂರಿನ ಸತ್ಯಾಗ್ರಹಿಗಳು ಅದರ ಮುಂದೆ ನಡೆಸಿದ ಹೋರಾಟದಿಂದ ಆ ಕಟ್ಟಡ ಖ್ಯಾತಿ ಗಳಿಸಿ, ಈಗ ಅದೊಂದು ಐತಿಹಾಸಿಕ ಹಾಗೂ ಪಾರಂಪರಿಕ ಕಟ್ಟಡವಾಗಿದೆ.

ಮೈಸೂರಲ್ಲಿ ರಾಸಾಯನಿಕ ಮಿಶ್ರಿತ ಗೋಬಿ ಮಂಚೂರಿ ಮಾರಾಟ

9 ಸ್ಯಾಂಪಲ್‌ಗಳಲ್ಲಿ 5ರಲ್ಲಿ ರಾಸಾಯನಿಕ ಮಿಶ್ರಣ ಪತ್ತೆ

- ಸರ್ಕಾರದ ಎಚ್ಚರಿಕೆಗೆ ಕ್ಯಾರೆ ಎನ್ನದ ವ್ಯಾಪಾರಿಗಳು
- ತಪ್ಪಿತಸ್ಥ ಮಾರಾಟಗಾರರಿಗೆ ನೋಟಿಸ್ ಜಾರಿ
- ಮತ್ತಷ್ಟು ಸ್ಯಾಂಪಲ್ ಸಂಗ್ರಹಕ್ಕೆ ಎಫ್‌ಎಸ್‌ಎಸ್‌ಎಐ ನಿರ್ಧಾರ
- ಆದರೆ ಕಾಟನ್ ಕ್ಯಾಂಡಿಯಲ್ಲಿ ರಾಸಾಯನಿಕ ಬಳಕೆ ಇಲ್ಲ



ಮೈಸೂರು, ಮಾ.30(ಬಿಎಲ್‌ಯು)– ಆರೋಗ್ಯಕ್ಕೆ ಹಾನಿಕಾರಕ ರಾಸಾಯನಿಕ ಮಿಶ್ರಿತ ಗೋಬಿ ಮಂಚೂರಿ ಮಾರಾಟವನ್ನು ಸರ್ಕಾರ ಕಟ್ಟುನಿಟ್ಟಾಗಿ ನಿಷೇಧ ಮಾಡಿದ್ದರೂ ಮೈಸೂರಿನ ಬಹಳಷ್ಟು ಗೋಬಿ ಮಂಚೂರಿ ಮಾರಾಟಗಾರರು ರಾಜಾರೋಷವಾಗಿ ಕೆಮಿಕಲ್ ಹಾಕಿ ಗೋಬಿ ತಯಾರಿಸಿ, ಮಾರಾಟ ಮಾಡುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ರಾಸಾಯನಿಕ ಮಿಶ್ರಿತ ಗೋಬಿ ಮಂಚೂರಿ ಮಾರಾಟಗಾರರಿಗೆ ನೋಟಿಸ್ ಜಾರಿ ಮಾಡಿದ್ದು, ಕಠಿಣ ಕ್ರಮಕ್ಕೆ ಮುಂದಾಗಿದೆ.

ರಾಸಾಯನಿಕ ಮಿಶ್ರಣ ಮಾಡಿದರೆ ನಿರ್ದಾಕ್ಷಿಣ್ಯ ಕ್ರಮ

"ರಾಸಾಯನಿಕ ಮಿಶ್ರಿತ ಗೋಬಿ ಮಂಚೂರಿ ಮಾರಾಟ ಮಾಡದಂತೆ ಈ ತನಕ ಪರಿಣಾಮಕಾರಿ ಜಾಗೃತಿ ಮೂಡಿಸಲಾಗಿದೆ. ಆದರೂ ಮೈಸೂರಿನ ಕೆಲವು ಗೋಬಿ ಮಂಚೂರಿ ಮಾರಾಟಗಾರರು ರಾಸಾಯನಿಕ ಮಿಶ್ರಣ ಮಾಡಿ ಗೋಬಿ ಮಾರಾಟ ಮಾಡುತ್ತಿದ್ದಾರೆ. ಈಗಾಗಲೇ ಒಂಭತ್ತು ಸ್ಥಳಗಳಲ್ಲಿ ಸಂಗ್ರಹಿಸಿದ ಸ್ಯಾಂಪಲ್‌ನಲ್ಲಿ ಐದು ಗೋಬಿ ಮಂಚೂರಿಯಲ್ಲಿ ರಾಸಾಯನಿಕ ಮಿಶ್ರಣ ಮಾಡಿರುವುದು ಪತ್ತೆಯಾಗಿದೆ. ಈ ಸಂಬಂಧ ಮಾರಾಟಗಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಕುರಿತ ಸಮಗ್ರ ವರದಿಯನ್ನು ಪ್ರಾಧಿಕಾರದ ಆಯುಕ್ತರಿಗೆ ನೀಡಿದ್ದು, ಅವರಿಂದ ಸೂಚನೆ ಬಂದ ನಂತರ ಕ್ರಮ ಕೈಗೊಳ್ಳುತ್ತೇವೆ. ಆದರೆ ಮೈಸೂರಿನಲ್ಲಿ ಯಾವ ಸ್ಥಳದಲ್ಲೂ ಕಾಟನ್ ಕ್ಯಾಂಡಿಗೆ ರೊಡೊಮೈನ್ ರಾಸಾಯನಿಕ ಬಳಸುತ್ತಿಲ್ಲ. ಮುಂದಿನ ದಿನಗಳಲ್ಲಿ ಮತ್ತೆ ಗೋಬಿ ಮಂಚೂರಿ ಸ್ಯಾಂಪಲ್ ಸಂಗ್ರಹಿಸಲಾಗುವುದು. ರಾಸಾಯನಿಕ ಮಿಶ್ರಣ ಬಳಸಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

– ರವೀಂದ್ರ, ಮೈಸೂರು ಮುಖ್ಯಸ್ಥರು,
ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ

ಗೋಬಿ ಮಂಚೂರಿ ರುಚಿ ಹೆಚ್ಚಿಸಲು ಟ್ರೆಸೈನ್, ಸನ್ಸೆಟ್ ಎಲ್ಲೋ ಮತ್ತು ಕಾರ್ಮಿಸನ್ ರಾಸಾಯನಿಕ ಬಳಸಲಾಗುತ್ತಿತ್ತು. ಇದರಿಂದ ಆರೋಗ್ಯದ ಮೇಲೆ ಭಾರಿ ಪರಿಣಾಮ ಬೀರುತ್ತಿತ್ತು. ಆದರೆ ಇದರ ಅರಿವಿಲ್ಲದ ತಿಂಡಿ ಪ್ರಿಯರು ರಾಸಾಯನಿಕ ಮಿಶ್ರಿತ ಗೋಬಿ ಮಂಚೂರಿ ಚಪ್ಪರಿಸುತ್ತಿದ್ದರು.

ಆದರೆ ರಾಸಾಯನಿಕ ಮಿಶ್ರಿತ ಗೋಬಿ ಮಂಚೂರಿಯಿಂದ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮವನ್ನು ಸಂಶೋಧನೆ ದೃಢೀಕರಿಸಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರ ಮೈಸೂರು ಸೇರಿದಂತೆ ಕರ್ನಾಟಕದಲ್ಲಿ 171 ಗೋಬಿ ಮಂಚೂರಿ ಸ್ಯಾಂಪಲ್ ಸಂಗ್ರಹ ಮಾಡಿತ್ತು. ಇದರಲ್ಲಿ 107 ಗೋಬಿ ಮಂಚೂರಿಯಲ್ಲಿ ಕೃತಕ ಬಣ್ಣ ಹಾಗೂ ಅನಾರೋಗ್ಯ ಉಂಟು ಮಾಡುವ ರಾಸಾಯನಿಕ ಪತ್ತೆಯಾಗಿತ್ತು.

ಈ ಹಿನ್ನೆಲೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ನಿಯಮ 59ರ ಅಡಿ ಕ್ರಮ ಜರುಗಿಸಲಾಗುವುದು ಎಂದು ಸರ್ಕಾರ ಎಚ್ಚರಿಸಿತ್ತು.

ಆದರೆ ಮೈಸೂರಿನ ಬಹಳಷ್ಟು ಗೋಬಿ ಮಂಚೂರಿ ಮಾರಾಟಗಾರರು ಸರ್ಕಾರದ ಎಚ್ಚರಿಕೆಗೆ ಕ್ಯಾರೆ ಎಂದಿಲ್ಲ. ಗ್ರಾಹಕರನ್ನು ಸೆಳೆಯಲು ರುಚಿ ಹೆಚ್ಚಿಸುವ ರಾಸಾಯನಿಕ ಮಿಶ್ರಣ ಮಾಡುವುದನ್ನು ಮುಂದುವರೆಸಿದ್ದಾರೆ.


ಸರ್ಕಾರದ ಎಚ್ಚರಿಕೆ ನಂತರ ಗೋಬಿ ಮಂಚೂರಿ ಮಾರಾಟಗಾರರು ರಾಸಾಯನಿಕಯುಕ್ತ ಗೋಬಿ ಮಂಚೂರಿ ಮಾರಾಟ ಮಾಡುತ್ತಿದ್ದಾರೆಯೇ ಎಂದು ಪ್ರಾಯೋಗಿಕವಾಗಿ ತಿಳಿಯಲು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳು ಮೈಸೂರಿನ ಒಂಭತ್ತು ವಿವಿಧ ಸ್ಥಳಗಳಲ್ಲಿ ಗೋಬಿ ಮಂಚೂರಿ ಸ್ಯಾಂಪಲ್ ಸಂಗ್ರಹಿಸಿದ್ದರು. ಇದರಲ್ಲಿ ರಾಸಾಯನಿಕ ಮಿಶ್ರಣ ಇದೆಯೇ ಇಲ್ಲವೇ ಎಂದು ತಿಳಿಯಲು ಪ್ರಯೋಗಾಲಯಕ್ಕೆ ಕಳುಹಿಸಿದ್ದರು.

ಆದರೆ ಈಗ ಐದು ಸ್ಥಳಗಳಲ್ಲಿ ಮಾರಾಟ ಮಾಡಿರುವ ಗೋಬಿಯಲ್ಲಿ ರಾಸಾಯನಿಕ ಮಿಶ್ರಣ ಇರುವುದು ದೃಢಪಟ್ಟಿದೆ. ಉಳಿದ 4 ಸ್ಥಳಗಳಲ್ಲಿ ಮಾರಾಟ ಮಾಡಿರುವ ಗೋಬಿ ಮಂಚೂರಿ ರಾಸಾಯನಿಕಮುಕ್ತವಾಗಿದೆ ಎಂದು ಪ್ರಯೋಗಾಲಯದ ಫಲಿತಾಂಶ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ರಾಸಾಯನಿಕ ಮಿಶ್ರಣ ಮಾಡಿ ಗೋಬಿ ತಯಾರಿಸಿರುವ ಮಾರಾಟಗಾರರಿಗೆ ನೋಟಿಸ್ ಜಾರಿ ಮಾಡಿದೆ. ಜೊತೆಗೆ ಇಂತಹವರ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಆಯುಕ್ತರಿಂದ ಉತ್ತರ ಬಂದ ನಂತರ ಮೈಸೂರಿನ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಲಿದ್ದಾರೆ.

ಕಾಟನ್ ಕ್ಯಾಂಡಿಯಲ್ಲಿ ಈ ಮೊದಲು ಕ್ಯಾನ್ಸರ್‌ಗೆ ಕಾರಣವಾಗುವ ರೊಡಮೈನ್ ಬಿ ರಾಸಾಯನಿಕ ಬಳಸಲಾಗುತ್ತಿತ್ತು. ಈ ರಾಸಾಯನಿಕ ಬಳಸಿ ಕಾಟನ್ ಕ್ಯಾಂಡಿ ಮಾರಾಟ ಮಾಡಿದರೆ ಜೈಲು ಶಿಕ್ಷೆ ಹಾಗೂ 10 ಲಕ್ಷ ರೂಪಾಯಿ ದಂಡ ವಿಧಿಸುವ ಎಚ್ಚರಿಕೆ ನೀಡಲಾಗಿತ್ತು. ಇದರ ಪರಿಣಾಮ ಮೈಸೂರಿನ ಯಾವ ಸ್ಥಳದಲ್ಲೂ ರೊಡೋಮೈನ್ ರಾಸಾಯನಿಕ ಬಳಸುತ್ತಿಲ್ಲ. ಆದರೆ ಕೆಲವು ಮಾರಾಟಗಾರರು ಗೋಬಿ ಮಂಚೂರಿಗೆ ರಾಸಾಯನಿಕ ಮಿಶ್ರಣ ಬಳಸುತ್ತಿದ್ದಾರೆ. ಸರ್ಕಾರದ ಯಾವ ಎಚ್ಚರಿಕೆಗೂ ಈ ಮಾರಾಟಗಾರರು ಕ್ಯಾರೆ ಎನ್ನುತ್ತಿಲ್ಲ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮತದಾರ ಭ್ರಷ್ಟನಾದರೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗವೂ ಭ್ರಷ್ಟವಾಗುತ್ತದೆ

ದಮನಿತರ ಬಂಗಾರದ ದಿನ ಕಾರ್ಯಕ್ರಮದಲ್ಲಿ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಕೆ

ಮೈಸೂರು, ಮಾ.30(ಬಿಎಲ್‌ಯು)– ಮತದಾರ ಪ್ರಭುಗಳು ಭ್ರಷ್ಟರಾದರೆ ಈ ದೇಶದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಕೂಡ ಭ್ರಷ್ಟಾಚಾರದಲ್ಲಿ ಮುಳುಗುತ್ತವೆ ಎಂದು ಮೈಸೂರಿನ ಬಹುಜನ ಪೀಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಚಾರ್ವಾಕ ಪ್ರಸ್ತುತಿಯ ವೈಚಾರಿಕ ಸಮ್ಮೇಳನ ದಮನಿತರ ಬಂಗಾರದ ದಿನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಈ ಹಿನ್ನೆಲೆಯಲ್ಲಿ ಮತದಾರರು ಭ್ರಷ್ಟಾಚಾರಿಗಳಾಗದೆ ಜಾತ್ಯಾತೀತ ಹಾಗೂ ಧರ್ಮಾತೀತವಾಗಿ ಮತದಾನ ಮಾಡಬೇಕು ಎಂದು ಸಲಹೆ ನೀಡಿದರು.

ಈ ದೇಶದ ಎಲ್ಲಾ ಸಮಸ್ಯೆಗಳಿಗೆ ಒಂದು ದೊಡ್ಡ ಉತ್ತರವೆಂದರೆ ಅದು ಮತದಾನ. ಒಂದು ಮತ ದೇಶದ ಚರಿತ್ರೆಯನ್ನು ಬದಲಾಯಿಸುತ್ತದೆ. ಆದ ಕಾರಣ ಮತದಾರರು ಎಚ್ಚರಿಕೆಯಿಂದ ಮತದಾನ ಮಾಡಬೇಕು ಎಂದು ಜ್ಞಾನಪ್ರಕಾಶ ಸ್ವಾಮೀಜಿ ಕಿವಿಮಾತು ಹೇಳಿದರು.


ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ಚಾರ್ವಾಕ ಪ್ರಸ್ತುತಿಯ ವೈಚಾರಿಕ ಸಮ್ಮೇಳನ ದಮನಿತರ ಬಂಗಾರದ ದಿನ ಕಾರ್ಯಕ್ರಮದಲ್ಲಿ ಬಹುಜನ ಪೀಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿದರು.

ನಮ್ಮನ್ನು ಈ ನೆಲದ ಕಾನೂನು ಆಳುತ್ತದೆಯೇ ಹೊರತು, ಸರ್ಕಾರವಲ್ಲ. ಯಾವುದಾದರೊಂದು ಪಕ್ಷದ ಸರ್ಕಾರ ಬರುತ್ತದೆ ಹೋಗುತ್ತದೆ. ಆದರೆ ಈ ನೆಲದ ಕಾನೂನು ಮಾತ್ರ ಶಾಶ್ವತವಾಗಿದ್ದು, ಈ ಕಾನೂನು ನಮ್ಮನ್ನು ಆಳುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದರು.

ದಮನಿತರು, ಶೋಷಿತರು ಎಂಬ ಪದಗಳನ್ನು ಇನ್ನು ಎಷ್ಟು ವರ್ಷಗಳ ಕಾಲ ಬಳಸಬೇಕು ಎಂದು ಪ್ರಶ್ನಿಸಿದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಇನ್ನು ಮುಂದಾದರೂ ಈ ಪದಗಳನ್ನು ಯಾರೂ ಬಳಸಬಾರದು ಎಂದು ಕರೆ ನೀಡಿದರು.

> ಯಾವ ಸಮುದಾಯ ಹಕ್ಕು ಮತ್ತು ಅಧಿಕಾರದಿಂದ ವಂಚಿತವಾಗುತ್ತದೆಂಬೋ ಅಂತಹ ಸಮುದಾಯ ಶೋಷಣೆಗೆ ಒಳಗಾಗುತ್ತದೆ. ಆದ ಕಾರಣ ಪ್ರತಿಯೊಂದು ಸಮುದಾಯ ಶೋಷಣೆಯಿಂದ ಮುಕ್ತವಾಗಬೇಕು.
> –ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ.

ಅಸ್ಪೃಶ್ಯರು ಎಂದರೆ ನಮ್ಮನ್ನು ಬೇರೆಯವರು ಮುಟ್ಟಿಸಿಕೊಂಡಿಲ್ಲ ಎಂದು ತಿಳಿಯಬಾರದು. ಅದರ ಬದಲು ನಮ್ಮನ್ನು ಮುಟ್ಟಿಸಿಕೊಳ್ಳಲು ಸಾಧ್ಯವಿಲ್ಲದವರು ಎಂದು ಅರಿಯಬೇಕು ಎಂಬ ಸಲಹೆಯಿತ್ತರು.

ಭಾರತದ ಸಂವಿಧಾನ ವರ್ಸಸ್ ಮನುಸ್ಮೃತಿ ಎಂಬ ಕಿರು ನಾಟಕವನ್ನು ಈ ವೇಳೆ ಪ್ರದರ್ಶಿಸಲಾಯಿತು. ತರುವಾಯ ಮನುವಾದ ವರ್ಸಸ್ ಅಂಬೇಡ್ಕರ್‌ವಾದ ವಿಷಯವಾಗಿ ವಿಚಾರ ಸಂಕಿರಣ ಕೂಡ ನಡೆಯಿತು. ಚಿಂತಕರಾದ ವಾಸು, ಅನಂತ್ ನಾಯಕ್, ಜಗದೀಶ್, ಅಹಿಂದ ಜವರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚುನಾವಣೆ ವೇಳೆ ಅನಧಿಕೃತ ಮದ್ಯ ಸಾಗಾಣಿಕೆಗೆ ಕಡಿವಾಣ ಹಾಕಿ

ಅಧಿಕಾರಿಗಳಿಗೆ ಚುನಾವಣಾ ವೆಚ್ಚ ವೀಕ್ಷಕ ಸುರೇಶ್ ಸೂಚನೆ


ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಚುನಾವಣಾ ವೆಚ್ಚ ವೀಕ್ಷಕ ಸುರೇಶ್ ಹಾಗೂ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮಾ.30(ಬಿಎಲ್‌ಯು)– ಅನಧಿಕೃತ ಮದ್ಯ ಸಾಗಾಣೆ ಹಾಗೂ ಸಂಗ್ರಹಣೆ ಬಗ್ಗೆ ನಿಗಾ ವಹಿಸಲು ಸೂಕ್ಷ್ಮ ಸ್ಥಳಗಳಲ್ಲಿರುವ ಮದ್ಯದ ಅಂಗಡಿಗಳ ಪಟ್ಟಿ ಮಾಡಿ ಪರಿಶೀಲನೆ ನಡೆಸಬೇಕು ಎಂದು ಚುನಾವಣಾ ವೆಚ್ಚ ವೀಕ್ಷಕ ಸುರೇಶ್.ಎ ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಹುಣಸೂರು, ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರಗಳ ಸಹಾಯಕ ವೆಚ್ಚ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಅನಧಿಕೃತ ಮದ್ಯ ಸಾಗಾಣಿಕೆ ಮತ್ತು ಸಂಗ್ರಹಣೆ ತಡೆಗಟ್ಟುವ ಬಗ್ಗೆ ಅಬಕಾರಿ ಇಲಾಖೆಯರು ಮಾತ್ರವಲ್ಲದೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿರುವ ವಿವಿಧ ತಂಡಗಳು ಗಮನಹರಿಸಬೇಕು ಎಂದು ಹೇಳಿದರು.

ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸುವ ನಿಟ್ಟಿನಲ್ಲಿ ಸಹಾಯಕ ವೆಚ್ಚ ವೀಕ್ಷಕರು, ಫ್ಲೈಯಿಂಗ್ ಸ್ಕ್ವಾಡ್, ವಿಡಿಯೋ ಸರ್ವೆಲನ್ಸ್, ವಿಡಿಯೋ ವಿವ್ಹಿಂಗ್ ತಂಡಗಳು, ಸ್ಟ್ಯಾಟಿಕ್ ಸರ್ವೆಲನ್ಸ್ ತಂಡಗಳು ಇನ್ನು ಹೆಚ್ಚು ಜಾಗೃತರಾಗಿ ಕೆಲಸ ಮಾಡಬೇಕು. ಎಂಸಿಸಿ ತಂಡಗಳು ಮಾದರಿ ನೀತಿ ಸಂಹಿತೆ ಉಲ್ಲಂಘನೆ ಆಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

> ಅಭ್ಯರ್ಥಿಗಳು ಮಾಡುವ ಖರ್ಚು ವೆಚ್ಚದ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು. ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕೆ ಬಂದ ಸಂದರ್ಭದಲ್ಲಿ ಕಾರ್ಯಕ್ರಮ ಅಥವಾ ಸಮಾರಂಭಗಳಲ್ಲಿ ಆಗುವ ಖರ್ಚು ವೆಚ್ಚದ ಬಗ್ಗೆ ಕಟ್ಟುನಿಟ್ಟಿನ ನಿಗಾ ವಹಿಸಬೇಕು.
> –ಸುರೇಶ್, ಚುನಾವಣಾ ವೆಚ್ಚ ವೀಕ್ಷಕ

ಬ್ಯಾಂಕ್ ಖಾತೆಗಳಲ್ಲಿ ನಡೆಯುವ ಸಂಶಯಾಸ್ಪದ ವಹಿವಾಟು, ಹೆಚ್ಚಿನ ಹಣ ವರ್ಗಾವಣೆ, ಒಂದು ಖಾತೆಯಿಂದ ಹೆಚ್ಚು ಖಾತೆಗೆ ಹಣ ವರ್ಗಾವಣೆ ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಚುನಾವಣಾ ವೆಚ್ಚ ವೀಕ್ಷಕ ಸುರೇಶ್ ಸೂಚನೆ ನೀಡಿದರು.

ರಾಜಕೀಯ ಪಕ್ಷಗಳು ಪ್ರಚಾರ ಮಾಡಲು ಅನುಮತಿ ಪಡೆಯುವ ನಿಟ್ಟಿನಲ್ಲಿ ತೆರೆದಿರುವ ಏಕಗವಾಕ್ಷಿ ಕೇಂದ್ರದ ವ್ಯವಸ್ಥೆ ಬಗ್ಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಇದೇ ವೇಳೆ ಅಧಿಕಾರಿಗಳಿಗೆ ವಿವರಿಸಿ ಹೇಳಿದರು.

ರಾಜಕೀಯ ಪಕ್ಷಗಳಿಗೆ ನಿಗದಿಯಾಗುವ ಚುನಾವಣಾ ವೆಚ್ಚದ ಕುರಿತು ಸರಿಯಾದ ಲೆಕ್ಕಪತ್ರ ಇರಬೇಕು. ಈ ಸಂಬಂಧ ಯಾವುದೇ ಗೊಂದಲಕ್ಕೆ ಒಳಗಾಗದೆ ಎಲ್ಲಾ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಡಾ.ರಾಜೇಂದ್ರ ಸೂಚಿಸಿದರು.

ಸಭೆಯ ತರುವಾಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ತೆರೆದಿರುವ ಕಂಟ್ರೋಲ್ ರೂಂ, ಮಾಧ್ಯಮ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮಂಡಿ ಠಾಣಾ ವ್ಯಾಪ್ತಿಯಲ್ಲಿ ಪೊಲೀಸರ ಪಥಸಂಚಲನ

ಮತದಾರರಲ್ಲಿ ಮುಕ್ತ-ನ್ಯಾಯಸಮ್ಮತ ಚುನಾವಣಾ ಸಂದೇಶ ರವಾನೆ


ಇನ್ಸ್‌ಪೆಕ್ಟರ್ ವಿವೇಕಾನಂದ ನೇತೃತ್ವದಲ್ಲಿ ಮಂಡಿ ಠಾಣೆ ಪೊಲೀಸರು ಶನಿವಾರ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ನಡೆಸಿದರು.

ಮೈಸೂರು,ಮಾ.30(ಆರ್‌ಕೆ)–ಇದೇ ಏಪ್ರಿಲ್ 26ರ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಆಮಿಷಕ್ಕೊಳಗಾಗದೇ ನಿರ್ಭೀತಿಯಿಂದ ಮತದಾನ ಮಾಡುವಂತೆ ಮೈಸೂರಿನ ಮಂಡಿ ಠಾಣೆ ಪೊಲೀಸರು ಇಂದು ತಮ್ಮ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಪಥಸಂಚಲನ ಮಾಡುವ ಮೂಲಕ ಅಭಯ ನೀಡಿದರು.

ಮಂಡಿ ಠಾಣೆ ಇನ್ಸ್‌ಪೆಕ್ಟರ್ ವಿವೇಕಾನಂದ ನೇತೃತ್ವದಲ್ಲಿ ಇಂದು ಬೆಳಗ್ಗೆ ಸಯ್ಯಾಜಿರಾವ್ ರಸ್ತೆಯ ಹಳೇ ಆರ್‌ಎಂಸಿ ಸರ್ಕಲ್‌ನಿಂದ ರೂಟ್ ಮಾರ್ಚ್ ಆರಂಭಿಸಿದ ಪೊಲೀಸರು, ಅಕ್ಬರ್ ರಸ್ತೆ, ಮಿಷನ್ ಆಸ್ಪತ್ರೆ ರಸ್ತೆ, ಕಬೀರ್ ರೋಡ್, ಇರ್ವಿನ್ ರಸ್ತೆ, ಕೆ.ಟಿ. ಸ್ಟ್ರೀಟ್, ಅಶೋಕ ರಸ್ತೆ, ಜೈಲ್ ಹಿಂಭಾಗದ ರಸ್ತೆಗಳಲ್ಲಿ ಪಥ ಸಂಚಲನ ನಡೆಸಿ, ನಾವು ನಿಮ್ಮೊಂದಿಗಿದ್ದೇವೆ. ಯಾವುದೇ ಒತ್ತಡ, ಹಣದ ಆಮಿಷ, ತೋಳ್ಬಲಕ್ಕೆ ಅಂಜದೇ ಹಕ್ಕು ಚಲಾಯಿಸುವ ಮೂಲಕ ಭವ್ಯ ಭಾರತದ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕೆಂದು ಅರಿವು ಮೂಡಿಸಿದರು. ಎನ್‌ಆರ್ ಉಪ ವಿಭಾಗದ ಎಸಿಪಿ ಸುಧಾಕರ ಮಾರ್ಗದರ್ಶನದಲ್ಲಿ ಸಿವಿಲ್ ಪೊಲೀಸರು, ಪ್ಯಾರಾ ಮಿಲಿಟರಿ ಪಡೆಯ 200ಕ್ಕೂ ಹೆಚ್ಚು ಸಿಬ್ಬಂದಿ ಮಂಡಿ ಠಾಣಾ ಸರಹದ್ದಿನ ಪ್ರಮುಖ ಬೀದಿ, ಜಂಕ್ಷನ್‌ಗಳಲ್ಲಿ ರೂಟ್ ಮಾರ್ಚ್ ಮಾಡಿ ಮತದಾರರಿಗೆ ರಕ್ಷಣೆ ನೀಡುವ ಸಂದೇಶ ರವಾನಿಸಿ ಆತ್ಮವಿಶ್ವಾಸ ಮೂಡಿಸಿದರು.

ಮೈಸೂರು ಜಿಲ್ಲೆಯಲ್ಲಿ ಅಕ್ರಮ, ದಾಖಲೆಗಳಿಲ್ಲದ ಮದ್ಯ ವಶ

ಮೈಸೂರು,ಮಾ.30– ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಅಂಗವಾಗಿ ನಂಜನಗೂಡಿಂದ ಹುಣಸೂರಿಗೆ ಸರಬರಾಜಾದ 650 ಮಿಲಿಯ ಕಿಂಗ್ ಫಿಷರ್ ಸ್ಟ್ರಾಂಗ್ ಪ್ರೀಮಿಯಂನ ಒಟ್ಟು 1150 ರ.ಪೆ ಬಿಯರ್‌ನ ಪೈಕಿ 7 ರಟ್ಟಿನ ಪೆಟ್ಟಿಗೆಗಳಲ್ಲಿ Barcode, QR Code, Stickers ಅಥವಾ ಕಂಟ್ರೋಲಿಂಗ್ ಭದ್ರತಾ ಚೀಟಿಗಳು ಇರುವುದಿಲ್ಲ ಹಾಗೂ 2 ರಟ್ಟಿನ ಪೆಟ್ಟಿಗೆಗಳ ಬಾರ್‌ಕೋಡ್ ಇದ್ದರೂ ಅವುಗಳು ಮಿಸ್ ಮ್ಯಾಚ್ ಆಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಹುಣಸೂರು ಉಪವಿಭಾಗದ ಅಬಕಾರಿ ನಿರೀಕ್ಷಕಿ ಗೀತಾ ನಂಜನಗೂಡಿನ ಯುನೈಟೆಡ್ ಬ್ರೀವರೀಸ್ ಲಿ.ನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದರ ಒಟ್ಟು ಮೌಲ್ಯ ರೂ. 23,07,049 ಗಳಾಗಿರುತ್ತವೆ.



ಚುನಾವಣೆ ನೀತಿ ಸಂಹಿತೆ ಜಾರಿಯಾದ ಮಾ.16ರಿಂದ 29ರವರೆಗೆ ಮೈಸೂರು ಗ್ರಾಮಾಂತರ ಜಿಲ್ಲೆಯ ಅಬಕಾರಿ ಇಲಾಖಾ ವತಿಯಿಂದ ಅಕ್ರಮ ಮದ್ಯ ಚಟುವಟಿಕೆಗಳನ್ನು ಪತ್ತೆಹಚ್ಚಿ ಅಬಕಾರಿ ಕಾನೂನಿನನ್ವಯ ಒಟ್ಟು 148 ಮೊಕದ್ದಮೆಗಳನ್ನು ದಾಖಲಿಸಿದ್ದು, 376.445 ಲೀ. ಮದ್ಯ, 351432 630 ಲೀ. ಬಿಯರ್ ಮತ್ತು ಒಟ್ಟು 18 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಒಟ್ಟಾರೆ ಮೌಲ್ಯ 8,36,37,858 ರೂ. ಆಗಿರುತ್ತದೆ ಎಂದು ಮೈಸೂರು ಗ್ರಾಮಾಂತರ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆರಿಗೆ ಭಯೋತ್ಪಾದನೆ ಮೂಲಕ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮಣಿಸುವ ಭ್ರಮೆ

● ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ● ಇಡಿ, ಐಟಿ, ಸಿಬಿಐ ಮೂಲಕ ಕಾಂಗ್ರೆಸ್ ವಿರುದ್ಧ ವಂಚನೆ ಆರೋಪ



ಬೆಂಗಳೂರು, ಮಾ.30(ಕೆಎಂಶಿ)–ಇಡಿ, ಐಟಿ, ಸಿಬಿಐ ಸಂಸ್ಥೆಗಳ ಮೂಲಕ 'ತೆರಿಗೆ ಭಯೋತ್ಪಾದನೆ' ನಡೆಸಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮಣಿಸಬಹುದೆಂಬ ಭ್ರಮೆಯಲ್ಲಿ ಬಿಜೆಪಿ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾಂಗ್ರೆಸ್ ಮೇಲೆ ವರಮಾನ ತೆರಿಗೆ ಪಾವತಿ ಮಾಡಿಲ್ಲವೆಂಬ ಆರೋಪ ಹೊರಿಸಿ 1,823 ಕೋಟಿ ಪಾವತಿಸುವಂತೆ ಆದಾಯ ತೆರಿಗೆ (ಐಟಿ) ಇಲಾಖೆ ನೋಟಿಸ್ ನೀಡಿದೆ, 2017–18ರಲ್ಲಿ ಬಿಜೆಪಿ ಹೆಸರೇ ನಮೂದಿಸದ 92 ದಾನಿಗಳಿಂದ ಮತ್ತು ವಿಳಾಸವೇ ನೀಡದ 1,297 ದಾನಿಗಳಿಂದ 42 ಕೋಟಿ ರೂ.ಗಿಂತ ಹೆಚ್ಚು ದೇಣಿಗೆ ಪಡೆದಿರುವುದನ್ನು ಕಾಂಗ್ರೆಸ್ ನಾಯಕರು ಬಯಲಿಗೆಳೆದಿದ್ದಾರೆ.

ಕಾಂಗ್ರೆಸ್‌ಗೆ ಅನ್ವಯಿಸಿದ ಮಾನದಂಡವನ್ನೇ ಬಿಜೆಪಿಗೂ ಅಳವಡಿಸಿದರೆ ಕಳೆದ ಏಳು ವರ್ಷಗಳ ತೆರಿಗೆ ಉಲ್ಲಂಘನೆಗಳಿಗೆ ಆ ಪಕ್ಷ 4,263 ಕೋಟಿ ಪಾವತಿಸಬೇಕಾಗುತ್ತದೆ. ಚುನಾವಣೆ ಘೋಷಣೆಯಾಗುತ್ತಿದ್ದಂತೆ ಟಿಎಂಸಿ, ಸಿಪಿಐ ಸೇರಿದಂತೆ ವಿವಿಧ ವಿರೋಧ ಪಕ್ಷಗಳ ಮೇಲೂ ತೆರಿಗೆ ಭಯೋತ್ಪಾದನೆ ಅಸ್ತ್ರ ಪ್ರಯೋಗ ಮಾಡಿರುವ ಐಟಿ, ಬಿಜೆಪಿಯ ತೆರಿಗೆ ಉಲ್ಲಂಘನೆ ಬಗ್ಗೆ ಜಾಣ ಕುರುಡು ಪ್ರದರ್ಶಿಸುತ್ತಿದೆ, ದೇಶದ ಜನತೆ ಇದನ್ನು ತಿಳಿಯದಷ್ಟು ದಡ್ಡರಲ್ಲ. ಕಾಂಗ್ರೆಸ್ ಪಕ್ಷದ ಕೆಲವು ನಾಯಕರ ಡೈರಿಗಳೆಂದು ಹೇಳಲಾದ ದಾಖಲೆ ಪತ್ರಗಳನ್ನು ಮುಂದಿಟ್ಟುಕೊಂಡು ತೆರಿಗೆ ಉಲ್ಲಂಘನೆ ಆರೋಪ ಮಾಡುತ್ತಿರುವ ಐಟಿ ಇಲಾಖೆಗೆ, ಕರ್ನಾಟಕದಲ್ಲಿ ಬಯಲಾಗಿದ್ದ ಯಡಿಯೂರಪ್ಪ ಡೈರಿಗಳಾಗಲೀ, ಮೋದಿ ಅವರೂ ಫಲಾನುಭವಿ ಎಂದು ಆರೋಪಿಸಲಾಗಿರುವ 'ಬಿರ್ಲಾ–ಸಹಾರಾ' ಡೈರಿಯಾಗಲೀ ಏಕೆ ಕಣ್ಣಿಗೆ ಬಿದ್ದಿಲ್ಲ ಎಂದು ಪ್ರಶ್ನಿಸಿದ್ದಾರೆ. ಚುನಾವಣಾ ಬಾಂಡ್‌ಗಳ ಮೂಲಕ ಸಾವಿರಾರು ಕೋಟಿಗಳನ್ನು ಆಡಳಿತಾರೂಡ ಬಿಜೆಪಿ ಸುಲಿಗೆ ಮಾಡಿರುವುದು ಜಗಜ್ಜಾಹೀರಾಗಿದೆ, ಈ ಹಗರಣದಿಂದ ಜನರ ಗಮನ ಬೇರೆಡೆ ಸೆಳೆಯುವ ಹಾಗೂ ವಿರೋಧ ಪಕ್ಷಗಳನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ದುರುದ್ದೇಶದಿಂದ ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರ ವರಮಾನ ತೆರಿಗೆ ವಂಚನೆಯ ಸುಳ್ಳು ಆರೋಪ ಮಾಡುತ್ತಿದೆ. ಕಳೆದ ಐದು ವರ್ಷಗಳಲ್ಲಿ ವಿಜಯ್ ಮಲ್ಯ, ನೀರವ್ ಮೋದಿಯಂತಹ ಬ್ಯಾಂಕ್ ವಂಚಕರ 10.09 ಲಕ್ಷ ಕೋಟಿ ಬ್ಯಾಂಕ್ ಸಾಲ ಮನ್ನಾ ಮಾಡಿರುವ ಕೇಂದ್ರ ಸರ್ಕಾರ ಇವರಿಂದ ಪಡೆದಿರುವ ಕಮಿಷನ್ ಹಣ ಎಷ್ಟು ಎಂಬುದನ್ನು ದೇಶದ ಜನತೆಗೆ ತಿಳಿಸಬೇಕು. ಕಾಂಗ್ರೆಸ್ ಶಕ್ತಿ ಹಣದ ಬಲ ಅಲ್ಲ, ಜನ ಬಲ, ಬಿಜೆಪಿಯಲ್ಲಿ ಹಣ ಬಲ ಇದ್ದರೆ, ನಮ್ಮಲ್ಲಿ ಜನ ಬಲ ಇದೆ, ತೆರಿಗೆ ವಂಚಕರು, ಬ್ಯಾಂಕ್‌ಗಳನ್ನು ಮುಳುಗಿಸಿದವರು, ಗಣಿ ಲೂಟಿಕೋರರು, ಕಾಳಸಂತೆಕೋರರು, ಕಳ್ಳ–ಖದೀಮರೇ ಬಿಜೆಪಿಯ ಬಲ ಎಂದು ಆರೋಪಿಸಿದ್ದಾರೆ. ಬಿಜೆಪಿ, ಭ್ರಷ್ಟರ ಹಣ ನುಂಗಿ ಪ್ರಾಮಾಣಿಕತೆಯ ಸರ್ಟಿಫಿಕೇಟ್ ನೀಡುವ ವಾಷಿಂಗ್ ಮೆಶಿನ್ ಆಗಿದೆ, ಭ್ರಷ್ಟರು ತನಿಖೆಯಿಂದ ತಪ್ಪಿಸಿಕೊಳ್ಳಲು ಹಾಗೂ ಶಿಕ್ಷೆಯಿಂದ ಪಾರಾಗಲು ಬಿಜೆಪಿ ಸೇರಿಕೊಂಡರೆ ಸಾಕು, ಪಾಪಗಳೆಲ್ಲವೂ ತನ್ನಿಂದ ತಾನೇ ಶುದ್ಧವಾಗುತ್ತದೆ. ಬಿಜೆಪಿಯಲ್ಲಿದ್ದುಕೊಂಡು ಎಷ್ಟು ಬೇಕಾದರೂ ಭ್ರಷ್ಟಾಚಾರ ಮಾಡಬಹುದು, ಜನರ ಹಣ ಲೂಟಿ ಮಾಡಬಹುದು, ಅವರ ಮೇಲೆ ಯಾವ ಕೇಸೂ ದಾಖಲಾಗುವುದಿಲ್ಲ, ಯಾವ ತನಿಖಾ ಸಂಸ್ಥೆಯೂ ಹುಡುಕಿಕೊಂಡು ಬರುವುದಿಲ್ಲ.

ಬಿಜೆಪಿ ಅಧಿಕಾರಕ್ಕೆ ಬಂದಿರುವುದು ಮತ್ತು ಅಧಿಕಾರ ಉಳಿಸಿಕೊಂಡಿರುವುದೇ ಲೂಟಿ ಹಣದಿಂದ, ಕರ್ನಾಟಕದಲ್ಲಿ ನಡೆಸುತ್ತಾ ಬರುತ್ತಿರುವ ಆಪರೇಷನ್ ಕಮಲವೇ ಇದಕ್ಕೆ ಉತ್ತಮ ಉದಾಹರಣೆ ಎಂದಿದ್ದಾರೆ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ 400 ಸ್ಥಾನಗಳಿಗೂ ಹೆಚ್ಚು ಗೆಲ್ಲುತ್ತೇವೆ ಎಂದು ಎದೆ ತಟ್ಟಿಕೊಳ್ಳುತ್ತಿರುವ ಪ್ರಧಾನಿ ಮೋದಿ ಅವರು, ವಿರೋಧ ಪಕ್ಷಗಳನ್ನು ಹಣಿಯಲು ಅಕ್ರಮ ಕೃತ್ಯಗಳಿಗೆ ಇಳಿದಿರುವುದನ್ನು ನೋಡಿದರೆ ಅವರ ಸೋಲು ಗೋಡೆ ಮೇಲಿನ ಬರಹದಂತೆ ಸ್ಪಷ್ಟವಾಗಿ ಕಾಣಿಸತೊಡಗಿದೆ ಎಂದರ್ಥ.

ನೆಲ, ಜಲ, ಭಾಷೆ ರಕ್ಷಣೆ ವಿಷಯದಲ್ಲಿ ದೇವೇಗೌಡರ ನಿಲುವಿಗೆ ಗೌರವವಿತ್ತು

ದೇವೇಗೌಡರ ಜೊತೆ ರಾಜಕೀಯವಾಗಿ ಭಿನ್ನಾಭಿಪ್ರಾಯವಿದ್ದರೂ, ನಮ್ಮ ನೆಲ, ಜಲ ಮತ್ತು ಭಾಷೆ ರಕ್ಷಣೆ ಬಗೆಗಿನ ಅವರ ನಿಲುವಿಗೆ ಗೌರವ ಇತ್ತು. ಆದರೆ ಕಳೆದ 10 ವರ್ಷಗಳ ಅಧಿಕಾರವಧಿಯಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಹೆಜ್ಜೆಹೆಜ್ಜೆಗೂ ಕರ್ನಾಟಕದ ಹಿತಾಸಕ್ತಿ ವಿರುದ್ಧವೇ ಕೆಲಸ ಮಾಡಿದೆ. ನಾಡಧ್ವಜಕ್ಕೆ ವಿರೋಧ, ಹಿಂದಿ ಹೇರಿಕೆ, ಕಾವೇರಿ, ಕೃಷ್ಣ, ಮಹದಾಯಿ ಜಲವಿವಾದಗಳಲ್ಲಿ ಅನ್ಯಾಯ, ಕೇಂದ್ರ ಸ್ವಾಮ್ಯದ ಸಂಸ್ಥೆಗಳಲ್ಲಿ ಕನ್ನಡಿಗ ಯುವಜನರಿಗೆ ವಂಚನೆ ಆಗಿದೆ. ಕೇಂದ್ರದ ಬಿಜೆಪಿ ಸರ್ಕಾರ ತೆರಿಗೆ ಹಂಚಿಕೆಯಲ್ಲಿನ ಅನ್ಯಾಯವನ್ನು ತಮಿಳುನಾಡು, ಕೇರಳ, ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಕೂಗಿ ಕೂಗಿ ಹೇಳುತ್ತಿವೆ, ಆದರೆ ಜೆಡಿಎಸ್ ನೆಲ–ಜಲ–ಭಾಷೆ ವಿರೋಧಿಗಳ ಜೊತೆ ರಾಜೀ ಮಾಡಿಕೊಂಡು ಕನ್ನಡಿಗರಿಗೆ ದ್ರೋಹ ಎಸಗಿದೆ. ತಮ್ಮ ರಾಜಕೀಯ ಜೀವನದುದ್ದಕ್ಕೂ ಪ್ರಾದೇಶಿಕ ಆಶೋತ್ತರಗಳನ್ನು ಪ್ರತಿಪಾದಿಸಿಕೊಂಡು ಕೇಂದ್ರದ ಅಧಿಪತ್ಯವನ್ನು ಪ್ರಶ್ನಿಸುತ್ತಾ ಬಂದ ದೇವೇಗೌಡರು, ಇಳಿವಯಸ್ಸಿನಲ್ಲಿ ಕೇವಲ ರಾಜಕೀಯ ಲಾಭಕ್ಕಾಗಿ ಮೈತ್ರಿ ಮಾಡಿಕೊಂಡು ಸಮಸ್ತ ಕನ್ನಡಿಗರು ತಲೆತಗ್ಗಿಸುವಂತೆ ಮಾಡಿದ್ದಾರೆ. ಇದಕ್ಕಾಗಿ ದೇವೇಗೌಡರು ಮತ್ತು ಅವರ ಪಕ್ಷ ಭಾರಿ ಬೆಲೆ ತೆರಲಿರುವುದು ಖಚಿತ ಎಂದಿದ್ದಾರೆ.

ರಾಜಕೀಯ ಸಭೆ, ಸಮಾರಂಭಗಳಿಗೆ ಅನುಮತಿ ಕಡ್ಡಾಯ

ಮೈಸೂರು,ಮಾ.30(ಆರ್‌ಕೆ)– ರಾಜಕೀಯ ಸಭೆ ಸಮಾರಂಭ ನಡೆಸಲು ಕಡ್ಡಾಯವಾಗಿ ಅನುಮತಿ ಪಡೆಯಬೇಕೆಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ತಿಳಿಸಿದ್ದಾರೆ. ಧಾರ್ಮಿಕ, ಕೌಟುಂಬಿಕ ಕಾರ್ಯಕ್ರಮಗಳಿಗೆ ಅನುಮತಿ ಪಡೆಯುವ ಅಗತ್ಯವಿಲ್ಲ. ಆದರೆ ಆ ಬಗ್ಗೆ ಚುನಾವಣಾಧಿಕಾರಿಗಳಿಗೆ ಮಾಹಿತಿ ನೀಡಬೇಕು. ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚುನಾವಣಾ ಸಂಬಂಧ ನಡೆಯುವ ಸಭೆ, ಸಮಾರಂಭಗಳಿಗೆ ತಂಡಗಳ ಅಧಿಕಾರಿಗಳು ಪರಿಶೀಲನೆಗೆ ಬಂದಾಗ ಸಹಕರಿಸುವಂತೆಯೂ ಜಿಲ್ಲಾಧಿಕಾರಿ ಡಾ.ರಾಜೇಂದ್ರ ತಿಳಿಸಿದ್ದಾರೆ



ಪ್ರತಿ ಚುನಾವಣೆಯಲ್ಲಿ ಕಾಂಗ್ರೆಸ್ ಓಬಿಸಿ ಘಟಕದ್ದು ನಿರ್ಣಾಯಕ ಪಾತ್ರ


● ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್ ಪ್ರಶಂಸೆ ● ಲೋಕಸಭಾ ಚುನಾವಣೆಯಲ್ಲೂ ಸಕ್ರಿಯವಾಗಲು ಕರೆ

ಮೈಸೂರು, ಮಾ.30(ಎಸ್‌ಬಿಡಿ)– ಕಳೆದ ವಿಧಾನಸಭಾ ಚುನಾವಣೆ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಓಬಿಸಿ ಘಟಕ, ಲೋಕಸಭಾ ಚುನಾವಣೆಯಲ್ಲೂ ಸಂಘಟನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಹೇಳಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಗೆಲುವಿಗೆ ಕಾರ್ಯಕ್ರಮ ರೂಪಿಸುವ ಸಂಬಂಧ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ (ಓಬಿಸಿ) ಘಟಕದ ವತಿಯಿಂದ ಶುಕ್ರವಾರ ನಗರದ ಕಾಂಗ್ರೆಸ್ ಭವನದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಗರ ಓಬಿಸಿ ಘಟಕ ಎಲ್ಲಾ ಚುನಾವಣೆಗಳಲ್ಲೂ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದೆ. ಎನ್.ಆರ್.ನಾಗೇಶ್ ಘಟಕದ ಅಧ್ಯಕ್ಷರಾಗಿ ಒಂದು ವರ್ಷ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ್ದಾರೆ. ಇವರ ತಂಡ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಿದೆ. ಹಾಗೆಯೇ ಲೋಕಸಭಾ ಚುನಾವಣೆಯಲ್ಲೂ ನಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಗೆಲುವಿಗೆ ದುಡಿಯಬೇಕು ಎಂದು ತನ್ವೀರ್ ಸೇಠ್ ತಿಳಿಸಿದರು.

ಓಬಿಸಿ ಘಟಕ ಸಂಘಟನಾತ್ಮಕವಾಗಿ ಗಟ್ಟಿಯಾದಷ್ಟು ಪಕ್ಷಕ್ಕೆ ಉತ್ತಮ ಲಾಭ. ಈ ನಿಟ್ಟಿನಲ್ಲಿ ಎಲ್ಲಾ ಸಣ್ಣ ಸಣ್ಣ ಸಮುದಾಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಬಲಿಷ್ಠಗೊಳಿಸಬೇಕು. ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕು. ಮನೆ ಮನೆಗೆ ತೆರಳಿ ಗ್ಯಾರಂಟಿಗಳಿಂದಾಗಿರುವ ಪ್ರಯೋಜನದ ಬಗ್ಗೆ ತಿಳಿಸಿಕೊಡಬೇಕು. ನಮ್ಮ ಅಭ್ಯರ್ಥಿ ಗೆಲ್ಲಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಎಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಕರೆ ನೀಡಿದರು.


ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ನಗರ ಓಬಿಸಿ ಘಟಕದ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಹಾಗೂ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್ ಅವರನ್ನು ಅಭಿನಂದಿಸಲಾಯಿತು.

ನಗರ ಓಬಿಸಿ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ನಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸುವ ನಿಟ್ಟಿನಲ್ಲಿ ನಾವೆಲ್ಲಾ ಸಘಂಟಿತರಾಗುವ ನಿಟ್ಟಿನಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್ ಅವರು ಮಾರ್ಗದರ್ಶನ ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಘಟಕದ ಅಧ್ಯಕ್ಷನಾಗಿ ಒಂದು ವರ್ಷ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಹಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಪಕ್ಷದ ಪದಾಧಿಕಾರಿಗಳು ಸೇರಿದಂತೆ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ ಎಂದರು.

ಇದೇ ವೇಳೆ ಕೆಪಿಸಿಸಿ ನೂತನ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ ತನ್ವೀರ್ ಸೇಠ್ ಹಾಗೂ ನಗರ ಓಬಿಸಿ ಘಟಕದ ಅಧ್ಯಕ್ಷರಾಗಿ ಒಂದು ವರ್ಷ ಪೂರೈಸಿದ ಎನ್.ಆರ್.ನಾಗೇಶ್ ಅವರನ್ನು ಅಭಿನಂದಿಸಲಾಯಿತು.

ಸಭೆಯಲ್ಲಿ ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಪಾಲಿಕೆ ಮಾಜಿ ಸದಸ್ಯ ನಾಗಭೂಷಣ್, ರಾಜ್ಯ ಓಬಿಸಿ ಘಟಕದ ಮಹದೇವು, ಬಸವಣ್ಣ, ಮೂಗನಚಾರಿ, ರವಿಕುಮಾರ, ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ರಾರ್, ನಗರ ಓಬಿಸಿ ಘಟಕದ ಈ.ರಾಜು ಉಪ್ಪಾರ್, ರವಿ ಕುಂಬಾರ್, ಮಹೇಶ್ ಮಡಿವಾಳ್, ದಿನೇಶ್, ವೆಂಕಟೇಶ್ ಗುಂಡ, ಕಿರಣ್ ಕುಮಾರ್, ಗೋಪಾಲ್, ಲಕ್ಷ್ಮಿ ನಾರಾಯಣ, ಡಾ.ವಿಜಯರಾಜ್, ಡಾ.ವೆಂಕಟೇಶ, ರಮೇಶ ರಾಮಪ್ಪ, ಕುಮುದ, ಮಂಗಳ, ಶಾಂತಕುಮಾರಿ, ನಾಗರಾಜ್, ಮಹೇಶ್, ರಾಮು, ಮಹೇಂದ್ರ ಕಾಗಿನೆಲೆ, ಶಂಕರ್, ಬಸವರಾಜು, ಇಂದಿರಾಗಾಂಧಿ ಬ್ಲಾಕ್ ಓಬಿಸಿ ಘಟಕದ ಅಧ್ಯಕ್ಷ ಸಿದ್ದಪ್ಪಾಜಿ ವಿಶ್ವಕರ್ಮ, ದೇವರಾಜ್ ಬ್ಲಾಕ್ ಅಧ್ಯಕ್ಷ ವೆಂಕಟೇಶ್ ಗಾಣಿಗ, ಕೃಷ್ಣರಾಜ ಬ್ಲಾಕ್ ಅಧ್ಯಕ್ಷ ರವಿ ಮಡಿವಾಳ್, ದೇವರಾಜ ಅರಸು ಬ್ಲಾಕ್ ಅಧ್ಯಕ್ಷ ಶ್ರೀಧರ್, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲ್, ಸಾಹುಕಾರ ಚನ್ನಯ ಬ್ಲಾಕ್ ಓಬಿಸಿ ಅಧ್ಯಕ್ಷ ಮಹೇಂದ್ರ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಮೈಸೂರು ಮಿತ್ರ ಭಾನುವಾರ 31 ಮಾರ್ಚ್ 2024

ಮೋದಿ ಮತ್ತೆ ಪ್ರಧಾನಿಯಾಗಿ ಹ್ಯಾಟ್ರಿಕ್ ಸಾಧನೆ

ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಪ್ರತಾಪ್ ಸಿಂಹ ಭವಿಷ್ಯ



ಜೆಡಿಎಸ್–ಬಿಜೆಪಿ ಕಾರ್ಯಕರ್ತರ ಮೈತ್ರಿ ಸಭೆಯನ್ನು ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಿದರು.

ಕೆ.ಆರ್.ಪೇಟೆ, ಮಾ.30–ದೇಶಾದ್ಯಂತ ಬಿಜೆಪಿ ಪರ ಅಲೆ ಇರುವುದರಿಂದ ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾಗಿ ಹ್ಯಾಟ್ರಿಕ್ ಸಾಧನೆ ಮಾಡುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಕಾವೇರಿ ಉಳಿವಿಗೆ ಕುಮಾರಸ್ವಾಮಿ ಅವರು ಮಂಡ್ಯ ಸಂಸದರಾಗಿ ಕೇಂದ್ರ ಕೃಷಿ ಸಚಿವರಾಗಬೇಕು. ಹಾಗಾಗಿ ಮತದಾರರು ಮೈತ್ರಿ ಅಭ್ಯರ್ಥಿ ಕುಮಾರಸ್ವಾಮಿ ಅವರನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಬೇಕು ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದರು.

ಪಟ್ಟಣದ ಎಸ್.ಎಂ.ಲಿಂಗಪ್ಪ ಹಾಗೂ ಎಂ.ಕೆ.ಬೊಮ್ಮೇಗೌಡ ಸಹಕಾರ ಭವನದ ಆವರಣದಲ್ಲಿ ನಡೆದ ಜೆಡಿಎಸ್–ಬಿಜೆಪಿ ಪಕ್ಷಗಳ ಎನ್‌ಡಿಎ ಮೈತ್ರಿಕೂಟದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯ ಸೇರಿದಂತೆ ದೇಶಾದ್ಯಂತ ಮೋದಿ ಹವಾ ಹೆಚ್ಚಾಗಿದೆ. ಅದರಲ್ಲಿಯೂ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗಿ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಅವರು ಸ್ಪರ್ಧಿಸಿರುವುದು ನಮ್ಮೆಲ್ಲರ ಪುಣ್ಯ. ಜಿಲ್ಲೆಯ ಜನತೆಗೆ ಕುಮಾರಸ್ವಾಮಿ ಅವರಿಗೆ ಇದೇ ಪ್ರಥಮ ಭಾರಿಗೆ ಮತದಾನ ಮಾಡುವ ಅವಕಾಶ ಸಿಕ್ಕಿದೆ. ಜಿಲ್ಲೆಯ ರೈತಾಪಿ ವರ್ಗ ಹಾಗೂ ಜನತೆಯ ಸ್ವಾಭಿಮಾನವನ್ನು ಎತ್ತಿಹಿಡಿಯಲು ಸ್ವತಃ ಕುಮಾರಣ್ಣ ಅವರೇ ಅಭಿಮಾನಿಗಳ ಒತ್ತಾಯಕ್ಕೆ ಕಟ್ಟು ಬಿದ್ದು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದಾರೆ. ಮಂಡ್ಯ ಚುನಾವಣೆಯು ಇಡೀ ದೇಶದ ಗಮನ ಸೆಳೆದಿದೆ ಎಂದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ರಾಜ್ಯ ಯುವ ಜೆಡಿಎಸ್ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಸಭೆಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕರಾದ ರವೀಂದ್ರ ಶ್ರೀಕಂಠಯ್ಯ, ಕೆ.ಸುರೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಜಿಲ್ಲಾ ಬಿಜೆಪಿ ಚುನಾವಣಾ ಉಸ್ತುವಾರಿ ಸುನಿಲ್ ಸುಬ್ರಹ್ಮಣ್ಯ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಇಂದ್ರೇಶ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ನೆಲ್ಲಿಗೆರೆ ಬಾಲು, ಕೆ.ಜಿ.ತಮ್ಮಣ್ಣ, ಎಂ.ಬಿ.ಹರೀಶ್, ಅಕ್ಕಿಹೆಬ್ಬಾಳು ಎ.ಆರ್.ರಘು, ಮಲ್ಲೇನಹಳ್ಳಿ ಮೋಹನ್, ರಾಜ್ಯ ಸಹಕಾರ ಮಾರಾಟ ಮಹಾಮಂಡಲದ ನಿರ್ದೇಶಕ ಎಸ್.ಎಲ್.ಮೋಹನ್, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎಸ್.ಆರ್.ದಿನೇಶ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ, ತಾಲೂಕು ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್ ಮುಂತಾದವರು ಭಾಗವಹಿಸಿದ್ದರು.

> “ಕುಮಾರಣ್ಣ ಅವರು ಕನಿಷ್ಠ 3 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಭರ್ಜರಿ ಗೆಲುವು ದಾಖಲಿಸುವ ಮೂಲಕ ಅತೀ ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸಿದ ಸಂಸದರೆಂಬ ಹಿರಿಮೆಗೆ ಭಾಜನರಾಗುವ ಜೊತೆಗೆ ಕೇಂದ್ರದಲ್ಲಿ ಪ್ರಧಾನಿ ಮೋದಿ ಅವರ ಸಂಪುಟದಲ್ಲಿ ದೇಶದ ಕೃಷಿ ಸಚಿವರಾಗಿ ನಮ್ಮ ರಾಜ್ಯ ಸೇರಿ ದಂತೆ ಮಂಡ್ಯ ಜಿಲ್ಲೆಯನ್ನು ಅಭಿವೃದ್ಧಿಪಡಿಸುವ ಜೊತೆಗೆ ಅನ್ನದಾತರ ನೋವಿಗೆ ದನಿಯಾಗಲಿದ್ದಾರೆ.
>
> –ಪ್ರತಾಪ್ ಸಿಂಹ, ಸಂಸದ.

ಹಿರಿಕೆರೆಯಲ್ಲಿ ಮೀನುಗಳ ದುರಂತ ಸಾವು



ನಾಗಮಂಗಲ.,ಮಾ.30– ಪಟ್ಟಣದ ಹಿರಿಕೆರೆಯಲ್ಲಿ ದಿನದಿಂದ ದಿನಕ್ಕೆ ಮೀನುಗಳ ದುರಂತ ಸಾವುಗಳು ಹೆಚ್ಚಾಗಿದ್ದು ಯಾವುದೇ ಮುಂಜಾಗ್ರತ ಕ್ರಮ ಕೈಗೊಳ್ಳದೆ ಇರುವುದು ಆತಂಕ ಮೂಡಿಸಿದೆ.

ನಾಗಮಂಗಲ ಪಟ್ಟಣದ ಹಿರಿಕೆರೆಯನ್ನು ನಾಗಮಂಗಲ ಗಂಗಾಮತಸ್ಥರ ಸಂಘವು ವಹಿಸಿಕೊಂಡಿದ್ದು ಈ ಬಾರಿ ಅವರು ಹಾಕಿರುವ ಬಂಡವಾಳ ಬರಲಾಗದ ಸ್ಥಿತಿ ಒದಗಿ ಬಂದಿದ್ದು ಹೇಮಾವತಿ ಹಾಗೂ ಪುರಸಭೆ ಅಧಿಕಾರಿಗಳು ಕಂಡು ಕಾಣದಂತಿರುವುದು ಆತಂಕ ಮೂಡಿಸಿದೆ. ಹಿರಿಕೆರೆಯ ಕೆರೆ ಪಟ್ಟಣದ ಒಳಚರಂಡಿಯ ವ್ಯವಸ್ಥೆ ಸರಿ ಇಲ್ಲದೆ ಇರುವುದೇ ಈ ದುರಂತಕ್ಕೆ ಕಾರಣವಾಗಿದೆ. ಹಿರಿಕೆರೆ ಅಚ್ಚುಕಟ್ಟು 120 ಎಕರೆ ಪ್ರದೇಶವು ಹೇಮಾವತಿಯ ಯೋಜನೆಗೆ ಸೇರಿದ್ದು ಸಂಬಂಧಪಟ್ಟ ಅಧಿಕಾರಿಗಳು ಇತ್ತ ಕಡೆ ಗಮನಿಸಬೇಕಾಗಿದೆ.

ನಾಳೆ ಸ್ಟಾರ್ ಚಂದ್ರು ನಾಮಪತ್ರ ಸಲ್ಲಿಕೆ

ಡಿಸಿಎಂ, ಸುರ್ಜೇವಾಲ ಭಾಗಿ: ಸಚಿವ ಚಲುವರಾಯಸ್ವಾಮಿ

ಮಂಡ್ಯ,ಮಾ.30– ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಏ.1ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 9:30ರಿಂದ 10 ಗಂಟೆಯೊಳಗೆ ನಗರದ ಶಕ್ತಿದೇವತೆ ಕಾಳಿಕಾಂಬ ದೇವಾಲಯದ ಸನ್ನಿಧಿಯಿಂದ ಮೆರವಣಿಗೆಯ ಮೂಲಕ ಸಾಗಿ ಸುಮಾರು 1 ಗಂಟೆಯ ವೇಳೆಗೆ ಜಿಲ್ಲಾಧಿಕಾರಿ ಕಚೇರಿ ಆವರಣವನ್ನು ತಲುಪಿ ನಾಮಪತ್ರ ಸಲ್ಲಿಸಲಾಗುವುದು. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಆಗಮಿಸಲಿದ್ದಾರೆ. ಸಾಧ್ಯವಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹ ಬರುವ ನಿರೀಕ್ಷೆ ಇದ್ದು, ಎಂಟು ಕ್ಷೇತ್ರಗಳ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಮ್ಮ ಅಭ್ಯರ್ಥಿಯನ್ನು ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ಇದು ವೆಂಕಟರಮಣೇಗೌಡ ಸ್ಪರ್ಧೆಯಲ್ಲ. ಚಲುವರಾಯಸ್ವಾಮಿ ಮತ್ತು ಕುಮಾರಸ್ವಾಮಿ ನಡುವಿನ ಸ್ಪರ್ಧೆ ಎಂದು ಹೇಳುವವರಿದ್ದಾರೆ. ಯಾರು ಏನು ಬೇಕಾದರೂ ಮಾತನಾಡಿಕೊಳ್ಳಲಿ. ಇದು ಸ್ವಾಮಿಗಳ ನಡುವಿನ ಸ್ಪರ್ಧೆಯಲ್ಲ. ವೈಯಕ್ತಿಕ ಪ್ರತಿಷ್ಠೆಗಿಂತ ಬದ್ಧತೆ, ನಿಷ್ಠೆ ಹಾಗೂ ಅಭಿವೃದ್ಧಿಯ ಮೇಲೆ ಚುನಾವಣೆ ನಡೆಯುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಭ್ಯರ್ಥಿ ಸ್ಟಾರ್ ಚಂದ್ರು, ಶಾಸಕ ರವಿಕುಮಾರ್ ಗಣಿಗ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಂಗ್ರೆಸ್ ಕಾರ್ಯಾಧ್ಯಕ್ಷ ಚಿದಂಬರ್, ಉಪಾಧ್ಯಕ್ಷ ಸುರೇಶ್, ಮಾಜಿ ನಗರಸಭೆ ಅಧ್ಯಕ್ಷ ವಿಜಯಲಕ್ಷ್ಮಿ ರಘುನಂದನ್ ಹಾಜರಿದ್ದರು.

ಜಿಲ್ಲೆಯಲ್ಲಿ ಒಂದು ನಾಮಪತ್ರ ಸಲ್ಲಿಕೆ

ಮಂಡ್ಯ,ಮಾ.30– ಮಂಡ್ಯ ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಸಂಬಂಧಿಸಿದಂತೆ ಇಂದು ಒಬ್ಬರು ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸಲು ಏ.4 ಕೊನೆಯ ದಿನಾಂಕವಾಗಿದ್ದು, ನಾಮಪತ್ರಗಳ ಪರಿಶೀಲನೆ ಏ.5 ರಂದು ನಡೆಯಲಿದೆ. ಉಮೇದುವಾರಿಕೆಯನ್ನು ಹಿಂಪಡೆಯಲು ಏ.8 ಕೊನೆಯ ದಿನಾಂಕವಾಗಿದ್ದು ಮತದಾನವು ಏಪ್ರಿಲ್ 26 ರಂದು ನಡೆಯಲಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣೆ ಬಂದರೆ ಕುಮಾರಸ್ವಾಮಿ ಆಸ್ಪತ್ರೆಗೆ ಸೇರ್ತಾರೆ

ಕಾಂಗ್ರೆಸ್ ಶಾಸಕ ರಮೇಶ್ ಬಂಡಿ ಸಿದ್ದೇಗೌಡರಿಗೆ ಕುಮಾರಸ್ವಾಮಿ ಚಿಕಿತ್ಸೆಯ ಬಗ್ಗೆ ಅನುಮಾನ

ಮಳವಳ್ಳಿ,ಮಾ.30– ಮಾಜಿ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಹೃದಯ ಶಸ್ತ್ರಚಿಕಿತ್ಸೆಗೊಳಗಾಗಿರುವ ಬಗ್ಗೆ ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿ ಸಿದ್ದೇಗೌಡ ಅನುಮಾನ ವ್ಯಕ್ತಪಡಿಸಿ ಹಗುರವಾಗಿ ಮಾತನಾಡುವ ಮೂಲಕ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಶುಕ್ರವಾರ ಮಳವಳ್ಳಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಿದ್ದ ಅವರು ಚುನಾವಣೆ ಬಂತೆಂದರೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಹೋಗಿ ಯಾವುದಾದರೂ ಆಸ್ಪತ್ರೆಗೆ ಅಡ್ಮಿಟ್ ಆಗ್ತಾರೆ ಎಂದು ಹೇಳುವ ಮೂಲಕ ನಾಲಿಗೆ ಹರಿಯಬಿಟ್ಟರು.

ಸುಮ್ನೆ ಏನಾದರೂ ನೆಪ ಹೇಳಿ ಆಸ್ಪತ್ರೆಗೆ ಸೇರ್ತಾರೆ, 3 ದಿನ ಇರ್ತಾರೆ, ಆಮೇಲೆ ಬಂದು ಚುನಾವಣಾ ಪ್ರಚಾರದಲ್ಲಿ ತೊಡಗುತ್ತಾರೆ. ಹೃದಯ ಶಸ್ತ್ರಚಿಕಿತ್ಸೆಗೊಳಗಾದವರೂ ಚೇತರಿಸಿಕೊಳ್ಳಲು ತಿಂಗಳಾದರೂ ಬೇಕು. ಇವರು ಬಂದು ಒಂದೇ ದಿನದಲ್ಲಿ ರಾಜ್ಯ ಪ್ರವಾಸ ಮಾಡ್ತಾರೆ. ಇದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರಲ್ಲದೆ, ಇದರ ಗುಟ್ಟು ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದರು.

ಚುನಾವಣೆಯನ್ನು ಚುನಾವಣೆಯಾಗಿ ಎದುರಿಸಲಿ. ಅದು ಬಿಟ್ಟು ಆರೋಗ್ಯದ ವಿಚಾರ ಮುಂದಿಟ್ಟುಕೊಂಡು ಚುನಾವಣೆ ಎದುರಿಸುವುದು ಬೇಡ ಎಂದರು.

ರಮೇಶ್ ಬಂಡಿ ಸಿದ್ದೇಗೌಡರ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿರುವ ಜೆಡಿಎಸ್ ಯುವ ಮುಖಂಡ ನಿಖಿಲ್ ಕುಮಾರಸ್ವಾಮಿ ನಮ್ಮ ತಂದೆ ಆರೋಗ್ಯದ ಬಗ್ಗೆ ಕಾಂಗ್ರೆಸ್ ಶಾಸಕರೊಬ್ಬರು ಹಗುರವಾಗಿ ಮಾತನಾಡಿದ್ದಾರೆ. ಅವರಿಗೆ ಪ್ರೂವ್ ಮಾಡಿ ತೋರಿಸುವ ಅಗತ್ಯವಿಲ್ಲ ಎಂದರು.

ಕೆಪಿಸಿಸಿ ಅಧ್ಯಕ್ಷರಾದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಮೇಶ್ ಸಿದ್ದೇಗೌಡರ ಹೇಳಿಕೆಯನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡರು. ‘ನೋಡಪ್ಪ ಅವರೆಲ್ಲ ಒಂದೇ ಗರಡಿಯಲ್ಲಿ ಪಳಗಿದವರು. ಅವರ ಗುಟ್ಟು ಇವರಿಗೆ ಗೊತ್ತು. ಇವರ ಗುಟ್ಟು ಅವರಿಗೆ ಗೊತ್ತು’ ಎಂದರು.

ರಮೇಶ್ ಸಿದ್ದೇಗೌಡರ ಹೇಳಿಕೆಯನ್ನು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮತ್ತು ಸಂಸದ ಪ್ರತಾಪ್ ಸಿಂಹ ತೀವ್ರವಾಗಿ ಖಂಡಿಸಿದರು.

ಏ.4ರಂದು ಕುಮಾರಸ್ವಾಮಿ ನಾಮಪತ್ರ ಸಲ್ಲಿಕೆ

ಮಾಜಿ ಸಿಎಂ ಯಡಿಯೂರಪ್ಪ ಭಾಗಿ: ರಾಮಚಂದ್ರ



ಮಂಡ್ಯ,ಮಾ.30– ಏಪ್ರಿಲ್ 4ರಂದು ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ನಾಮಪತ್ರ ಸಲ್ಲಿಸಲಿದ್ದು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ನಾಯಕರುಗಳು ಭಾಗವಹಿಸಲಿದ್ದಾರೆ ಎಂದು ಮಂಡ್ಯ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಮುಖಂಡ ಬಿ.ಆರ್. ರಾಮಚಂದ್ರ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನದ ವೇಳೆಗೆ ಹೆಚ್ಡಿಕೆ ನಾಮಪತ್ರ ಸಲ್ಲಿಸಲಿದ್ದು, ಬಳಿಕ ಬಹಿರಂಗ ಸಮಾವೇಶ ನಡೆಯಲಿದೆ. ಸಮಾವೇಶದ ಜಾಗ ಶೀಘ್ರದಲ್ಲೇ ಅಂತಿಮವಾಗಲಿದ್ದು, ನಾಮಪತ್ರ ಸಲ್ಲಿಕೆ ವೇಳೆ ಮಾಜಿ ಸಿಎಂ ಯಡಿಯೂರಪ್ಪ, ಜೆಡಿಎಸ್ ಮುಖಂಡ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ರಾಜ್ಯ ಮಟ್ಟದ ಹಲವು ನಾಯಕರು ಹಾಗೂ ಮಂಡ್ಯ ಜಿಲ್ಲೆಯ ಜೆಡಿಎಸ್‌ನ ಎಲ್ಲಾ ಹಾಲಿ, ಮಾಜಿ ಶಾಸಕರು, ಎರಡು ಪಕ್ಷದ ಮುಖಂಡರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಇದಲ್ಲದೇ ಏ.2ರಂದು ಮಧ್ಯಾಹ್ನ 1 ಗಂಟೆಗೆ ಮಂಡ್ಯ ನಗರದ ಕಾಳಿಕಾಂಭ ಸಮುದಾಯ ಭವನದಲ್ಲಿ ಜೆಡಿಎಸ್–ಬಿಜೆಪಿ ಪಕ್ಷದ ಸಮಾವೇಶ ಹಮ್ಮಿಕೊಂಡಿದ್ದು, ಸಮಾವೇಶವನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಲಿದ್ದು, ಬಿಜೆಪಿಯ ಪ್ರಮುಖ ನಾಯಕರುಗಳು ಪಾಲ್ಗೊಳ್ಳಲಿದ್ದಾರೆ. ಜೊತೆಗೆ ಜಿಲ್ಲೆಯ ಹಾಲಿ, ಮಾಜಿ ಶಾಸಕರುಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನಾಮಪತ್ರ ಸಲ್ಲಿಕೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬರ ಮಾಡಿಕೊಳ್ಳುವ ನಿಟ್ಟಿನಲ್ಲಿ ಭಾನುವಾರ ಹೋಬಳಿ ಮಟ್ಟದಲ್ಲಿ ಪೂರ್ವಭಾವಿ ಸಭೆಗಳನ್ನು ಕರೆದಿದ್ದು, ಬೆಳಿಗ್ಗೆ 9ಗಂಟೆಗೆ ಕೆರಗೋಡು ಹೋಬಳಿ ಮಟ್ಟದ ಪೂರ್ವಭಾವಿ ಸಭೆ ಅದೇ ಗ್ರಾಮದಲ್ಲಿ ನಡೆದರೆ, ಬೆಳಿಗ್ಗೆ 11ಕ್ಕೆ ಬಸರಾಳು ಹೋಬಳಿ ಮಟ್ಟದ ಸಭೆ ಅದೇ ಗ್ರಾಮದಲ್ಲಿ ನಡೆಯಲಿದೆ. ಸಂಜೆ 5ಕ್ಕೆ ಕಸಬಾ ಹೋಬಳಿ ಹಾಗೂ ಮಂಡ್ಯ ನಗರದ ಪೂರ್ವಭಾವಿ ಸಭೆ ನಗರದ ನಾಗಸಿರಿ ಸಮುದಾಯ ಭವನದಲ್ಲಿ ನಡೆಯಲಿದ್ದು, ಎರಡು ಪಕ್ಷದ ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮನ್‌ಮುಲ್ ಉಪಾಧ್ಯಕ್ಷ ರಘುನಂದನ್, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಶೋಕ್ ಜಯರಾಂ, ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಅರವಿಂದ್, ಜೆಡಿಎಸ್ ಮುಖಂಡರಾದ ಬೂದನೂರು ಸ್ವಾಮಿ, ಮಹಮ್ಮದ್, ವಾಸಿಂ, ದಸ್ತಗೀರ್, ವಸಂತ್‌ರಾಜ್, ಬಿಜೆಪಿ ಮುಖಂಡ ಭೀಮೇಶ್ ಉಪಸ್ಥಿತರಿದ್ದರು.


ಚಿನಕುರಳಿಯಲ್ಲಿ ಇಂದಿನಿಂದ ಓಕುಳಿ ಹಬ್ಬ



ಚಿನಕುರಳಿ,ಮಾ.30– ಚಿನಕುರಳಿ ಗ್ರಾಮದಲ್ಲಿ ಭಾನುವಾರದಿಂದ ಓಕುಳಿ ಹಬ್ಬ ಆರಂಭವಾಗಲಿದೆ. ಚಿನಕುರಳಿ, ಅಂಕೇಗೌಡನಕೊಪ್ಪಲು, ಕಣಿವೆಕೊಪ್ಪಲು, ಹೊನಗಾನಹಳ್ಳಿ, ಕೆ.ಮಲ್ಲೇನಹಳ್ಳಿ, ಚಿಕ್ಕಬೋಗನಹಳ್ಳಿ ಹಾಗೂ ಲಿಂಗಾಪುರ ಗ್ರಾಮ ಸೇರಿದಂತೆ ಏಳು ಗ್ರಾಮದಲ್ಲೂ 15 ದಿನಕ್ಕೂ ಮುನ್ನ ಕರಕು ಹಾಕಲಾಗುವ ಮೂಲಕ ಆರಂಭಗೊಳ್ಳುವ ಓಕುಳಿ ಹಬ್ಬ ಭಾನುವಾರದಿಂದ ಚಿನಕುರಳಿ ಸೇರಿದಂತೆ ಏಳು ಗ್ರಾಮಗಳಲ್ಲೂ ಅದ್ದೂರಿಯಾಗಿ ನಡೆಯಲಿದೆ.

ಹಬ್ಬದ ಅಂಗವಾಗಿ ಮಾ.31ರಂದು ಚಿನಕುರಳಿ ಗ್ರಾಮದ ರಂಗ ಸ್ಥಳದಲ್ಲಿ ರಾತ್ರಿಯಿಡೀ ರಂಗಕುಣಿತ, ಕೋಲಾಟ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳ ಜತೆಗೆ ರಂಗ ಕುಣಿತದ ಮೂಲಕ ಬೆಳಗುಣಿತ ಕಾರ್ಯಕ್ರಮ ನಡೆಯಲಿದೆ. ಅದೇರೀತಿ ಏ.1ರಂದು ಮಧ್ಯಾಹ್ನ ಚಿನಕುರಳಿ ಗ್ರಾಮದ ಮಹಿಳೆಯರು ಶ್ರೀರಾಮೇಶ್ವರ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿ, ಮೀಸಲು ನೀರು ತರುತ್ತಾರೆ. ನಂತರ ಮಧ್ಯರಾತ್ರಿ ಮಂಚಮ್ಮ ಹಾಗೂ ಮಾಸ್ತಮ್ಮ ದೇವಸ್ಥಾನದಿಂದ ಬಂಡಿಗಳು ಶ್ರೀರಾಮೇಶ್ವರ ದೇವಸ್ಥಾನದ ಬಳಿಗೆ ಆಗಮಿಸಲಿವೆ, ಏ.2ರಂದು ಮಂಗಳವಾರ ಮುಂಜಾನೆ ಸೂರ್ಯೋದಯದ ಸಮಯದಲ್ಲಿ ಶ್ರೀರಾಮೇಶ್ವರ ದೇವಸ್ಥಾನದಲ್ಲಿ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಹಾಗೂ ರಂಗಸ್ಥಳದಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನದ ನಂತರ ರಂಗ ಸ್ಥಳದಲ್ಲಿ ನೀರಿನ ಓಕುಳಿ ಆಟ ನಡೆಯಲಿದ್ದು, ಹೋಕಳಿ ಆಟದಲ್ಲಿ ಚಿನ ಕುರಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ಸಂಭ್ರಮಿಸುತ್ತಾರೆ. ಮಧ್ಯಾಹ್ನ 3 ಗಂಟೆಗೆ ಶ್ರೀ ಆಂಜನೇಯಸ್ವಾಮಿ ದೇವರ ಉತ್ಸವವನ್ನು ಗ್ರಾಮದ ಪ್ರಮುಖ ಬೀದಿಗಳು ಹಾಗೂ ಅಂಕೇಗೌಡನಕೊಪ್ಪಲು ಗ್ರಾಮದಲ್ಲಿ ಉತ್ಸವವನ್ನು ನೆರವೇರಿಸಿ ಹಬ್ಬದ ಸಂಭ್ರಮಕ್ಕೆ ತೆರೆ ಎಳೆಯಲಾಗುತ್ತದೆ. ಹಬ್ಬದ ಅಂಗವಾಗಿ ಮೂರು ದಿನಗಳ ಕಾಲ ವಿದ್ಯುತ್ ದೀಪಾಲಂಕಾರದ ಜತೆಗೆ ಬೀದಿಬೀದಿಗಳನ್ನು ತಳಿರು ತೋರಣಗಳಿಂದ ಅಲಂಕರಿಸಲಾಗುತ್ತದೆ.

ಇಂದು ಶಾರದಾ ನಿಕೇತನಕ್ಕೆ ಶೃಂಗೇರಿ ಕಿರಿಯ ಶ್ರೀಗಳ ಭೇಟಿ



ಮೈಸೂರು, ಮಾ.30(ಎಂಕೆ)– ನಗರದ ಜೆಲ್‌ಎಲ್‌ಬಿ ರಸ್ತೆಯಲ್ಲಿರುವ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ(ಶಾರದಾ ನಿಕೇತನ)ಕ್ಕೆ ನಾಳೆ(ಮಾ.31) ಸಂಜೆ 6 ಗಂಟೆಗೆ ಶೃಂಗೇರಿ ಕಿರಿಯ ಶ್ರೀಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿ ಭೇಟಿ ನೀಡಲಿದ್ದಾರೆ.

ಈ ವೇಳೆ ಶ್ರೀಗಳ ದರ್ಶನ ಹಾಗೂ ಆಶೀರ್ವಚನ ಪಡೆಯಲು ಅವಕಾಶ ಮಾಡಿಕೊಡಲಾಗಿದೆ. ಮಹಾಸ್ವಾಮಿಯವರ ದರ್ಶನಕ್ಕೆ ಬರುವ ಭಕ್ತಾದಿಗಳು ಕಡ್ಡಾಯವಾಗಿ ಧಾರ್ಮಿಕ ಉಡುಪು(ಮಹಿಳೆಯರು–ಸೀರೆ, ಪುರುಷರು– ಪಂಚೆ ಮತ್ತು ಶಲ್ಯ)ಧರಿಸಿ ಆಗಮಿಸುವಂತೆ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಅಪರಿಚಿತ ವ್ಯಕ್ತಿಯ ಶವ ಪತ್ತೆ

ಮೈಸೂರು,ಮಾ.30– ಮಾ.30ರಂದು ಸುಮಾರು 35 ವರ್ಷದ ಅಪರಿಚಿತ ವ್ಯಕ್ತಿ ಕೆ.ಆರ್.ನಗರ–ಹೊಸ ಅಗ್ರಹಾರ ರೈಲು ನಿಲ್ದಾಣದಲ್ಲಿ ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿದ್ದಾರೆ. ಮೃತದೇಹವು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದಲ್ಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5.5 ಅಡಿ ಎತ್ತರ, ಕೋಲು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿರುತ್ತಾರೆ. ತಲೆಯಲ್ಲಿ ಸುಮಾರು 2 ಇಂಚು ಉದ್ದದ ಕಪ್ಪು ಕೂದಲು ಹಾಗೂ ಅರ್ಧ ಇಂಚು ಕಪ್ಪು ಬಣ್ಣದ ಮೀಸೆ ಮತ್ತು 1 ಇಂಚು ಗಡ್ಡ ಬಿಟ್ಟಿರುತ್ತಾನೆ. ಮೃತನು ಕ್ರೀಮ್ ಬಣ್ಣದ ತುಂಬು ತೋಳಿನ ಟೀ ಶರ್ಟ್, ಕಪ್ಪು ಬಣ್ಣದ ಅವೆಂಜರ್ಸ್‌ನ ಇಂಗ್ಲೀಷ್ ಅಕ್ಷರದಲ್ಲಿ ಬರೆದಿರುವ ನೈಟ್ ಪ್ಯಾಂಟ್ ಧರಿಸಿದ್ದಾನೆ.

ಮೃತ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ: 0821–2516579 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಫ್ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆಗೆ ಸೂಚನೆ

ವಿಡಿಯೋ ವ್ಯೂವಿಂಗ್ ತಂಡದಿಂದ ಚೆಕ್‌ಪೋಸ್ಟ್‌ಗಳ ಚಲನವಲನ ವೀಕ್ಷಣೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ತೆರೆದಿರುವ ಲೋಕಸಭಾ ಚುನಾವಣೆಯ ವಿಡಿಯೋ ವ್ಯೂವಿಂಗ್ ತಂಡದ ಕೊಠಡಿಯನ್ನು ಶನಿವಾರ ಹುಣಸೂರು ಹಾಗೂ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ವೆಚ್ಚ ವೀಕ್ಷಕ ಎ.ಸುರೇಶ್ ಪರಿಶೀಲಿಸುವ ವೇಳೆ, ಚೆಕ್‌ಪೋಸ್ಟ್ ಸಿಬ್ಬಂದಿಯೊಬ್ಬರು ಮೊಬೈಲ್‌ನಲ್ಲಿ ಮಾತನಾಡುತ್ತಿರುವ ದೃಶ್ಯವನ್ನು ಗಮನಿಸಿದರು.

ಮೈಸೂರು, ಮಾ.30(ಎಂಟಿವೈ)– ಲೋಕಸಭಾ ಚುನಾವಣೆಯನ್ನು ಮುಕ್ತ ಹಾಗೂ ಪಾರದರ್ಶಕವಾಗಿ ನಡೆಸುವ ನಿಟ್ಟಿನಲ್ಲಿ ಚುನಾವಣಾ ಆಯೋಗದಿಂದ ಕ್ರಮ ಕೈಗೊಳ್ಳಲಾಗಿದ್ದು, ಮೈಸೂರು ಜಿಲ್ಲೆಯ ವಿವಿಧೆಡೆ ಸ್ಥಾಪಿಸಿರುವ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸುವಂತೆ ಸೂಚನೆ ನೀಡಲಾಗಿದೆ.

ಮೈಸೂರು–ಕೊಡಗು ಕ್ಷೇತ್ರ ಮಾತ್ರವಲ್ಲದೆ, ಚಾಮರಾಜನಗರ ಮೀಸಲು ಕ್ಷೇತ್ರ ವ್ಯಾಪ್ತಿಗೆ ಮೈಸೂರು ಜಿಲ್ಲೆಯ ವಿವಿಧೆಡೆ ತೆರೆದಿರುವ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣಾ ಕಾರ್ಯವನ್ನು ಚುರುಕುಗೊಳಿಸುವಂತೆ ಸೂಚನೆ ನೀಡಲಾಗಿದ್ದು, ವಿಡಿಯೋ ವ್ಯೂವಿಂಗ್ ತಂಡದ ಸದಸ್ಯರು ಚೆಕ್‌ಪೋಸ್ಟ್‌ಗಳಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾರೆ. ಹಾಗಾಗಿ ಚೆಕ್‌ಪೋಸ್ಟ್‌ಗಳಲ್ಲಿ ನಿಯೋಜನೆಗೊಂಡಿರುವ ಸಿಬ್ಬಂದಿ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವಂತಾಗಿದೆ.

ಮೊಬೈಲ್‌ನಲ್ಲಿ ಮಾತು, ಅಧಿಕಾರಿಗಳ ಅಸಮಾಧಾನ: ಚೆಕ್‌ಪೋಸ್ಟ್‌ಗಳಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಕಾಟಾಚಾರಕ್ಕೆ ತಪಾಸಣಾ ಕಾರ್ಯ ಮಾಡುತ್ತಾ, ಮೊಬೈಲ್‌ನಲ್ಲಿ ತಲ್ಲೀನರಾಗಿರುವುದು ಹಿರಿಯ ಅಧಿಕಾರಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಚೆಕ್‌ಪೋಸ್ಟ್‌ಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾದ ದೃಶ್ಯಗಳು ಆಯಾ ತಾಲೂಕು ಕೇಂದ್ರಗಳಲ್ಲಿ ಅಳವಡಿಸಿರುವ ಪರದೆ ಮೇಲೆ ಭಿತ್ತರಗೊಳ್ಳುತ್ತಿದ್ದು, ಅವುಗಳನ್ನು ವಿಡಿಯೋ ವ್ಯೂವಿಂಗ್ ತಂಡ ವೀಕ್ಷಿಸುತ್ತದೆ. ಈ ವೇಳೆ ಕೆಲ ಚೆಕ್‌ಪೋಸ್ಟ್‌ಗಳಲ್ಲಿ ಸಿಬ್ಬಂದಿ ತಪಾಸಣಾ ಕಾರ್ಯ ನಡೆಸದೆ ಮೈ ಮರೆತಿರುವ ದೃಶ್ಯಗಳು ಸೆರೆ ಸಿಕ್ಕಿದ್ದು, ಆ ದೃಶ್ಯ ಅಧಿಕಾರಿಗಳ ಕಣ್ಣಿಗೆ ಬಿದ್ದಿದೆ.

ಇಂದು ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ತೆರೆದಿರುವ ಚುನಾವಣಾ ಕರ್ತವ್ಯದ ವಿವಿಧ ತಂಡಗಳು ಕಾರ್ಯ ನಿರ್ವಹಿಸುತ್ತಿರುವ ಕೊಠಡಿಗಳಿಗೆ ಹುಣಸೂರು ಹಾಗೂ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ವೆಚ್ಚ ವೀಕ್ಷಕ ಎ.ಸುರೇಶ್ ಅವರು ಭೇಟಿ ನೀಡಿ ಪರಿಶೀಲಿಸುತ್ತಿದ್ದ ವೇಳೆ ಚೆಕ್‌ಪೋಸ್ಟ್‌ವೊಂದರಲ್ಲಿ ಸಿಬ್ಬಂದಿಯೊಬ್ಬರು ಮೊಬೈಲ್ ಹಿಡಿದು, ಚೆಕ್‌ಪೋಸ್ಟ್‌ನಿಂದ ಸಾಕಷ್ಟು ಅಂತರಕ್ಕೆ ಹೋಗಿ ಮಾತನಾಡುತ್ತಾ ನಿಂತಿರುವ ದೃಶ್ಯ ಗಮನಿಸಿದರು. ಚೆಕ್‌ಪೋಸ್ಟ್ ಸಿಬ್ಬಂದಿ ತಪಾಸಣೆಯನ್ನು ಕಟ್ಟುನಿಟ್ಟಾಗಿ ಮಾಡುವಂತೆ ಸೂಚನೆ ನೀಡಿದ್ದಾರೆ.

ವಾರ್ತಾ ಇಲಾಖೆ ನೂತನ ಆಯುಕ್ತರಾಗಿ ಸುರಳ್ಕರ್ ವಿಕಾಸ್ ಕಿಶೋರ್



ಬೆಂಗಳೂರು, ಮಾ.30– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನೂತನ ಆಯುಕ್ತರಾಗಿ 2012ರ ಐಎಎಸ್ ಬ್ಯಾಚ್‌ನ ಸುರಳ್ಕರ್ ವಿಕಾಸ್ ಕಿಶೋರ್ ಅವರನ್ನು ನೇಮಿಸಿ ಸರಕಾರ ಆದೇಶ ಹೊರಡಿಸಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ಗಮಿತ ಆಯುಕ್ತ ಹೇಮಂತ್ ನಿಂಬಾಳ್ಕರ್ ಅವರು ನೂತನ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರಿಗೆ ಶನಿವಾರ ಸಂಜೆ ಅಧಿಕಾರ ಹಸ್ತಾಂತರಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದ ವಿಶೇಷ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸುರಳ್ಕರ್ ವಿಕಾಸ್ ಕಿಶೋರ್ ಅವರು, ಕೊಪ್ಪಳದಲ್ಲಿ ಜಿಲ್ಲಾಧಿಕಾರಿಯಾಗಿ, ಯಾದಗಿರಿ, ಬೆಳಗಾವಿ, ವಿಜಯಪುರ ಜಿಲ್ಲೆಗಳಲ್ಲಿ ಜಿಪಂ ಸಿಇಓ ಆಗಿ ಕರ್ತವ್ಯ ನಿರ್ವಹಿಸಿದ್ದರು.

ಏ.3ಕ್ಕೆ ಮೈಸೂರಲ್ಲಿ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ



ಯದುವೀರ್



ಎಂ.ಲಕ್ಷ್ಮಣ

ಮೈಸೂರು, ಮಾ.30(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ಏ.3ರಂದು ಉಮೇದುವಾರಿಕೆ ಸಲ್ಲಿಸಲಿದ್ದಾರೆ.

ಬಿಜೆಪಿ ಅಭ್ಯರ್ಥಿ ಯದುವೀರ್, ಅಂದು ಬೆಳಗ್ಗೆ 10.30ಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ರಾಜ್ಯಾಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಹಾಲಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವರಾದ ಎಂಟಿಬಿ ನಾಗರಾಜ್, ಎನ್.ಮಹೇಶ್, ಶಾಸಕ ಶ್ರೀವತ್ಸ ಹಾಗೂ ಮಾಳವಿಕ ಸೇರಿದಂತೆ ಹಲವು ಮುಖಂಡರೊಂದಿಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಬೃಹತ್ ಮೆರವಣಿಗೆ ಮೂಲಕ ತೆರಳಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಮಧ್ಯಾಹ್ನ 1ಕ್ಕೆ ಉಮೇದುವಾರಿಕೆ ಸಲ್ಲಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಚಾಮರಾಜನಗರ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಮೈಸೂರು–ಕೊಡಗು ಹಾಗೂ ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ಮುಖಂಡರು ಭಾಗವಹಿಸಲಿದ್ದಾರೆ.

ಇಂದು ಪ್ರತಿಷ್ಠಿತ ಮೈಸೂರು ಜಿಲ್ಲಾ ವಕೀಲರ ಸಂಘಕ್ಕೆ ಚುನಾವಣೆ

ಮೈಸೂರು, ಮಾ.30(ಎಸ್‌ಬಿಡಿ)– ಮೈಸೂರು ಜಿಲ್ಲಾ ವಕೀಲರ ಸಂಘದ ಕಾರ್ಯಕಾರಿ ಮಂಡಳಿಗೆ ಭಾನುವಾರ (ಮಾ.31) ಚುನಾವಣೆ ನಡೆಯಲಿದೆ.

ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, ನಂತರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ. 750ಕ್ಕೂ ಹೆಚ್ಚು ಮಹಿಳೆಯರು ಸೇರಿ ಒಟ್ಟು 3361 ಮತದಾರರಿದ್ದಾರೆ.

ಆಡಳಿತ ಮಂಡಳಿ 2024–26ರ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಎಸ್.ಲೋಕೇಶ್, ಶ್ರೀಕೃಷ್ಣ ಹಾಗೂ ಎಂ.ಆರ್.ಆನಂದ್, ಉಪಾಧ್ಯಕ್ಷ ಸ್ಥಾನಕ್ಕೆ ವಿ.ವೆಂಕಟರಾಮಯ್ಯ, ಎಂ.ವಿ.ಚಂದ್ರಶೇಖರ್, ಡಿ.ಲಿಂಗಣ್ಣ, ಮರಿಸ್ವಾಮಿನಾಯಕ ಹಾಗೂ ದೊರೆಸ್ವಾಮಿ, ಕಾರ್ಯದರ್ಶಿ ಸ್ಥಾನಕ್ಕೆ ಸುಧೀರ್ ಮತ್ತು ಬೆಲವತ್ತ ಕುಮಾರ್, ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಚರಣ್‌ರಾಜು, ಕರೀಗೌಡ, ಶಂಭುಲಿಂಗಸ್ವಾಮಿ, ಮಹಿಳಾ ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ತನುಜಾ, ವಿನೋದಾ, ಕೋಮಲ, ಕವಿತಾ ಕಾಳೆ, ಆಶಾ, ಖಜಾಂಚಿಗೆ ಭರತ್, ಭರತ್ ಕುಮಾರ್, ರಾಜೇಶ್ ಹಾಗೂ ವಿನಯ್, ಹಿರಿಯ ಹಾಗೂ ಕಿರಿಯ ಸಮಿತಿಯ ತಲಾ ಐದು ಸ್ಥಾನಕ್ಕೆ ಕ್ರಮವಾಗಿ 9 ಹಾಗೂ 13 ಮಂದಿ ಸೇರಿ ಒಟ್ಟು 45 ವಕೀಲರು ಚುನಾವಣಾ ಕಣದಲ್ಲಿದ್ದಾರೆ.

ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಎಸ್. ಲೋಕೇಶ್ ಹಿರಿಯ ವಕೀಲರಾಗಿದ್ದು, ಶಾರದ ವಿಲಾಸ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎರಡು ಬಾರಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ ಪರಾಭವಗೊಂಡಿದ್ದ ಎ.ಜಿ.ಸುಧೀರ್ ಮೂರನೇ ಬಾರಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

> ಮೈಸೂರು ವಕೀಲರ ಸಂಘ ತನ್ನದೇ ಆದ ಇತಿಹಾಸ, ಪರಂಪರೆಯನ್ನು ಹೊಂದಿದೆ. ಇಲ್ಲಿ ವಕೀಲ ವೃತ್ತಿ ಆರಂಭಿಸಿದ ಹಲವರು ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಎಚ್ ವಿಶ್ವನಾಥ್ ಸೇರಿದಂತೆ ವಿವಿಧ ಕ್ಷೇತ್ರದ ಹಲವು ಗಣ್ಯರು ಮೈಸೂರು ಜಿಲ್ಲಾ ವಕೀಲರ ಸಂಘದ ಸದಸ್ಯರಾಗಿದ್ದರು. ಚುನಾವಣೆಗೆ ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳಿಗೂ ಶುಭ ಹಾರೈಸುತ್ತೇನೆ.
>
> –ಎಂ.ಮಹದೇವಸ್ವಾಮಿ, ಅಧ್ಯಕ್ಷರು
> ಮೈಸೂರು ವಕೀಲರ ಸಂಘ

> ಮೈಸೂರು ಜಿಲ್ಲಾ ವಕೀಲರ ಸಂಘದ ಕಾರ್ಯಕಾರಿ ಮಂಡಳಿ ಚುನಾವಣೆಗೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಕುಡಿಯುವ ನೀರು, ಆಸನದ ವ್ಯವಸ್ಥೆ ಸೇರಿದಂತೆ ಎಲ್ಲಾ ಸೌಕರ್ಯ ಕಲ್ಪಿಸಲಾಗಿದೆ. ಎಲ್ಲಾ ಮತದಾರರೂ ತಪ್ಪದೇ ತಮ್ಮ ಹಕ್ಕು ಚಲಾಯಿಸುತ್ತಾರೆಂಬ ವಿಶ್ವಾಸವಿದೆ.
>
> –ಎಸ್.ಉಮೇಶ್, ಕಾರ್ಯದರ್ಶಿ
> ಮೈಸೂರು ಜಿಲ್ಲಾ ವಕೀಲರ ಸಂಘ

ಜೆಪಿಐಇಆರ್ ರಾಷ್ಟ್ರೀಯ ರಂಗೋತ್ಸವದಲ್ಲಿ ವಾಸು ದೀಕ್ಷಿತ್ ಗಿಟಾರ್ ಸದ್ದು; ದಾಸರ ಕೀರ್ತನೆ ಮೋಡಿ



ಜೆಪಿಐಇಆರ್ ರಾಷ್ಟ್ರೀಯ ರಂಗೋತ್ಸವದಲ್ಲಿ ಗಾಯಕ ವಾಸು ದೀಕ್ಷಿತ್ ಗಾಯನ.

ಮೈಸೂರು, ಮಾ.30(ಎಂಕೆ)– ಜೆಪಿಐಇಆರ್ ರಾಷ್ಟ್ರೀಯ ರಂಗೋತ್ಸವದಲ್ಲಿ ಪುರಂದರ ದಾಸರ ಕೀರ್ತನೆಗಳ ಪಾಪ್ ಗಾಯಕ ಮೋಡಿ... ವಾಸು ದೀಕ್ಷಿತ್ ಗಿಟಾರ್ ಸದ್ದು, ಸವಿಗಾನ ಕುಣಿದು ಕುಪ್ಪಳಿಸಿದ ರಂಗಾಸಕ್ತರು...

ಮೈಸೂರು ಕಲಾಮಂದಿರದ ಕಿರುರಂಗ ಮಂದಿರ ಆವರಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ರಂಗೋತ್ಸವದಲ್ಲಿ ಶನಿವಾರ ಖ್ಯಾತ ಗಾಯಕ ವಾಸು ದೀಕ್ಷಿತ್ ಮೋಡಿ ಮಾಡಿದರು. ದಾಸ ಶ್ರೇಷ್ಠರ ಕೀರ್ತನೆಗಳಿಗೆ ರಿದಂ ಸೇರಿಸಿದ್ದ ಸಂಗೀತ ಗಾನಕ್ಕೆ ನೆರೆದಿದ್ದವರು ಕುಣಿದು ಕುಪ್ಪಳಿಸಿದರು.

‘ಮಗಸಟ್ಟೆ ಲೈಫಲ್ಲಿ ಫ್ರೀ ಏನೂ ಇಲ್ಲ’, ‘ಗುರು ಕೂಡಿ ಕೆಂಡೆವೂ ನಾವಿಂದು’, ‘ಯಾರಿಗೂ ಹೇಳೋದ್ ಬ್ಯಾಡ’, ‘ಮುಳ್ಳು ಕೊನೆಯ ಮೇಲೆ ಮೂರು ಕರೆಯ ಕಟ್ಟಿ’ ‘ರಾಗಿ ತಂದಿರಾ ಭಿಕ್ಷಕೆ ರಾಗಿ ತಂದೀರಾ’ ಎಂಬಿತ್ಯಾದಿ ಹಾಡುಗಳನ್ನು ಹಾಡುವ ಮೂಲಕ ಎಲ್ಲರ ಗಮನ ಸೆಳೆದರು. ಹಾಡಿನ ಜೊತೆಗೆ ರಂಗಭೂಮಿ ಕಲಾವಿದರು ವಿಶಿಷ್ಟ ಉಡುಪುಗಳನ್ನು ತೊಟ್ಟು ರಂಗೋತ್ಸವಕ್ಕೆ ಮೆರುಗು ತಂದರು. ಹಿರಿಯ ರಂಗಕರ್ಮಿ ಮೈಮ್ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಕ್ರೀಡೆಯಲ್ಲಿ ಸಾಧನೆಗೈದ ವಿದ್ಯಾರ್ಥಿನಿಯರಿಗೆ ಅಭಿನಂದನೆ



ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಮಹಾರಾಣಿ ಮಹಿಳಾ ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿನಿಯರನ್ನು ಕಾಲೇಜಿನ ಅಧ್ಯಾಪಕ ವೃಂದ ಅಭಿನಂದಿಸಿತು.

ಮೈಸೂರು,ಮಾ.30(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಮಹಿಳೆಯರ ಈಜು ಸ್ಪರ್ಧೆ ಹಾಗೂ ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಬಹುಮಾನ ಪಡೆದ ಮಹಾರಾಣಿ ಮಹಿಳಾ ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿನಿಯರನ್ನು ಕಾಲೇಜಿನ ಅಧ್ಯಾಪಕ ವೃಂದ ಅಭಿನಂದಿಸಿತು.

ಈಜು ಸ್ಪರ್ಧೆಯಲ್ಲಿ ಪ್ರಥಮ ಬಿಎ ವಿದ್ಯಾರ್ಥಿನಿ ಶ್ರೀರಕ್ಷಾ ಎರಡು ಚಿನ್ನ, ಒಂದು ಬೆಳ್ಳಿ ಪದಕ, ಪ್ರಥಮ ಬಿಎ ವಿದ್ಯಾರ್ಥಿನಿ ಅನಿತಾ ಒಂದು ಚಿನ್ನ, ಎರಡು ಬೆಳ್ಳಿ ಪದಕ, ಪ್ರಥಮ ಎಂಎ ವಿದ್ಯಾರ್ಥಿನಿ ವೇರೋನಿಕ ಎಂ.ಜೆಡ್ ಒಂದು ಕಂಚಿನ ಪದಕ ಪಡೆದು ಅದ್ವಿತೀಯ ಸಾಧನೆ ಮಾಡಿದ್ದಾರೆ. ಅಲ್ಲದೆ, ಮೈಸೂರು ನಗರ ಕಾಲೇಜುಗಳ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಪ್ರಥಮ ಬಿಎ ವಿದ್ಯಾರ್ಥಿನಿ ಚಂದ್ರಿಕಾ. ಡಿ.ಎ., 100 ಮೀಟರ್ ಮತ್ತು ಎತ್ತರ ಜಿಗಿತ ಸ್ಪರ್ಧೆಯಲ್ಲಿ ಕಂಚಿನ ಪದಕ, ಅಂತಿಮ ಬಿಎ ವಿದ್ಯಾರ್ಥಿನಿ ಅಕ್ಷಿತಾ ಆರ್., ಉದ್ದ ಜಿಗಿತ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಜೆ.ಸಿ.ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜುಗಳ ಭಾರ ಎತ್ತುವ ಸ್ಪರ್ಧೆಯಲ್ಲಿ ಪ್ರಥಮ ಬಿಎ ವಿದ್ಯಾರ್ಥಿನಿ ಸಿಂಧು ಚಿನ್ನದ ಪದಕ, ದ್ವಿತೀಯ ಬಿಎ ವಿದ್ಯಾರ್ಥಿನಿ ರಕ್ಷಿತಾ.ಸಿ ಬೆಳ್ಳಿ ಪದಕ, ಶ್ರೀರಕ್ಷ ಪ್ರಥಮ ಬಿಎ ಬೆಳ್ಳಿ ಪದಕ ಹಾಗೂ ಅಕ್ಷಿತ.ಆರ್, ಅಂತಿಮ ಬಿಎ ಕಂಚಿನ ಪದಕ ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ.

ಈ ಹಿನ್ನೆಲೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿನಿಯರನ್ನು ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ.ವಸಂತ್ ಕುಮಾರ್, ದೈಹಿಕ ಶಿಕ್ಷಣಾಧಿಕಾರಿಗಳಾದ ಮೋಹನ್ ಕುಮಾರ್ ಸಿಎಸ್ ಮತ್ತು ಡಾ.ಭಾಸ್ಕರ್ ಕೆ.ಎಸ್. ಹಾಗೂ ಕಾಲೇಜಿನ ಕ್ರೀಡಾ ಸಮಿತಿಯ ಸದಸ್ಯರು, ಅಧ್ಯಾಪಕರು ಹಾಗೂ ಕಾಲೇಜಿನ ವಿದ್ಯಾರ್ಥಿನಿಯರು ಅಭಿನಂದಿಸಿದರು.

ಏ.10ರಿಂದ ಮಕ್ಕಳಿಗೆ ಬೇಸಿಗೆ ಟೇಬಲ್ ಟೆನ್ನಿಸ್ ಶಿಬಿರ

ಮೈಸೂರು,ಮಾ.30–ಒಲಿಂಪಿಕ್ ಮಹರ್ಷಿ ಟೇಬಲ್ ಟೆನ್ನಿಸ್ ಅಕಾಡೆಮಿ ವತಿಯಿಂದ 5 ವರ್ಷ ಮೇಲ್ಪಟ್ಟ ಮಕ್ಕಳಿಗೆ ಏ.10ರಿಂದ 30ರ ತನಕ ಬೆಳಗ್ಗೆ 6 ರಿಂದ ಬೆಳಗ್ಗೆ 10 ಹಾಗೂ ಸಂಜೆ 4ರಿಂದ ಸಂಜೆ 8ರವರೆಗೆ ಟೇಬಲ್ ಟೆನ್ನಿಸ್ ಬೇಸಿಗೆ ಕೋಚಿಂಗ್ ಶಿಬಿರವನ್ನು ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ, ಮೂಲಭೂತ ಕೌಶಲ್ಯಗಳ ಅಭಿವೃದ್ಧಿ, ಫಿಟ್ನೆಸ್, ಚುರುಕುತನ ಪುಟ ವರ್ಕ್, ಸ್ಥಿರತೆ, ಮಧ್ಯಂತರ ಅಂತದಿಂದ ಅಡ್ವಾನ್ಸ್ ಅಂತದ ತೆರೆ ಭೀತಿಯನ್ನು ಬಹು ರಾಷ್ಟ್ರೀಯ ಪದಕ ವಿಜೇತ ಮತ್ತು ತರಬೇತುದಾರರಾದ ಅಕ್ಷಯ್ ಮಹಂತ್ ತರಬೇತಿ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9686475604 ಸಂಪರ್ಕಿಸಬಹುದು.

ಏ.3, ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ. 30– ಮೈಸೂರಿನ ಸುವರ್ಣ ಬೆಳಕು ಫೌಂಡೇಷನ್ ಹಾಗೂ ಗಂಗಾ ಮತಸ್ಥರ (ಬೆಸ್ತರ) ಸಂಘದ ಸಹಯೋಗದೊಂದಿಗೆ ಆರ್ಯ ಆಸ್ಪತ್ರೆ ಹಾಗೂ ಎಎಸ್‌ಜಿ ಆಸ್ಪತ್ರೆ ವತಿಯಿಂದ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಏಪ್ರಿಲ್ 3ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448980010 ಸಂಪರ್ಕಿಸಬಹುದು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.30–ದೂರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಮಾ.31ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ದೂರ, ತಳೂರು, ಮುರುಡಗಳ್ಳಿ, ದೊಡ್ಡ ಕಾಟೂರು, ಚಿಕ್ಕ ಕಾಟೂರು, ಸಿಂಧುವಳ್ಳಿ, ನಂಜುಂಡೇಶ್ವರ ಬಡಾವಣೆ, ನಂಜನಗೂಡು ವಿಭಾಗದ ಹಳ್ಳಿಕೆರೆಹುಂಡಿ, ಬಿದರಗೂಡು, ಮೂಡಲಹುಂಡಿ (ಕಾಟೂರು) ನೀರು ಸರಬರಾಜು ಕೇಂದ್ರಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪತ್ರಿಕಾ ಪ್ರಕಟಣೆ ತಿಳಿಸಿದೆ.



ಲಕ್ನೋ ಪಂಚ್‌ಗೆ ಪಂಜಾಬ್ ಪಂಚರ್



ಲಕ್ನೋ, ಮಾ.30– ಕ್ವಿಂಟನ್ ಡಿಕಾಕ್ ಅವರ ಆಕರ್ಷಕ ಅರ್ಧಶತಕ, ನಿಕೋಲಸ್ ಪೂರನ್ ಹಾಗೂ ಕೃನಾಲ್ ಪಾಂಡ್ಯ ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್, ಪಂಜಾಬ್ ಕಿಂಗ್ಸ್ ವಿರುದ್ಧ 21 ರನ್‌ಗಳ ಗೆಲುವು ಸಾಧಿಸಿದೆ.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕೆ.ಎಲ್.ರಾಹುಲ್ ತಲಾ 1 ಸಿಕ್ಸರ್, ಬೌಂಡರಿ ಒಳಗೊಂಡ 15 ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ 9 ರನ್ ಗಳಿಸಿ ದೇವದತ್ತ ಪಡಿಕ್ಕಲ್ ಸಹ ವಿಕೆಟ್ ಒಪ್ಪಿಸಿದರು. ಬಳಿಕ ಆಗಮಿಸಿದ ಮಾರ್ಕಸ್ ಸ್ಟೊಯ್ನಿಸ್ 2 ಸಿಕ್ಸರ್ ಒಳಗೊಂಡ 19 ರನ್ ಸಿಡಿಸಿ ನಿರ್ಗಮಿಸಿದರು. ಮತ್ತೊಂದೆಡೆ ಹೋರಾಟ ಮುಂದುವರೆಸಿದ ಕ್ವಿಂಟನ್ ಡಿಕಾಕ್ ಅರ್ಧಶತಕ ಸಿಡಿಸುವ ಮೂಲಕ ನಾಯಕ ನಿಕೋಲಸ್ ಪೂರನ್ ಜೊತೆಗೂಡಿ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 38 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 54ರನ್ ಗಳಿಸಿ ಔಟಾದರು. ಬಳಿಕ ಬೌಂಡರಿ, ಸಿಕ್ಸ್ ಮೂಲಕ ಅಬ್ಬರಿಸಿದ ಪೂರನ್ 21 ಎಸೆತದಲ್ಲಿ 42 ರನ್ ಸಿಡಿಸಿದರು. ಬಳಿಕ ಕ್ರೀಸ್‌ಗೆ ಆಗಮಿಸಿದ ಆಯುಷ್ ಬದೋನಿ ಕೇವಲ 8 ರನ್ ಸಿಡಿಸಿ ಔಟಾದರು. ಇನ್ನಿಂಗ್ಸ್ ಕೊನೆ ಓವರ್‌ಗಳಲ್ಲಿ ಅಬ್ಬರಿಸಿದ ಕೃನಾಲ್ ಪಾಂಡ್ಯ ತಮ್ಮ ಸ್ಫೋಟಕ ಆಟದ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಕೇವಲ 22 ಎಸೆತಗಳಲ್ಲಿ 43 ರನ್ ಸಿಡಿಸಿದ ಕೃನಾಲ್ ಪಾಂಡ್ಯ ಅಜೇಯರಾಗಿ ಉಳಿದರು. ಪಂಜಾಬ್ ಕಿಂಗ್ಸ್ ಪರ ಸ್ಯಾಮ್ ಕರ್ರನ್ 3, ಅರ್ಶದೀಪ್ ಸಿಂಗ್ 2, ಕಗಿಸೋ ರಬಾಡ ಹಾಗೂ ರಾಹುಲ್ ಚಹಾರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ನಾಯಕ ಶಿಖರ್ ಧವನ್ ಅರ್ಧಶತಕ ವ್ಯರ್ಥ, ಮಯಾಂಕ್ ಯಾದವ್ ಪಂದ್ಯಶ್ರೇಷ್ಠ

200 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 177 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಬೃಹತ್ ಚೇಸಿಂಗ್ ಆರಂಭಿಸಿದ ಪಂಜಾಬ್‌ಗೆ ನಾಯಕ ಶಿಖರ್ ಧವನ್ ಹಾಗೂ ಜಾನಿ ಬೈರ್‌ಸ್ಟೋವ್ 102 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಜಾನಿ ಬೈರ್‌ಸ್ಟೋವ್ 29 ಎಸೆತಗಳಲ್ಲಿ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 42ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಪ್ರಭ್‌ಸಿಮ್ರಾನ್ ಸಿಂಗ್ 7 ಎಸೆತಗಳಲ್ಲಿ 19 ಹಾಗೂ ಜಿತೇಶ್ ಶರ್ಮಾ 6 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಭರ್ಜರಿ ಆಟವಾಡಿದ ನಾಯಕ ಶಿಖರ್ ಧವನ್ 50 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳಗೊಂಡ 70 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಲಿಯಾಮ್ ಲಿವಿಂಗ್‌ಸ್ಟೋನ್ 28, ಶಶಾಂಕ್ ಸಿಂಗ್ 9 ರನ್ ಗಳಿಸಿದರು.

ಲಕ್ನೋ ಪರ ಮಯಾಂಕ್ ಯಾದವ್ 3, ಮೊಹ್ಸಿನ್ ಖಾನ್ 2 ವಿಕೆಟ್ ಪಡೆದರು. ಮಯಾಂಕ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

[ಮಾ. 31]

ಗುಜರಾತ್ V/S ಹೈದರಾಬಾದ್
ಸ್ಥಳ: ನರೇಂದ್ರ ಮೋದಿ ಕ್ರೀಡಾಂಗಣ ಅಹಮದಾಬಾದ್
ಸಮಯ: ಮಧ್ಯಾಹ್ನ 3.30

ಡೆಲ್ಲಿ V/S ಚೆನ್ನೈ
ಸ್ಥಳ: ವೈ.ಎಸ್.ರಾಜಶೇಖರ್ ರೆಡ್ಡಿ ಕ್ರೀಡಾಂಗಣ, ವಿಶಾಖಪಟ್ಟಣಂ
ಸಮಯ: ರಾತ್ರಿ 7.30

ಮಹಿಳಾ ಮೀಸಲಾತಿ ಹೆಚ್ಚಳಕ್ಕೆ ಒತ್ತಡ ಹೇರಬೇಕು

ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅಭಿಮತ

ಮೈಸೂರು, ಮಾ.30(ಆರ್‌ಕೆ)– ಸಮಾಜದ ಎಲ್ಲಾ ಮಹಿಳೆಯರಿಗೂ ಮೀಸಲಾತಿ ಹೆಚ್ಚಳಕ್ಕೆ ಒತ್ತಡ ಹೇರಬೇಕು ಎಂದು ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅವರು ಇಂದಿಲ್ಲಿ ತಿಳಿಸಿದ್ದಾರೆ.

ವುಮೆನ್ ಇನ್ ಸ್ಮಾಲ್ ಎಂಟರ್ ಪ್ರೈಸಸ್(WISE) ಮತ್ತು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್(MCCI) ವತಿಯಿಂದ ಮೈಸೂರಿನ ಗ್ರಾಂಡ್ ಮರ್ಕ್ಯೂರ್ ಹೋಟೆಲ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವ ಮಹಿಳೆಯರಿಗೆ ಸೂಕ್ತ ವೇದಿಕೆ ನಿರ್ಮಿಸಲು ಮೀಸಲಾತಿ ಹೆಚ್ಚಿಸುವ ಅಗತ್ಯವಿದೆ ಎಂದರು.

ಮನೆಯಿಂದ ಕೆಲಸ ಆರಂಭಿಸಿ ಹೊರಗೂ ಕಾರ್ಯಪ್ರವೃತ್ತರಾಗುವ ಮಹಿಳೆಯರು ಕೋವಿಡ್‌ನಂತಹ ಕ್ಲಿಷ್ಟ ಸಂದರ್ಭದಲ್ಲಿ ವರ್ಕ್ ಫ್ರಮ್ ಹೋಂ ಮೂಲಕ ನಿರಂತರವಾಗಿ ಚಟುವಟಿಕೆಯಲ್ಲಿದ್ದರು. ಸ್ವಯಂ ಉದ್ಯೋಗ, ಉದ್ಯಮ ಆರಂಭಿಸಿ ಸ್ವಾವಲಂಬಿಯಾಗಿರುವ ಮಹಿಳೆಯರು ತಂತ್ರಜ್ಞಾನವನ್ನು ಬಳಸಿಕೊಂಡು ಡಿಜಿಟಲ್ ಕ್ಷೇತ್ರದ ಕಡೆಯೂ ಆಸಕ್ತಿ ಬೆಳೆಸಿಕೊಳ್ಳಬೇಕೆಂದು ರತ್ನಪ್ರಭ ಅವರು ತಿಳಿಸಿದರು.

ಕೈಗಾರಿಕೆ ಆರಂಭಿಸಿದರೆ ಅದರ ಸಂಪರ್ಕ ಜಾಲ ವಿಸ್ತರಿಸಿಕೊಂಡು ಗ್ರಾಹಕರ ಅಭಿರುಚಿಗೆ ತಕ್ಕಂತೆ ಉತ್ಪನ್ನ ತಯಾರಿಸಿ ಡಿಜಿಟಲ್ ಮಾರುಕಟ್ಟೆ ಮೂಲಕ ಎಲ್ಲಾ ಕಡೆಗೂ ಸರಬರಾಜು ಮಾಡಿ ತಮ್ಮ ಉದ್ದಿಮೆಯನ್ನು ವಿಸ್ತಾರ ಮಾಡಿಕೊಳ್ಳಿ ಎಂದು ರತ್ನಪ್ರಭಾ ಅವರು ಮಹಿಳಾ ಎಂಟರ್‌ಪ್ರಿನರ್‌ಗಳಿಗೆ ಕಿವಿಮಾತು ಹೇಳಿದರು.



ವುಮನ್ ಇನ್‌ಸ್ಮಾಲ್ ಎಂಟರ್‌ಪ್ರೈಸಸ್ ವತಿಯಿಂದ ಶನಿವಾರ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಯಶಸ್ವಿ ಮಹಿಳಾ ಉದ್ಯಮಿಗಳಾದ (ಎಡದಿಂದ) ಶುಭಾ ಸಂಜಯ್ ಅರಸ್, ನಮ್ರತಾ ಸುನಿಲ್ ಬಳಿಗ, ಡಾ.ಶ್ರೀಲಕ್ಷ್ಮಿ ದೇಶಿರಾಜು ಹಾಗೂ ಜಿ.ನಳಿನಿ ಅವರನ್ನು ಸನ್ಮಾನಿಸಲಾಯಿತು. (ನಿಂತಿರುವವರು ಎಡದಿಂದ) ರಾಜಲಕ್ಷ್ಮಿ ಉಬಂಟು, ಪದ್ಮಾವತಿ ಎಸ್.ಭಟ್, ಪದ್ಮಿನಿ ಶಿವಣ್ಣ, ಉಮಾರೆಡ್ಡಿ, ಕೆ.ರತ್ನಪ್ರಭ, ಮಾಲಿನಿ ಶ್ರೀನಿವಾಸನ್, ವಿ.ಎ.ವಸಂತಕುಮಾರಿ ಹಾಗೂ ಬಿ.ಆರ್.ಭಾರತಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಯುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳ ಮೂಲಕ ನೆರವು ನೀಡುತ್ತಿರುವುದರಿಂದ ಅವುಗಳನ್ನು ಸದುಪಯೋಗಪಡಿಸಿಕೊಂಡು ಉದ್ಯಮದಲ್ಲಿ ಯಶಸ್ವಿಯಾಗಿ. –ಕೆ.ರತ್ನಪ್ರಭಾ

ಯಶಸ್ವಿ ಉದ್ಯಮಿಗಳಾದ ನಮ್ರತಾ ಸುನಿಲ್ ಬಳಿಗ, ಜಿ.ನಳಿನಿ, ಶುಭ ಸಂಜಯ್ ಅರಸ್ ಹಾಗೂ ಡಾ.ಶ್ರೀ ಲಕ್ಷ್ಮಿ ದೇಶಿರಾಜು ಅವರನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇದೇ ವೇಳೆ ಸನ್ಮಾನಿಸಲಾಯಿತು.

ಎಫ್‌ಕೆಸಿಸಿಐ ಬೆಂಗಳೂರು ಉಪಾಧ್ಯಕ್ಷೆ ಉಮಾ ರೆಡ್ಡಿ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಬ್ಯುಸಿನೆಸ್ ಮೆಂಟರ್ ರೂಪಾ ಪಾಟೀಲ್, ವುಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸಸ್ ಅಧ್ಯಕ್ಷೆ ಟಿ.ಎ. ವಸಂತಕುಮಾರಿ, ಉಪಾಧ್ಯಕ್ಷರಾದ ಪದ್ಮಿನಿ ಶಿವಣ್ಣ, ಮಾಲಿನಿ ಶ್ರೀನಿವಾಸನ್, ಜಂಟಿ ಕಾರ್ಯದರ್ಶಿ ಶಶಿಕಲಾ ಅಶೋಕ್, ಖಜಾಂಚಿ ಕಲ್ಪನಾ ಸುರೇಂದ್ರ, ಎಂಸಿಸಿಐ ಮ್ಯಾನೇಜರ್ ಬಿ.ಆರ್. ಭಾರತಿ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ರೋಟರಿ ಮೈಸೂರು ಉತ್ತರ, ರೋಟರಿ ಕ್ಲಬ್ ಆಫ್ ಹೆಚ್.ಡಿ.ಕೋಟೆ ಸಹಯೋಗದಲ್ಲಿ ಮದರ್ ಥೆರೆಸಾ ಹೆಸರಲ್ಲಿ ಕೊಡಮಾಡುವ ಪ್ರಶಸ್ತಿಯನ್ನು ಹಾಡಿ ಆಸ್ಪತ್ರೆಗಳಲ್ಲಿ ದಾದಿಯರಾಗಿ ಕೆಲಸ ಮಾಡುತ್ತಿರುವ ಜಿ.ಮಾಚಿ ರವಿಕುಮಾರ್, ಕೆ.ಕಮಲ, ಎಂ.ಸರೋಜ, ಬಸಮ್ಮ, ಮಾಚಿಕೃಷ್ಣ ಅವರಿಗೆ ನೀಡಲಾಯಿತು. ಡಾ.ಜಿ.ಸಿದ್ದೇಶ್, ಡಿ.ಬಿ.ರಾಜಶೇಖರಮೂರ್ತಿ, ಡಾ.ಜಯಂತ್, ರಾಜಶೇಖರ ಕದಂಬ, ಯಶಸ್ವಿ ಸೋಮಶೇಖರ್, ನಂಜಯ್ಯ, ಎಂ.ಕೆ.ಶ್ರೀಧರ್, ರಾಜು, ಗಂಗಾಧರ್, ಗೋಪಾಲ್, ಲಾಡ್ ಇನ್ನಿತರರಿದ್ದರು.

ಗೋಡೆ, ಕೈಯ್ಯಲ್ಲಿ 'ನನ್ನ ಸಾವಿಗೆ ಗಂಡನೇ ಕಾರಣ' ಎಂದು ಬರೆದು ಮಹಿಳೆ ಆತ್ಮಹತ್ಯೆ!

ಮೈಸೂರು, ಮಾ.30(ಎಸ್‌ಬಿಡಿ)– 'ನನ್ನ ಸಾವಿಗೆ ಗಂಡನೇ ಕಾರಣ' ಎಂದು ಗೋಡೆಯಲ್ಲಿ ಬರೆದು ಮಹಿಳೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜನತಾನಗರದಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ನಾರಾಯಣ್ ಅವರ ಪತ್ನಿ ಲಕ್ಷ್ಮೀ(39) ಮನೆ ಚಾವಣಿಯ ಕಬ್ಬಿಣದ ಹುಕ್‌ಗೆ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಶುಕ್ರವಾರ ರಾತ್ರಿ ಬೆಳಕಿಗೆ ಬಂದಿದೆ.

ನಾರಾಯಣ್ ಹಾಗೂ ಲಕ್ಷ್ಮೀ ದಂಪತಿಗೆ ಪುತ್ರಿ ಹಾಗೂ ಪುತ್ರ ಇದ್ದಾರೆ. ಆದರೆ ಕೌಟುಂಬಿಕ ಕಲಹದಿಂದ ಕಳೆದ ಐದಾರು ತಿಂಗಳಿಂದ ದಂಪತಿ ಪ್ರತ್ಯೇಕವಾಗಿದ್ದರು. ಮಕ್ಕಳಿಬ್ಬರೂ ತಂದೆಯೊಂದಿಗೆ ವಾಸವಿದ್ದ ಕಾರಣ ಪಕ್ಕದಲ್ಲೇ ಮತ್ತೊಂದು ಮನೆಯಲ್ಲಿ ಲಕ್ಷ್ಮೀ ಒಂಟಿಯಾಗಿದ್ದರು. ಪತಿ ಸರಿಯಾಗಿ ನೋಡಿಕೊಳ್ಳದೆ ಜೀವನ ನಡೆಸುವುದು ಕಷ್ಟವಾಗಿತ್ತು. ಅಲ್ಲದೆ ನಾರಾಯಣ್ ಹಾಗೂ ಅವರ ತಾಯಿ ದೇವಮ್ಮ ಕಂಡಾಗಲೆಲ್ಲಾ ಲಕ್ಷ್ಮೀ ಅವರನ್ನು ನಿಂದಿಸಿ, ಮಾನಸಿಕ ಹಿಂಸೆ ನೀಡುತ್ತಿದ್ದರು. ತವರು ಮನೆಗೆ ಹೋಗುವಂತೆ ಕಿರುಕುಳ ನೀಡುತ್ತಿದ್ದರು. ಪತಿ ದೈಹಿಕ ಹಲ್ಲೆಯನ್ನೂ ಮಾಡಿದ್ದ ಎಂದು ಆರೋಪಿಸಲಾಗಿದೆ. ಲಕ್ಷ್ಮೀ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಯಾವುದೇ ಡೆತ್‌ನೋಟ್ ಸಿಕ್ಕಿಲ್ಲ. ಆದರೆ ಗೋಡೆ ಹಾಗೂ ಅವರ ಕೈಯ್ಯಲ್ಲಿ 'ನನ್ನ ಸಾವಿಗೆ ಗಂಡನೇ ಕಾರಣ' ಎಂದು ಪೆನ್‌ನಿಂದ ಬರೆದಿದೆ. ಸೀಲಿಂಗ್‌ನ ಕಬ್ಬಿಣದ ಹುಕ್‌ಗೆ ವೇಲ್‌ನಿಂದ ಅವರು ನೇಣು ಹಾಕಿಕೊಂಡಿದ್ದು, ಶುಕ್ರವಾರ ರಾತ್ರಿ 8.15ರ ವೇಳೆಗೆ ನೆರೆಹೊರೆಯವರು ಕಂಟ್ರೋಲ್ ರೂಂಗೆ ವಿಚಾರ ತಿಳಿಸಿದರು. ಕೂಡಲೇ ಸ್ಥಳಕ್ಕೆ ತೆರಳಿ ಕ್ರಮ ವಹಿಸಲಾಯಿತು. ವೈದ್ಯಕೀಯ ಪರೀಕ್ಷೆ ನಂತರ ಶನಿವಾರ ಮಧ್ಯಾಹ್ನ ಲಕ್ಷ್ಮೀ ದೇಹವನ್ನು ಅವರ ತವರು ಮನೆಯವರಿಗೆ ಒಪ್ಪಿಸಲಾಯಿತು. ಲಕ್ಷ್ಮೀ ಅವರ ಅಣ್ಣ ನೀಡಿದ ದೂರಿನ ಮೇರೆಗೆ ಲಕ್ಷ್ಮೀ ಪತಿ ನಾರಾಯಣ್ ಹಾಗೂ ಅತ್ತೆ ದೇವಮ್ಮ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ(ಐಪಿಸಿ–306) ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗಿದೆ ಎಂದು ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್ ತಿಳಿಸಿದ್ದಾರೆ.

ಸಾವಿನಲ್ಲೂ ಒಂದಾದ ದಂಪತಿ

ಅನಾರೋಗ್ಯದಿಂದ ಪತ್ನಿ ಆತ್ಮಹತ್ಯೆ; ಪತಿ ಹೃದಯಾಘಾತದಿಂದ ಸಾವು

ಮೈಸೂರು, ಮಾ.30(ಎಸ್‌ಬಿಡಿ)– ಅನಾರೋಗ್ಯದಿಂದ ಖಿನ್ನತೆಗೊಳಗಾಗಿ ಪತ್ನಿ ಆತ್ಮಹತ್ಯೆ ಮಾಡಿಕೊಂಡ ಕೆಲವೇ ಗಂಟೆಗಳಲ್ಲಿ ಪತಿಯೂ ಹೃದಯಾಘಾತದಿಂದ ಮೃತಪಟ್ಟಿರುವ ಹೃದಯ ವಿದ್ರಾವಕ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರಿನ ವಿವೇಕಾನಂದನಗರದ ವಿಜಯಲಕ್ಷ್ಮೀ(54) ಹಾಗೂ ಮಂಜುನಾಥ್(58) ದಂಪತಿ ಸಾವಿನಲ್ಲೂ ಒಂದಾಗಿದ್ದಾರೆ. ಇವರ ಇಬ್ಬರು ಮಕ್ಕಳಲ್ಲಿ ಒಬ್ಬರು ಅಮೆರಿಕಾದಲ್ಲಿದ್ದು ಭಾನುವಾರ ಬೆಳಗ್ಗೆ ಮೈಸೂರು ತಲುಪಲಿದ್ದಾರೆ.

ರೈಲ್ವೆ ಕಾರ್ಯಾಗಾರದಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರ್ ಆಗಿದ್ದ ಮಂಜುನಾಥ್, ಕುಟುಂಬದೊಂದಿಗೆ ನೆಮ್ಮದಿಯಾಗಿದ್ದರು. ಆದರೆ ಅವರ ಪತ್ನಿ ವಿಜಯಲಕ್ಷ್ಮಿ ಅವರು ಮೂರ್ನಾಲ್ಕು ವರ್ಷಗಳಿಂದ ನಿದ್ರಾಹೀನತೆ ಸಮಸ್ಯೆಯಿಂದ ಬಳಲುತ್ತಿದ್ದರು. ಇದರಿಂದ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ. ಮಂಜುನಾಥ್ ಅವರು ಶುಕ್ರವಾರ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಊಟಕ್ಕೆಂದು ಮನೆಗೆ ಬಂದಾಗ ವಿಜಯಲಕ್ಷ್ಮೀ ಅವರು ಸಹಜವಾಗಿ ಲವಲವಿಕೆಯಿಂದಲೇ ಇದ್ದರಂತೆ.

ಮಂಜುನಾಥ್ ಸಂಜೆ 6 ಗಂಟೆ ಸಮಯದಲ್ಲಿ ಮನೆಗೆ ಬಂದು ಬಾಗಿಲು ತಟ್ಟಿದರೂ ಚಿಲಕ ತೆಗೆದಿಲ್ಲ. ಇದರಿಂದ ಆತಂಕಗೊಂಡು ಅಕ್ಕಪಕ್ಕದ ಮನೆಯವರ ಸಹಾಯದಿಂದ ಬಾಗಿಲು ಮೀಟಿ ಒಳಹೋಗಿ ನೋಡಿದಾಗ ಮಹಾಲಕ್ಷ್ಮೀ ಅವರು ಫ್ಯಾನ್‌ಗೆ ವೇಲ್‌ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ವಿಷಯ ತಿಳಿದ ಕುವೆಂಪುನಗರ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲಿಸಿದರು. ಪುತ್ರಿ ಅಮೆರಿಕಾದಿಂದ ಬರಬೇಕಿದ್ದ ಕಾರಣ ಮೃತದೇಹವನ್ನು ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿದರು. ಪತ್ನಿಯ ಸಾವಿನಿಂದ ಆಘಾತಕ್ಕೆ ಒಳಗಾಗಿದ್ದ ಮಂಜುನಾಥ್‌ಗೆ ಎದೆ ನೋವು ಕಾಣಿಸಿಕೊಂಡಿದೆ. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಯಿತಾದರೂ ರಾತ್ರಿ ಸುಮಾರು 12 ಗಂಟೆ ವೇಳೆಗೆ ಮೃತಪಟ್ಟಿದ್ದಾರೆ. ಅಮೆರಿಕಾದಲ್ಲಿರುವ ಪುತ್ರಿ ಭಾನುವಾರ ಬೆಳಗ್ಗೆ ಮೈಸೂರಿಗೆ ಬರಬಹುದು. ನಂತರ ವೈದ್ಯಕೀಯ ಪರೀಕ್ಷೆ ನಡೆಸಿ, ವಿಜಯಲಕ್ಷ್ಮೀ ಅವರ ದೇಹವನ್ನು ಕುಟುಂಬದವರಿಗೆ ಒಪ್ಪಿಸಲಾಗುವುದು. ಈ ಸಂಬಂಧ ಪ್ರಕರಣ ದಾಖಲಾಗಿದೆ ಎಂದು ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೀಶ್ ತಿಳಿಸಿದ್ದಾರೆ.

ಸ್ವಯಂ ಉದ್ಯೋಗಕ್ಕೆ ಮಹಿಳೆಯರಿಗೆ ಬ್ಯಾಂಕ್‌ಗಳು ಸಹಕಾರಿಯಾಗಿವೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಬ್ಯಾಂಕ್ ಅಧಿಕಾರಿ ವಿವರಣೆ

ಮೈಸೂರು, ಮಾ.30(ಎಂಕೆ)– ಮೈಸೂರಿನ ಉದಯಗಿರಿಯಲ್ಲಿರುವ ಸಫಾ ಫಂಕ್ಷನ್ ಹಾಲ್‌ನಲ್ಲಿ 65 ಮಹಿಳಾ ಸಂಘ–ಸಂಸ್ಥೆಗಳನ್ನೊಳಗೊಂಡ ಆಶ್ರಯ ಪ್ರಗತಿ ಸಂಘಗಳ ಒಕ್ಕೂಟದ ವತಿಯಿಂದ ಶನಿವಾರ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಬ್ಯಾಂಕ್ ಆಫ್ ಇಂಡಿಯಾ ಉದಯಗಿರಿ ಶಾಖೆಯ ವ್ಯವಸ್ಥಾಪಕ ಎಸ್.ಮುರಳಿಧರ್ ಮಾತನಾಡಿ, ಮಹಿಳೆಯರು ಸ್ವಯಂ ಉದ್ಯೋಗ ಕಂಡುಕೊಳ್ಳಲು ಬ್ಯಾಂಕ್‌ಗಳು ಸಹಕಾರಿಯಾಗಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾಲ–ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಿ, ಬ್ಯಾಂಕ್‌ಗಳಿಗೆ ಭೇಟಿ ನೀಡಿದರೆ ಸುಲಭವಾಗಿ ಸಾಲ ಪಡೆದು, ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದಾಗಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಭಾರತೀಯ ಮಹಿಳಾ ಉದ್ಯಮಿಗಳು ಮತ್ತು ಟ್ರೈನರ್ ಅಸೋಸಿಯೇಷನ್ ನಿರ್ದೇಶಕಿ ದಿವ್ಯರಾಜ್ ಕಾಮಯ್ಯ ಮಾತನಾಡಿ, ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಿಗೆ ಆಸಕ್ತ ಮಹಿಳೆಯರಿಂದ ಅರ್ಜಿ ಸಲ್ಲಿಸುವುದಲ್ಲದೆ ಅವರಿಗೆ ತರಬೇತಿಯನ್ನು ನೀಡುವ ಮೂಲಕ ಸ್ವಯಂ ಉದ್ಯೋಗಿಗಳನ್ನಾಗಿ ಮಾಡಲಾಗುತ್ತಿದೆ. ಕಳೆದ ವರ್ಷ 200 ಕ್ಕೂ ಹೆಚ್ಚು ನಿರುದ್ಯೋಗಿ ಯುವಕ–ಯುವತಿಯರಿಗೆ ಮೀನುಗಾರಿಕೆ, ಆಹಾರ ಪದಾರ್ಥಗಳ ಪೊಟ್ಟಣ ತಯಾರಿಕೆ ಸೇರಿದಂತೆ ಹಲವು ಬಗೆಯ ತರಬೇತಿ ಮೂಲಕ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲಾಗುತ್ತಿದೆ ಎಂದರು. ಇದೇ ವೇಳೆ ಖಾದಿ ಗ್ರಾಮೀಣ ಉದ್ಯೋಗ ವತಿಯಿಂದ ಉಚಿತ ತರಬೇತಿ ಪಡೆದ ಜಯಂತಿ, ಭವಾನಿ, ನಾಗವೇಣಿ, ಚಂದನ, ರಶ್ಮಿ ಅವರಿಗೆ ಪ್ರಮಾಣ ಪತ್ರ ನೀಡಲಾಯಿತು ಹಾಗೆಯೇ 20 ಮಂದಿ ಶಿಬಿರಾರ್ಥಿಗಳಿಗೆ ಯಂತ್ರೋಪಕರಣ, ಟೂಲ್‌ಕಿಟ್ಸ್‌ಗಳನ್ನು ನೀಡಲಾಯಿತು. ಬಳಿಕ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪೌರಕಾರ್ಮಿಕ ಮಹಿಳೆಯರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಆಶ್ರಯ ಪ್ರಗತಿ ಸಂಘಗಳ ಒಕ್ಕೂಟದ ಅಧ್ಯಕ್ಷೆ ಚಂದ್ರಮ್ಮ, ಗಂಗಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಜ್‌ಕಾಮಯ್ಯ, ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತೆ ವಿದ್ಯಾಸಾಗರ ಕದಂಬ, ಸಮಾಜ ಸೇವಕಿ ಪ್ರೇಮಾಕುಮಾರಿ ವಿದ್ಯಾಸಾಗರ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಮಾಜಿ ಧರ್ಮದರ್ಶಿ ಸವಿತ ಘಡ್ಕರ್, ಕರ್ನಾಟಕ ರಕ್ಷಣಾ ವೇದಿಕೆಯ ಬೆಳ್ಳಿಕಟ್ಟೆ ಸುವರ್ಣ, ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷೆ ಪ್ರೇಮಲತಾ, ಸಬಿನಾ ತಾಜ್, ಶುಭಮಂಗಳ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಉದಯಗಿರಿಯಲ್ಲಿರುವ ಸಫಾ ಫಂಕ್ಷನ್ ಹಾಲ್‌ನಲ್ಲಿ ಆಶ್ರಯ ಪ್ರಗತಿ ಸಂಘಗಳ ಒಕ್ಕೂಟದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಕೊಡವ ಕುಟುಂಬಗಳ ಕುಂಡ್ಯೋಳಂಡ ಹಾಕಿ ಹಬ್ಬಕ್ಕೆ ಚಾಲನೆ

ಕೊಡವ ಸಾಂಪ್ರದಾಯಿಕ ಉಡುಗೆಯೊಂದಿಗೆ ಭವ್ಯ ಮೆರವಣಿಗೆ, 360 ತಂಡಗಳು ಭಾಗಿ




ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಹಾಕಿ ಹಬ್ಬಕ್ಕೆ ಚಾಲನೆ ನೀಡುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಕೊಡವ ಸಾಂಪ್ರದಾಯಿಕ ಉಡುಗೆಯಲ್ಲಿ ಮೆರವಣಿಗೆ ನಡೆಸುತ್ತಿರುವುದನ್ನು ಕಾಣಬಹುದು.

ಮಡಿಕೇರಿ,ಮಾ.30– ಕೊಡವ ಕುಟುಂಬಗಳ ನಡುವಿನ 24ನೇ ವರ್ಷದ ಪ್ರತಿಷ್ಠಿತ 'ಕುಂಡ್ಯೋಳಂಡ ಹಾಕಿ ಹಬ್ಬ'ಕ್ಕೆ ವರ್ಣರಂಜಿತ ಚಾಲನೆ ದೊರೆತಿದೆ. ನಾಪೋಕ್ಲುವಿನ ಕೆಪಿಎಸ್ ಶಾಲೆಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಹಾಕಿ ನಮ್ಮೆಗೆ ಹಾಕಿ ಕ್ರೀಡೆಯ ಸಂಪ್ರದಾಯದಂತೆ ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಅವರು ಬೆಳ್ಳಿಯ ಹಾಕಿ ಸ್ಟಿಕ್‌ನಿಂದ ಬೆಳ್ಳಿಯ ಚೆಂಡನ್ನು ಹೊಡೆಯುವ ಮೂಲಕ ಕುಂಡ್ಯೋಳಂಡ ಹಾಕಿ ನಮ್ಮೆಗೆ ವಿಧ್ಯುಕ್ತ ಚಾಲನೆ ನೀಡಿದರು.

ಭವ್ಯ ಮೆರವಣಿಗೆ: ಹಾಕಿ ಪಂದ್ಯಾವಳಿಗೆ ಚಾಲನೆ ನೀಡುವ ಮುನ್ನ ನಾಪೋಕ್ಲುವಿನ ಶ್ರೀ ರಾಮಮಂದಿರದಲ್ಲಿ ಕುಂಡ್ಯೋಳಂಡ ಕುಟುಂಬಸ್ಥರು ಮತ್ತು ಕೊಡವ ಹಾಕಿ ಅಕಾಡೆಮಿ ಪ್ರಮುಖರು ಮತ್ತು ಕುಟುಂಬ ಸದಸ್ಯರು ವಿಶೇಷ ಪೂಜೆ ಸಲ್ಲಿಸುವ ಮೂಲಕ ಪಂದ್ಯಾಟ ಸುಸೂತ್ರವಾಗಿ ನಡೆಯಲಿ ಎಂದು ಪ್ರಾರ್ಥಿಸಿದರು. ಬಳಿಕ ನಗರದ ಮುಖ್ಯಬೀದಿಗಳಲ್ಲಿ ಕೊಡಗಿನ ಸಾಂಪ್ರದಾಯಿಕ ವಾಲಗ ಮತ್ತು ದುಡಿಕೊಟ್ ಪಾಟ್‌ನೊಂದಿಗೆ ಕುಂಡ್ಯೋಳಂಡ ಕುಟುಂಬಸ್ಥರು ಮತ್ತು ಅಲ್ಲಿನ ಗ್ರಾಮಸ್ಥರು ಸಾಂಪ್ರದಾಯಿಕ ಉಡುಗೆಯೊಂದಿಗೆ ಭವ್ಯ ಮೆರವಣಿಗೆಯಲ್ಲಿ ಸಾಗಿ ಬಂದರು. ಬಳಿಕ ಮೈದಾನದ ಪ್ರವೇಶ ದ್ವಾರದಲ್ಲಿ ನಿರ್ಮಿಸಲಾಗಿದ್ದ ಕೌಟುಂಬಿಕ ಹಾಕಿ ಕ್ರೀಡೆಯ ಜನಕ ಪಾಂಡಂಡ ಕುಟ್ಟಪ್ಪ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಲಾಯಿತು.

24 ಸುತ್ತು ಗುಂಡಿನ ಗೌರವ: 24ನೇ ವರ್ಷದ ಕೌಟುಂಬಿಕ ಹಾಕಿ ಪಂದ್ಯಾವಳಿಯ ಹಿನ್ನೆಲೆಯಲ್ಲಿ ಮೈದಾನದಲ್ಲಿ ಈವರೆಗೆ ಹಾಕಿ ಪಂದ್ಯಾವಳಿ ಆಯೋಜಿಸಿದ್ದ ಒಟ್ಟು 24 ಕುಟುಂಬಗಳ ಹೆಸರಲ್ಲಿ ಗಾಳಿಯಲ್ಲಿ 24 ಸುತ್ತು ಗುಂಡು ಹಾರಿಸುವ ಮೂಲಕ ಗೌರವ ಸಮರ್ಪಿಸಲಾಯಿತು. ಇದೇ ವೇಳೆ ಕೊಡವ ಹಾಕಿ ಅಕಾಡೆಮಿಯ ಧ್ವಜವನ್ನು ಪಾಂಡಂಡ ಕೆ.ಬೋಪಣ್ಣ ಮತ್ತು ಕುಂಡ್ಯೋಳಂಡ ಕುಟುಂಬದ ಧ್ವಜವನ್ನು ಕುಂಡ್ಯೋಳಂಡ ಕುಟುಂಬದ ಪಟ್ಟೇದಾರ ಹಾಗೂ ಕ್ರೀಡಾಕೂಟದ ಅಧ್ಯಕ್ಷ ರಮೇಶ್ ಮುದ್ದಯ್ಯ ಆರೋಹಣ ಮಾಡಿದರು. ಈ ಬಾರಿಯ ಪಂದ್ಯಾವಳಿಯಲ್ಲಿ ಒಟ್ಟು 360 ತಂಡಗಳು ನೋಂದಾವಣೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ 360 ಬಲೂನ್‌ಗಳನ್ನು ಹಾರಿ ಬಿಡಲಾಯಿತು. ಕುಂಡ್ಯೋಳಂಡ ಕುಟುಂಬದ ನಮ್ಮೆಯ ಲಾಂಛನವಿರುವ ಬೃಹತ್ ಗಾಳಿಪಟ ಮತ್ತು 360 ಕುಟುಂಬಗಳ ಹೆಸರಲ್ಲಿ ಗಾಳಿ ಪಟಗಳನ್ನು ಹಾರಿಸುವ ಮೂಲಕ ಕ್ರೀಡಾ ಕೂಟಕ್ಕೆ ವಿಶೇಷ ಕಳೆ ನೀಡಲಾಯಿತು.

ಶುಭ ಕೋರಿದ ಗಣ್ಯರು: ಕುಂಡ್ಯೋಳಂಡ ಹಾಕಿ ಪಂದ್ಯಾವಳಿ ಉದ್ಘಾಟನಾ ಪಂದ್ಯಾಟದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ನೇವಿ ಇಲವನ್ ಮತ್ತು ಕೂರ್ಗ್ ಇಲವನ್ ತಂಡಗಳ ಆಟಗಾರರಿಗೆ ಗಣ್ಯರು ಶುಭ ಕೋರಿದರು. ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಪೊನ್ನಣ್ಣ, ಎಂಎಲ್‌ಸಿ ಸುಜಾ ಕುಶಾಲಪ್ಪ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, 'ಪ್ಯಾನಿಷಿಂಗ್ ಕೊಡವ' ಪುಸ್ತಕ ರಚನೆಗಾರರಾದ ಕಂಜಿರಂಡ ಕಾವೇರಿ ಪೊನ್ನಪ್ಪ, ಒಲಿಂಪಿಯನ್ ಪೈಕೇರ ಕಾಳಯ್ಯ, ಲೆಫ್ಟಿನೆಂಟ್ ಕರ್ನಲ್ ಬಾಳೆಯಡ ಸುಬ್ರಮಣಿ, ಹಾಕಿ ಕೂರ್ಗ್ ಅಧ್ಯಕ್ಷ ಪಳಂಗಂಡ ಲವಕುಮಾರ್, ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ, ಉದ್ಯಮಿ ಶರಿ ಸುಬ್ಬಯ್ಯ, ನಾಪೋಕ್ಲು ಕೊಡವ ಸಮಾಜ ಅಧ್ಯಕ್ಷ ಮುಂಡಂಡ ನಾಣಯ್ಯ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ, ಕೋಕೇರಿ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಕೇಟೋಳಿರ ಕುಟ್ಟಪ್ಪ ಮತ್ತಿತರರು ಆಟಗಾರರಿಗೆ ಶುಭ ಕೋರಿ ಹಾರೈಸಿದರು.

ಬಲಿಷ್ಠ ತಂಡಗಳ ರೋಚಕ ಪಂದ್ಯಾಟ: ಕುಂಡ್ಯೋಳಂಡ ಹಾಕಿ ನಮ್ಮೆಯ ಪ್ರಯುಕ್ತ 'ಇಂಡಿಯನ್ ನೇವಿ' ಮತ್ತು 'ಕೂರ್ಗ್ ಇಲವೆನ್' ಎಂಬ ಬಲಿಷ್ಠ ತಂಡಗಳ ನಡುವೆ ಉದ್ಘಾಟನಾ ಪಂದ್ಯ ಏರ್ಪಡಿಸಲಾಗಿತ್ತು. ಕೂರ್ಗ್ ಇಲವೆನ್ ತಂಡದಲ್ಲಿ ಕೊಡಗು ಜಿಲ್ಲಾಧಿಕಾರಿ ವೆಂಕಟರಾಜ, ಒಲಿಂಪಿಯನ್ ಸಣ್ಣುವಂಡ ಕೆ.ಉತ್ತಪ್ಪ, ನಿಖಿಲ್ ತಿಮ್ಮಯ್ಯ ಅವರುಗಳು ಮೈದಾನಕ್ಕಿಳಿದಿದ್ದರು. ಪಂದ್ಯಾಟ ಆರಂಭದಲ್ಲೇ ಇತ್ತಂಡಗಳು ಬಿರುಸಿನ ಪ್ರದರ್ಶನ ತೋರಿದವು. ಮೊದಲಾರ್ಧದಲ್ಲಿ ಕೂರ್ಗ್ ಇಲವೆನ್ ತಂಡದ ಪರವಾಗಿ ಚಿರಾಗ್ ಮೇದಪ್ಪ ಅವರು 1 ಗೋಲು ಬಾರಿಸುವ ಮೂಲಕ ತಂಡದ ಖಾತೆ ತೆರೆದರು. ದ್ವಿತೀಯಾರ್ಧದಲ್ಲಿ ಮತ್ತೊಮ್ಮೆ ರಭಸದ ಆಟ ಪ್ರದರ್ಶಿಸಿದ ಚಿರಾಗ್ ಮೇದಪ್ಪ 2ನೇ ಗೋಲು ದಾಖಲಿಸುವ ಮೂಲಕ ಕೂರ್ಗ್ ಇಲವೆನ್ ತಂಡಕ್ಕೆ ಮತ್ತೊಂದು ಮುನ್ನಡೆ ದೊರಕಿಸಿಕೊಟ್ಟರು.

ಆಟದ ವೇಗವನ್ನು ಹೆಚ್ಚಿಸಿಕೊಂಡ 'ನೇವಿ ಇಲವೆನ್' ತಂಡದ ಆಟಗಾರರು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು. ಪರಿಣಾಮ ಕೂರ್ಗ್ ಇಲವೆನ್ ತಂಡ ವಿರುದ್ಧ ನೇವಿ ಇಲವೆನ್ ತಂಡಕ್ಕೆ ಗೋಲು ಬಾರಿಸಲು ಸಹಕಾರಿಯಾಗಿದ್ದ ಒಟ್ಟು 6 ಪೆನಾಲ್ಟಿ ಕಾರ್ನರ್ ಅವಕಾಶ ದೊರೆತು. ಆದರೆ ಈ ಅವಕಾಶವನ್ನು ಗೋಲಾಗಿ ಪರಿವರ್ತಿಸಲು ನೇವಿ ಇಲವೆನ್ ವಿಫಲವಾಯಿತು. ದ್ವಿತೀಯಾರ್ಧದ ಬಳಿಕ ನೇವಿ ಇಲವೆನ್ ತಂಡದ ಆಟಗಾರ ಹರ್ಷ ರಾಜೂರ ಅವರು ಒಟ್ಟು 2 ಗೋಲು ಬಾರಿಸುವ ಮೂಲಕ ಪಂದ್ಯಾಟ ಸಮಬಲ ಕಾಣುವಂತಾಯಿತು. ನಿಗದಿತ ಅವಧಿಯಲ್ಲಿ ಮತ್ತಾವುದೇ ಗೋಲುಗಳು ದಾಖಲಾಗದೇ ಪಂದ್ಯಾಟ ಮುಕ್ತಾಯ ಕಂಡಿತು. ತೀವ್ರ ಕುತೂಹಲ ಮೂಡಿಸಿದ್ದ ಇತ್ತಂಡಗಳ ಸಂಯೋಜಿತ ಆಟಕ್ಕೆ ವೀಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು. ರಾಷ್ಟ್ರೀಯ ಹಾಕಿ ತೀರ್ಪುಗಾರರಾದ ಕರವಂಡ ಅಪ್ಪಣ್ಣ ಮತ್ತು ಅಪ್ಪಚೆಟ್ಟೋಳಂಡ ಅಯ್ಯಪ್ಪ ಅವರುಗಳು ತೀರ್ಪುಗಾರರಾಗಿ ಕರ್ತವ್ಯ ನಿರ್ವಹಿಸಿದರು.

ಈ ಪಂದ್ಯಾಟಕ್ಕೂ ಮುನ್ನ ಸಾಯಿ ಮಡಿಕೇರಿ ಮತ್ತು ಕೂರ್ಗ್ ಇಲವೆನ್ ಬಾಲಕಿಯರ ತಂಡದ ನಡುವೆ ಪ್ರದರ್ಶನ ಪಂದ್ಯ ಏರ್ಪಡಿಸಲಾಗಿತ್ತು. ಕೂರ್ಗ್ ಇಲವೆನ್ ತಂಡದ ವಿರುದ್ಧ ನಿಗದಿತ ಅವಧಿಯಲ್ಲಿ ಸತತ 2 ಗೋಲು ಬಾರಿಸುವ ಮೂಲಕ ಮುನ್ನಡೆ ಸಾಧಿಸಿತು. ಸಾಯಿ ಮಡಿಕೇರಿ ತಂಡಕ್ಕೆ 2 ಹಾಗೂ ಕೂರ್ಗ್ ಇಲವೆನ್ ತಂಡಕ್ಕೆ 1 ಪೆನಾಲ್ಟಿ ಕಾರ್ನರ್ ಅವಕಾಶ ದೊರೆತಿತ್ತಾದರೂ, ಗೋಲಾಗಿ ಪರಿವರ್ತನೆಯಾಗಲಿಲ್ಲ. ಪಂದ್ಯಾವಳಿಯು ಒಂದು ತಿಂಗಳ ಕಾಲ ನಡೆಯಲಿದೆ.

5 ಎಕರೆ ಪ್ರದೇಶದಲ್ಲಿ ಹಾಕಿ ಮೈದಾನ

ಮಡಿಕೇರಿ,ಮಾ.30– ಕೊಡಗು ಜಿಲ್ಲೆಯಲ್ಲಿ ಹಾಕಿ ಕ್ರೀಡೆಯ ಅಭಿವೃದ್ಧಿಗೆ ಕೊಡವ ಹಾಕಿ ಅಕಾಡೆಮಿ ಶ್ರಮಿಸುತ್ತಿದ್ದು ಅವರ ಕೋರಿಕೆಯಂತೆ ವಿರಾಜಪೇಟೆಯ ತೋರಾ ಗ್ರಾಮದಲ್ಲಿ 5 ಎಕರೆ ಪ್ರದೇಶವನ್ನು ಹಾಕಿ ಮೈದಾನಕ್ಕೆ ಮೀಸಲಿರಿಸಲು ಗುರುತಿಸಲಾಗಿದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಮತ್ತು ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅಭಯ ನೀಡಿದ್ದಾರೆ.

ನಾಪೋಕ್ಲುವಿನ ಕೆಪಿಎಸ್ ಶಾಲೆಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಕುಂಡ್ಯೋಳಂಡ ಹಾಕಿ ನಮ್ಮೆಯಲ್ಲಿ ಪಾಲ್ಗೊಂಡು ಕ್ರೀಡಾಕೂಟವನ್ನು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿ ಮಾತನಾಡಿದ ಶಾಸಕ ಪೊನ್ನಣ್ಣ, ಕೊಡವ ಹಾಕಿ ನಮ್ಮೆ ಇದೀಗ ವಿಶ್ವ ದಾಖಲೆ ಬರೆಯಲು ಹೊರಟಿರುವುದು ಖುಷಿಯ ಜೊತೆಯಲ್ಲಿ ಹೆಮ್ಮೆ ಮೂಡಿಸಿದೆ. ಹಾಕಿ ಕ್ರೀಡೆಯಲ್ಲಿ ಕೊಡವ ಜನಾಂಗದವರು ಇಂದಿಗೂ ಮುಂದುವರೆದಿದೆ. ನಮ್ಮ ಪದ್ಧತಿ ಪರಂಪರೆ ರಕ್ಷಣೆಯ ಜೊತೆಯಲ್ಲಿಯೇ ಹಾಕಿ ಕ್ರೀಡೆಗೆ ಪ್ರೇರಣೆ ನೀಡುವ ಕೆಲಸವಾಗಬೇಕು. ಕೊಡವ ಹಾಕಿ ನಮ್ಮೆಗೆ ಎಲ್ಲಾ ಕೊಡವ ಕುಟುಂಬಗಳ ಮತ್ತು ಕ್ರೀಡಾಭಿಮಾನಿಗಳ ಕೊಡುಗೆಯೂ ಇದೆ. ಸೂರ್ಯ ಚಂದ್ರ ಇರುವವರೆಗೂ ಕೊಡವ ಕೌಟುಂಬಿಕ ಹಾಕಿ ಕ್ರೀಡಾಕೂಟ ನಡೆಯುವಂತಾಗಬೇಕು ಎಂದು ಪೊನ್ನಣ್ಣ ಆಶಿಸಿದರು.

ಸರ್ಕಾರಕ್ಕೆ ಕಡತ ಸಲ್ಲಿಕೆ: ಕೊಡವ ಹಾಕಿ ಅಕಾಡೆಮಿ ಹಾಕಿ ಕ್ರೀಡಾಕೂಟ ನಡೆಸಲು ಶಾಶ್ವತ ಮೈದಾನದ ಬೇಡಿಕೆ ಮುಂದಿಟ್ಟಿದ್ದು ಅದರಂತೆ ವಿರಾಜಪೇಟೆ ತೋರಾ ಗ್ರಾಮದಲ್ಲಿ 5 ಎಕರೆ ಜಾಗವನ್ನು ಗುರುತಿಸಿ ಆ ಕಡತವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದೀಗ ನೀತಿ ಸಂಹಿತೆಯೂ ಜಾರಿಯಲ್ಲಿದ್ದು, ಲೋಕಸಭಾ ಚುನಾವಣೆ ಕಳೆದ ಬಳಿಕ ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಬೆಂಗಳೂರಿನಲ್ಲಿ ಖ್ಯಾತ ಬ್ಯಾಡ್ಮಿಂಟನ್ ಕ್ರೀಡಾಪಟು ರೋಹನ್ ಬೋಪಣ್ಣ ಅವರನ್ನು ಭೇಟಿಯಾಗಿ ಜಿಲ್ಲೆಯಲ್ಲಿ 'ಟೆನ್ನಿಸ್ ಅಕಾಡೆಮಿ' ಪ್ರಾರಂಭಿಸುವಂತೆ ಮನವಿ ಮಾಡಿದ್ದೇನೆ. ಅದಕ್ಕಾಗಿ ಜಾಗದ ಕೊರತೆ ಎದುರಾದಾಗ ತಾನೇ ಸ್ವಂತವಾಗಿ ಜಮೀನು ನೀಡುವುದಾಗಿ ಹೇಳಿದ್ದೇನೆ. ವಿರಾಜಪೇಟೆ 8 ಹೋಬಳಿಗಳನ್ನು ಹೊಂದಿದ್ದು, ಎಲ್ಲಾ ಮೈದಾನಗಳ ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಮೈದಾನಗಳ ಪುನಶ್ಚೇತನಕ್ಕೂ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಆ ಮೂಲಕ ಕ್ರೀಡೆಗೆ ಉತ್ತೇಜನ ನೀಡುವ ಕೆಲಸ ಮಾಡಲಾಗುತ್ತದೆ ಎಂದು ಹೇಳಿದರು.

ಪಿಕ್‌ಅಪ್ ಜೀಪ್ ಡಿಕ್ಕಿ ; ಬೈಕ್ ಸವಾರ ಚಿಕಿತ್ಸೆ ಫಲಿಸದೆ ಸಾವು



ಹಕೀಂ

ಮಡಿಕೇರಿ,ಮಾ.30– ನಾಪೋಕ್ಲು ಹಳೇ ತಾಲೂಕು ಮುಖ್ಯ ರಸ್ತೆಯಲ್ಲಿ ಪಿಕ್‌ಅಪ್ ಜೀಪ್ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಯುವಕನೋರ್ವ ಚಿಕಿತ್ಸೆ ಫಲಿಸದೆ ಶನಿವಾರ ಮೃತಪಟ್ಟಿದ್ದಾನೆ. ಅಯ್ಯಂಗೇರಿ ಗ್ರಾಮದ ನಿವಾಸಿ ಹಕೀಂ(23) ಎಂಬಾತನೇ ಮೃತಪಟ್ಟ ಯುವಕ.

ಮಾ.20ರಂದು ನಾಪೋಕ್ಲು ಹಳೇ ತಾಲೂಕು ಮುಖ್ಯರಸ್ತೆಯಲ್ಲಿ ದ್ವಿಚಕ್ರ ವಾಹನಕ್ಕೆ ಪಿಕ್‌ಅಪ್ ಜೀಪ್ ಡಿಕ್ಕಿ ಹೊಡೆದಿತ್ತು. ಅಪಘಾತದ ತೀವ್ರತೆಗೆ ದಿಚಕ್ರ ವಾಹನ ಸಂಪೂರ್ಣ ನಜ್ಜುಗುಜ್ಜಾಗಿತ್ತಲ್ಲದೇ, ಅಪಘಾತದಲ್ಲಿ ಅಯ್ಯಂಗೇರಿ ಗ್ರಾಮದ ಹಕೀಂ ಗಂಭೀರ ಗಾಯಗೊಂಡು ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಹಕೀಂ ಶನಿವಾರ ಮೃತಪಟ್ಟಿದ್ದಾನೆ. ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಪೋಕ್ಲು ಠಾಣೆಯಲ್ಲಿ ಪಿಕ್‌ಅಪ್ ವಾಹನ ಚಾಲಕ ಎಮ್ಮೆಮಾಡು ಕೂರುಳಿ ಗ್ರಾಮದ ಕಲೀಲ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಯುವಕ ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆಯೇ ಶನಿವಾರ ಬೆಳಗ್ಗೆ ನಾಪೋಕ್ಲು ಠಾಣೆಯ ಮುಂಭಾಗದಲ್ಲಿ ಜಮಾಯಿಸಿದ ಗ್ರಾಮಸ್ಥರು ಪಿಕ್‌ಅಪ್ ವಾಹನದ ಚಾಲಕನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಆಸ್ತಿ, ರಸ್ತೆ, ಮರಳು ಸಾಗಣೆ ವಿಚಾರವಾಗಿ ನಡೆದ ಜಗಳ

ಗುಂಡು ಹಾರಿಸಿ ತಮ್ಮನನ್ನು ಕೊಂದ ಅಣ್ಣ



ಎನ್. ಪ್ರಕಾಶ್

ಗೋಣಿಕೊಪ್ಪ, ಮಾ.30– ಅಣ್ಣನೇ ತಮ್ಮನನ್ನು ಗುಂಡಿಕ್ಕಿ ಕೊಂದಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಮಲ್ಲಂಡ ಎನ್. ಪ್ರಕಾಶ್(55) ಕೊಲೆಯಾದ ದುರ್ದೈವಿ. ಇವರ ಪುತ್ರ ಧ್ಯಾನ್ (20) ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿ ಸುಬ್ರಮಣಿ (59) ತಲೆಮರೆಸಿಕೊಂಡಿದ್ದಾನೆ. ಪೊನ್ನಂಪೇಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಶವವನ್ನು ಜಿಲ್ಲಾಸ್ಪತ್ರೆ ಶವಾಗಾರಕ್ಕೆ ಸಾಗಿಸಿದ್ದಾರೆ.

ಶನಿವಾರ ಬೆಳಗ್ಗೆ 11.15 ಸುಮಾರಿಗೆ ಸುಬ್ರಮಣಿ ಮನೆ ಎದುರು ಜಗಳ ಆರಂಭವಾಗಿದೆ. ಈ ವೇಳೆ ಸುಬ್ರಮಣಿ ಮನೆಯಿಂದ ಕೋವಿ ತಂದು ಗುಂಡು ಹೊಡೆದಿದ್ದಾನೆ. ಇದರಿಂದ ಪ್ರಕಾಶ್ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಪುತ್ರ ಧ್ಯಾನ್ ಎದೆಯ ಭಾಗಕ್ಕೆ ಗುಂಡು ತಾಗಿದೆ. ನಂತರ ಸುಬ್ರಮಣಿ ಅವರ ಪುತ್ರ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿ ಮಾನವೀಯತೆ ಮೆರೆದಿದ್ದಾರೆ. ಸಹೋದರರ ನಡುವೆ ಆಗಿಂದಾಗ್ಗೆ ಆಸ್ತಿ, ರಸ್ತೆ ಮತ್ತು ಮರಳು ಸಾಗಿಸುವ ವಿಚಾರದಲ್ಲಿ ಅದರಲ್ಲೂ ಮರಳು ಸಾಗಿಸುವ ವಿಚಾರಕ್ಕೆ ಜೋರಾಗಿಯೇ ಜಗಳವಾಗುತ್ತಿತ್ತು ಎನ್ನಲಾಗಿದೆ. ಇಂದು ಕೂಡ ಹೆಚ್ಚು ಜಗಳವಾಗುತ್ತಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ಇದೀಗ ಕೊಲೆಯಲ್ಲಿ ಅಂತ್ಯವಾಗಿದೆ.

ಕಾಂಗ್ರೆಸ್ ಪಕ್ಷದ ಮುಖಂಡರಾಗಿರುವ ಮೃತರು, ಅರ್ವತೊಕ್ಲು ಗ್ರಾಪಂ ಮಾಜಿ ಅಧ್ಯಕ್ಷರಾಗಿ, ಗೋಣಿಕೊಪ್ಪ ಆಟೋ ಮಾಲೀಕರ ಚಾಲಕರ ಸಂಘ, ವಾಹನ ಮಾಲೀಕರ ಹಾಗೂ ಚಾಲಕರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಗೋಣಿಕೊಪ್ಪ ಪ್ರಗತಿ ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷರಾಗಿ ಸೇವೆ ನೀಡುತ್ತಿದ್ದರು.

ಇಂದು ಜನರಲ್ ತಿಮ್ಮಯ್ಯ ಜನ್ಮ ದಿನಾಚರಣೆ

ಮಡಿಕೇರಿ, ಮಾ.30– ಜಿಲ್ಲಾಡಳಿತವತಿಯಿಂದ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ 118ನೇ ಜನ್ಮ ದಿನಾಚರಣೆಯು ಮಾ.31 ರಂದು ಬೆಳಗ್ಗೆ 10.30 ಗಂಟೆಗೆ ಜನರಲ್ ತಿಮ್ಮಯ್ಯ ಸ್ಮಾರಕ ಭವನ (ಸನ್ನಿಸೈಡ್)ದಲ್ಲಿ ನಡೆಯಲಿದೆ. ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಜಿ.ಪಂ ಸಿಇಓ ವರ್ಣಿತ್ ನೇಗಿ ಇತರರು ಪಾಲ್ಗೊಳ್ಳಲಿದ್ದಾರೆ.

ಚೆಕ್‌ಪೋಸ್ಟ್‌ಗಳಿಗೆ ಡಿಸಿ ಶಿಲ್ಪನಾಗ್ ಭೇಟಿ, ಪರಿಶೀಲನೆ



ಚೆಕ್‌ಪೋಸ್ಟ್‌ವೊಂದಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಚಾಮರಾಜನಗರ, ಮಾ.30– ಸಾರ್ವತ್ರಿಕ ಲೋಕಸಭಾ ಚುನಾವಣೆ–2024ರ ಸಂಬಂಧ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳಾದ ಶಿಲ್ಪನಾಗ್ ಶುಕ್ರವಾರ (ಮಾ.29 ರಂದು) ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಹಾಯಕ ಚುನಾವಣಾಧಿಕಾರಿ ಕಚೇರಿ ಹಾಗೂ ವಿವಿಧ ಚೆಕ್‌ಪೋಸ್ಟ್‌ಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಗುಂಡ್ಲುಪೇಟೆಯ ಸಹಾಯಕ ಚುನಾವಣಾಧಿಕಾರಿ ಕಚೇರಿಗೆ ಭೇಟಿ ನೀಡಿದ ಅವರು, ಅಲ್ಲಿನ ದಿನನಿತ್ಯದ ಕಾರ್ಯ ಚಟುವಟಿಕೆಗಳು ಹಾಗೂ ವ್ಯವಸ್ಥೆಗಳನ್ನು ವೀಕ್ಷಿಸಿದರು. ಸಹಾಯಕ ಚುನಾವಣಾಧಿಕಾರಿ ಕಚೇರಿಯಲ್ಲಿ ತೆರೆಯಲಾಗಿರುವ ಕಂಟ್ರೋಲ್ ರೂಂನಲ್ಲಿ ಸ್ವೀಕೃತವಾಗುತ್ತಿರುವ ಕರೆಗಳು, ವಹಿಗಳನ್ನು ಪರಿಶೀಲಿಸಿದರು.

ಸಮಯಕ್ಕೆ ಸರಿಯಾಗಿ ಕಚೇರಿ ಸಿಬ್ಬಂದಿ ಮತ್ತು ಚುನಾವಣಾ ಕೆಲಸದಲ್ಲಿ ಕಾರ್ಯ ನಿರತರಾಗಿರುವ ಅಧಿಕಾರಿಗಳ ಹಾಜರಾತಿ, ಸಭಾ ನಡಾವಳಿಗಳ ವಿವರಗಳನ್ನು ತಪಾಸಣೆ ನಡೆಸಿ ಅಲ್ಲಿನ ಅಧಿಕಾರಿಗಳಿಗೆ ಚುನಾವಣಾ ಕಾರ್ಯ ನಿರ್ವಹಿಸುವಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶವಾಗದಂತೆ ಅಗತ್ಯ ಸೂಚನೆಗಳನ್ನು ನೀಡಿದರು.


ಇದೇ ವೇಳೆ ಗುಂಡ್ಲುಪೇಟೆ ಆರ್‌ಟಿಓ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿದ ಶಿಲ್ಪನಾಗ್ ಅವರು, ಚೆಕ್‌ಪೋಸ್ಟ್‌ನಲ್ಲಿ ಬರುವ ಹಾಗೂ ಹೋಗುವ ವಾಹನಗಳನ್ನು ಅಧಿಕಾರಿಗಳು ಖುದ್ದಾಗಿ ಪರಿಶೀಲಿಸಬೇಕು. ಈ ಸಂಬಂಧ ವಹಿಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಬಳಿಕ ಮದ್ದೂರು ಚೆಕ್‌ಪೋಸ್ಟ್‌ಗೆ ಭೇಟಿ ನೀಡಿದ ಅವರು, ಚೆಕ್‌ಪೋಸ್ಟ್‌ಗಳಲ್ಲಿ ವಾಹನ ತಪಾಸಣೆ ಮಾಡುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆಯಾದಂತೆ ಎಚ್ಚರ ವಹಿಸಬೇಕು. ಯಾವುದೇ ಬಗೆಯ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಕ್ರಮ ವಹಿಸುವಂತೆ ಅಲ್ಲಿನ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ ಗೀತಾ ಹುಡೇದ ಅವರು ಈ ಸಂದರ್ಭದಲ್ಲಿ ಇದ್ದರು.

ಚಾಮರಾಜನಗರದಲ್ಲಿ ಶನಿವಾರ ಮೂವರು ಅಭ್ಯರ್ಥಿಗಳಿಂದ ನಾಲ್ಕು ನಾಮಪತ್ರ ಸಲ್ಲಿಕೆ

ಚಾಮರಾಜನಗರ: ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ನಾಮಪತ್ರ ಸಲ್ಲಿಸಲು ಎರಡನೇ ದಿನವಾದ ಇಂದು ಮೂವರು ಅಭ್ಯರ್ಥಿಗಳಿಂದ 4 ನಾಮಪತ್ರಗಳು ಸಲ್ಲಿಕೆಯಾಗಿವೆ. ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿಯಾಗಿ ಸುಮ.ಎಸ್. ಅವರು ಎರಡು ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಪ್ರದೀಪ್‌ಕುಮಾರ್.ಎಂ ಹಾಗೂ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿಯಾಗಿ ಮಹೇಶ.ಎಂ ಅವರು ತಲಾ ಒಂದು ನಾಮಪತ್ರ ಸಲ್ಲಿಸಿದ್ದಾರೆ. ಒಟ್ಟಾರೆ ಇದುವರೆಗೆ ನಾಲ್ಕು ಅಭ್ಯರ್ಥಿಗಳಿಂದ ಐದು ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಗೀತಾ ಹುಡೇದ ಉಪಸ್ಥಿತರಿದ್ದರು.

ಬಿಆರ್‌ಟಿ ಅರಣ್ಯಕ್ಕೆ ಕಿಡಿಗೇಡಿಗಳಿಂದ ಬೆಂಕಿ
ಅಪಾರ ಪ್ರಮಾಣದ ವನ್ಯ ಸಂಪತ್ತು ಭಸ್ಮ



ಬಿಆರ್‌ಟಿ ಹುಲಿ ರಕ್ಷಿತಾರಣ್ಯ ಬೈಲೂರು ವನ್ಯಜೀವಿ ವಲಯದ ಮಾವತ್ತೂರು ಮತ್ತು ದೊಡ್ಡ ಸಂಪಿಗೆ ಮೀಸಲು ಅರಣ್ಯ ಪ್ರದೇಶದಲ್ಲಿ ಬೆಳಗ್ಗೆ ಬೆಂಕಿ ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಸಂಜೆ ವೇಳೆಗೆ ಬೆಂಕಿ ನಂದಿಸಿದ್ದಾರೆ.

ಚಾಮರಾಜನಗರ, ಮಾ.30– ಜಿಲ್ಲೆಯ ಹನೂರು ತಾಲೂಕಿನ ವ್ಯಾಪ್ತಿಯ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ರಕ್ಷಿತಾರಣ್ಯ ಬೈಲೂರು ವನ್ಯಜೀವಿ ವಲಯದ ಮಾವತ್ತೂರು ಮತ್ತು ದೊಡ್ಡ ಸಂಪಿಗೆ ಮೀಸಲು ಅರಣ್ಯ ಪ್ರದೇಶದಲ್ಲಿ ಶನಿವಾರ ಬೆಳಗ್ಗೆ 9.30ರ ವೇಳೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸಪಟ್ಟು ಸಂಜೆ ವೇಳೆಗೆ ಬೆಂಕಿ ನಂದಿಸಿದ್ದಾರೆ.

ಕಿಡಿಗೇಡಿಗಳು ಬೆಂಕಿ ಹಾಕಿದ್ದಾರೆ ಎಂದು ಬಿಆರ್‌ಟಿ ಡಿಸಿಎಫ್ ದೀಪ್ ಜೆಕಾಂಟ್ರಾಕ್ಟರ್ ಮಾಹಿತಿ ನೀಡಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಅಧಿಕಾರಿಗಳು ಹಾಗೂ ಸಿಬ್ಬಂದಿ ಬೆಂಕಿ ನಂದಿಸಲು ಕಾರ್ಯಾಚರಣೆ ಆರಂಭಿಸಿದರು. ಬೈಲೂರು ವನ್ಯಜೀವಿ ವಲಯದ ಕೌಳಿಹಳ್ಳ ಅಣೆಕಟ್ಟಿನ ಬಳಿಯ ರೇಖೆಗೆ ಬೆಂಕಿ ಹಾಕಲಾಗಿದೆ. ಡ್ರೋನ್ ತಂಡದೊಂದಿಗೆ 60 ಸಿಬ್ಬಂದಿ ಮತ್ತು ಅಧಿಕಾರಿಗಳು ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ತೊಡಗಿದರು. ಈ ಅರಣ್ಯ ಪ್ರದೇಶವು ಕಡಿದಾಗಿದ್ದು, ಇಳಿಜಾರಾಗಿದೆ. ಅಲ್ಲದೇ ಇದು ನೆಲ ಬೆಂಕಿಯಾಗಿದ್ದು, ಬೆಂಕಿ ನಂದಿಸಿದ ಬಳಿಕ ಅರಣ್ಯ ನಷ್ಟದ ಬಗ್ಗೆ ನಿಖರ ಮಾಹಿತಿ ತಿಳಿಯಲಿದೆ ಎಂದು ಡಿಸಿಎಫ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೆ ಬರಗಾಲ ಆವರಿಸಿದೆ. ಹೀಗಾಗಿ, ಬಿಸಿಲಿನ ತಾಪಕ್ಕೆ ಅರಣ್ಯ ಪ್ರದೇಶದಲ್ಲಿ ಗಿಡಗಂಟಿಗಳು ಸಂಪೂರ್ಣವಾಗಿ ಒಣಗಿದ್ದು, ಬೆಂಕಿ ಕಾಣಿಸಿಕೊಂಡ ಕೂಡಲೇ ದಿಢೀರನೇ ಬೆಂಕಿ ವ್ಯಾಪಿಸುತ್ತಿದ್ದು, ಬೆಂಕಿ ನಂದಿಸಲು ಅರಣ್ಯ ಇಲಾಖೆಗೆ ಸವಾಲಿನ ಕೆಲಸವಾಗಿತ್ತು.

ಕೆನರಾ ಬ್ಯಾಂಕ್ ಮದ್ದೂರು ಶಾಖೆ ಮಾಂಬಳ್ಳಿಗೆ ವಿಲೀನ ಖಂಡಿಸಿ ಪ್ರತಿಭಟನೆ



ಯಳಂದೂರು: ತಾಲೂಕಿನ ಮದ್ದೂರು ಗ್ರಾಮದಲ್ಲಿ ಕಳೆದ 12 ವರ್ಷಗಳಿಂದಲೂ ಕಾರ್ಯ ನಿರ್ವಹಿಸುತ್ತಿದ್ದ ಕೆನರಾ ಬ್ಯಾಂಕ್ ಶಾಖೆಯನ್ನು ಮಾಂಬಳ್ಳಿ ಗ್ರಾಮದಲ್ಲಿರುವ ಕೆನರಾ ಬ್ಯಾಂಕ್‌ಗೆ ವಿಲೀನಗೊಳಿಸುತ್ತಿರುವ ಕ್ರಮವನ್ನು ಖಂಡಿಸಿ ಗ್ರಾಮಸ್ಥರು ಶನಿವಾರ ಬ್ಯಾಂಕಿನ ಮುಂದೆ ಪ್ರತಿಭಟನೆ ನಡೆಸಿದರು.

ಈ ಬ್ಯಾಂಕ್ ಕಳೆದ 12 ವರ್ಷಗಳ ಹಿಂದೆ ನಮ್ಮ ಗ್ರಾಮದಲ್ಲಿ ಶಾಖೆಯನ್ನು ತೆರೆದಿತ್ತು. ಈ ಗ್ರಾಮವೂ ಸೇರಿದಂತೆ ಇದರ ಸುತ್ತಮುತ್ತಲಿನ ಆಲ್ಕೆರೆ ಅಗ್ರಹಾರ, ಬೂದಿತಿಟ್ಟು, ಯರಿಯೂರು ಸೇರಿದಂತೆ ಅನೇಕ ಗ್ರಾಮಗಳ ಜನರಿಗೆ ಇದರಿಂದ ಅನುಕೂಲವಾಗುತ್ತಿತ್ತು. ಇಲ್ಲಿ 2000ಕ್ಕೂ ಅಧಿಕ ಜನರು ಖಾತೆಗಳನ್ನು ತೆರೆದಿದ್ದರು. ಸಾಮಾಜಿಕ ಪಿಂಚಣಿ ಯೋಜನೆಗಳ ಲಾಭವನ್ನು ಅನೇಕರು ಪಡೆದುಕೊಳ್ಳುತ್ತಿದ್ದರು. ವಯಸ್ಸಾದವರು, ವಿಕಲಚೇತನರಿಗೆ ಇದರಿಂದ ಹೆಚ್ಚಿನ ಅನುಕೂಲವಾಗುತ್ತಿತ್ತು. ಆದರೆ ಈಗ ಏಕಾಏಕಿ ಬ್ಯಾಂಕಿನ ಶಾಖೆಯನ್ನು ಮಾಂಬಳ್ಳಿ ಗ್ರಾಮಕ್ಕೆ ವಿಲೀನಗೊಳಿಸುವ ಪ್ರಕ್ರಿಯೆಯನ್ನು ಬ್ಯಾಂಕಿನ ಅಧಿಕಾರಿಗಳು ನಡೆಸುತ್ತಿದ್ದಾರೆ. ಈ ಗ್ರಾಮದಿಂದ ಹಲವು ಕಿಮೀ ದೂರದಲ್ಲಿರುವ ಮಾಂಬಳ್ಳಿ ಗ್ರಾಮಕ್ಕೆ ತೆರಳಲು ಕಷ್ಟವಾಗುತ್ತದೆ ಹಾಗಾಗಿ ಇದನ್ನು ಇಲ್ಲೇ ಉಳಿಸಿಕೊಳ್ಳಬೇಕು ಎಂದು ಪ್ರತಿಭಟಿಸಿದರು.

ಬ್ಯಾಂಕಿನ ವ್ಯವಸ್ಥಾಪಕ ಪ್ರದ್ಯುಮ್ನ ಗ್ರಾಮಸ್ಥರ ಮನವಿಯನ್ನು ಸ್ವೀಕರಿಸಿ ಮಾತನಾಡಿ, ಬ್ಯಾಂಕಿನ ನಿಯಮಗಳಿಗೆ ಅನುಸಾರವಾಗಿ ಪ್ರತಿ 3 ಕಿಮೀಗೆ ಒಂದರಂತೆ ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕ್ ಇರಬೇಕೆಂಬ ನಿಯಮವಿದೆ. ಆದರೆ ಈಗಾಗಲೇ ಯರಿಯೂರು ಗ್ರಾಮದಲ್ಲಿ ಬ್ಯಾಂಕ್ ಇರುವುದರಿಂದ ಇದನ್ನು ಮಾಂಬಳ್ಳಿಗೆ ಬ್ಯಾಂಕ್ ವಿಲೀನಗೊಳಿಸಬೇಕೆಂದು ನಮ್ಮ ಉನ್ನತ ಮಟ್ಟದ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಆದರೆ ಈಗ ಗ್ರಾಮಸ್ಥರು ಇದು ವಿಲೀನ ಮಾಡುವುದು ಬೇಡ ಎಂದು ಮನವಿ ಮಾಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳ ಗಮನಕ್ಕೆ ಈ ವಿಷಯವನ್ನು ತಂದು ಸೂಕ್ತ ಕ್ರಮ ವಹಿಸುವಂತೆ ಮನವಿ ಮಾಡಲಾಗುವುದು ಎಂದರು.

ಮದ್ದೂರು ವಿರೂಪಾಕ್ಷ, ಶ್ರೀಕಂಠ, ಬೂದಿತಿಟ್ಟು ಜಗದೀಶ್, ಮಲ್ಲಿಗೆಹಳ್ಳಿ ಸುರೇಶ್, ಮಹಾದೇವ್, ಯೋಗೇಶ್, ನಟರಾಜು ಸೇರಿದಂತೆ ಅನೇಕ ಗ್ರಾಮಸ್ಥರು ಹಾಜರಿದ್ದರು.

ಮತದಾನ ಪ್ರಮಾಣ ಹೆಚ್ಚಿಸಲು ಚಾ.ನಗರ ಜಿಲ್ಲೆಯಲ್ಲಿ ವಿಶೇಷ ಮತಗಟ್ಟೆಗಳ ಸ್ಥಾಪನೆ



ಮತದಾನದ ಪ್ರಮಾಣವನ್ನು ಹೆಚ್ಚಿಸಲು ವಿಶೇಷ ಮತಗಟ್ಟೆಗಳನ್ನು ರಚಿಸುವ ಸಂಬಂಧ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಜಿಲ್ಲಾ ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿ ಪಿ.ಲಕ್ಷ್ಮೀ ಪೂರ್ವಭಾವಿ ಸಭೆ ನಡೆಸಿದರು.

ಚಾಮರಾಜನಗರ, ಮಾ.30– ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿ ಪಿ.ಲಕ್ಷ್ಮೀ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿಂದು ವಿಶೇಷ ಮತಗಟ್ಟೆಗಳನ್ನು ರಚಿಸುವ ಸಂಬಂಧ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರನ್ನು ಮತಗಟ್ಟೆಯತ್ತ ಸೆಳೆದು ಹೆಚ್ಚಿನ ಸಂಖ್ಯೆಯ ಮತ ಚಲಾವಣೆಯಾಗುವಂತೆ ನೋಡಿಕೊಳ್ಳುವ ಸಲುವಾಗಿ ನಡೆಸಲಾಗುತ್ತಿರುವ ಜಾಗೃತಿ ಕಾರ್ಯಕ್ರಮಗಳಿಗೆ ನಾಗರಿಕರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ. ಮತದಾನ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿಸಲು ಈ ಬಾರಿ ಚಾಮರಾಜನಗರ ಜಿಲ್ಲೆಯಲ್ಲಿ 46 ಮತಗಟ್ಟೆಗಳನ್ನು ವಿಶೇಷ ಮತಗಟ್ಟೆಗಳಾಗಿ ಪರಿಗಣಿಸಲಾಗಿದೆ ಎಂದರು.

ಹೆಚ್ಚಿನ ಸಂಖ್ಯೆಯ ಮಹಿಳಾ ಮತದಾರರಿರುವ ಭಾಗದಲ್ಲಿ ಮಹಿಳೆಯರ ವಿಶೇಷತೆ ಪ್ರತಿಬಿಂಬಿಸುವ ವಿವಿಧ ಬಣ್ಣಗಳ ಚಿತ್ತಾರದಿಂದ ಕೂಡಿದ 'ಸಖಿ ಸೌರಭ' ಮತಗಟ್ಟೆಗಳು, ಯುವ ಮತದಾರರನ್ನು ಮತದಾನಕ್ಕೆ ಪ್ರೇರೇಪಿಸುವ ಸಲುವಾಗಿ ಜಿಲ್ಲೆಯ ಯುವ ರಾಯಭಾರಿಗಳ ಭಾವಚಿತ್ರಗಳನ್ನುಳ್ಳ 'ಯುವ ಸೌರಭ' ಮತಗಟ್ಟೆಗಳನ್ನಾಗಿ ರಚಿಸಲಾಗುತ್ತಿದೆ. ದೇಶದ ಬೆನ್ನೆಲುಬಾಗಿರುವ ರೈತರಿಗೆ ಗೌರವಿಸುವ ಸಲುವಾಗಿ ಸಿರಿಧಾನ್ಯಗಳನ್ನೊಳಗೊಂಡಂತೆ ವಿವಿಧ ಹೂ ಗಿಡಗಳನ್ನು ಬೆಳೆಸಿ ಅನ್ನದಾತ ಮತಗಟ್ಟೆಗಳನ್ನು ತೆರೆಯಲಾಗುತ್ತಿದೆ ಎಂದರು.

ಜಿಲ್ಲೆಯು ಹೆಚ್ಚಿನ ಅರಣ್ಯ ಪ್ರದೇಶ ಹೊಂದಿರುವುದರಿಂದ ಹಸಿರು ಮತಗಟ್ಟೆ, ಬುಡಕಟ್ಟು ಜನರು ಹೆಚ್ಚಾಗಿ ವಾಸಿಸುವ ಮತಗಟ್ಟೆಗಳನ್ನು, ಸಂಕಲ್ಪ ಮತಗಟ್ಟೆಗಳು, ಜಿಲ್ಲೆಯ ಜಾನಪದ ಕಲಾ ಪರಂಪರೆಯನ್ನು ಬಿಂಬಿಸುವಂತಹ ಸಾಂಸ್ಕೃತಿಕ ಮತಗಟ್ಟೆ ಹಾಗೂ ವಿಶೇಷಚೇತನರಿಗಾಗಿ ಮತದಾನಕ್ಕೆ ಸೆಳೆಯಲು ಹೊಂಬೆಳಕು ಮತಗಟ್ಟೆಗಳನ್ನು ತೆರೆಯಲಾಗುವುದು. ವಿಶೇಷ ಮತಗಟ್ಟೆಗಳ ರಚನೆ ಅರ್ಥಪೂರ್ಣವಾಗಿರುವಂತೆ ಗಮನಹರಿಸಬೇಕಾಗಿದೆ ಎಂದರು.

ವಿಶೇಷ ಮತಗಟ್ಟೆಗಳಲ್ಲಿ ಮತದಾರರಿಗೆ ಅನುಕೂಲವಾಗುವಂತೆ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ಶೌಚಾಲಯ, ಇನ್ನಿತರೆ ಮೂಲಸೌಕರ್ಯಗಳನ್ನು ವ್ಯವಸ್ಥೆ ಮಾಡಬೇಕು. ವಿಶೇಷ ಮತಗಟ್ಟೆಗಳ ರಚನೆಗಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ವರ್ಚುಯಲ್ ಮೂಲಕ ಹಾಜರಿದ್ದ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದರು.

ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಎ.ಬಿ.ಸಂಜಯ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ್ ಪ್ರಸನ್ನ, ಇತರೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಗೌಜಲಕ್ಕಿ ಅಕ್ರಮ ಸಾಗಣೆ
ಕೊಳ್ಳೇಗಾಲದಲ್ಲಿ ಆರೋಪಿ ಬಂಧನ

ಕೊಳ್ಳೇಗಾಲ,ಮಾ.30– ಜೀವಂತ ಗೌಜಲಕ್ಕಿಗಳನ್ನು ಅಕ್ರಮವಾಗಿ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಬಂಧಿಸಿ, 6 ಗೌಜಲಕ್ಕಿಗಳನ್ನು ಸಿಐಡಿ ಅರಣ್ಯ ಸಂಚಾರಿದಳದ ಪೊಲೀಸರು ವಶಪಡಿಸಿಕೊಡಿದ್ದಾರೆ.



ಟಿ.ನರಸೀಪುರ ತಾಲೂಕಿನ ಮೇದನಿ ಗ್ರಾಮದ ಶಿವಣ್ಣ(41) ಬಂಧಿತ ಆರೋಪಿಯಾಗಿದ್ದು, ಈತ ತಾಲೂಕಿನ ಸರಗೂರು ಗ್ರಾಮದ ಕಾವೇರಿ ನದಿಯ ಸಮೀಪದಲ್ಲಿ ಅಕ್ರಮವಾಗಿ ಜೀವಂತ ಗೌಜಲ ಹಕ್ಕಿಗಳನ್ನು ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿರುವಾಗ ಖಚಿತ ಮಾಹಿತಿ ಮೇರೆಗೆ ಇಲ್ಲಿನ ಅರಣ್ಯ ಸಂಚಾರಿ ದಳದ ಪಿಎಸ್‌ಐ ವಿಜಯರಾಜ್, ಮುಖ್ಯ ಪೇದೆಗಳಾದ ರಾಮಚಂದ್ರ, ಬಸವರಾಜು, ಶಂಕರ, ಸ್ವಾಮಿ, ಲತಾ, ಪೇದೆ ಬಸವರಾಜು, ಚಾಲಕ ಪ್ರಭಾಕರ್ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, ಹಕ್ಕಿಗಳನ್ನು ವಶಪಡಿಸಿಕೊಂಡು ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದಾರೆ.

ಒಂದನೇ ಪುಟದಿಂದ

ಏ.3ಕ್ಕೆ ಮಂಡ್ಯದಲ್ಲೇ ನನ್ನ ನಿರ್ಧಾರ

ಅಭ್ಯರ್ಥಿಯಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರ ನಿಲ್ಲುವಂತೆ ಸೂಚಿ ಸಿದರು. ಮತ್ತೆ ಕೆಲವರು ನಿಮ್ಮ ನಿರ್ಧಾರ ನ್ಯಾಯಯುತವಾಗಿರಲಿ. ನೀವು ತೆಗೆದ ುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿದ್ದೇವೆ. ಕಳೆದ ಚುನಾವಣೆಯಲ್ಲೂ ನಿಮ್ಮ ಜೊತೆಗಿದ್ದೆವು, ಈಗಲೂ ನಿಮ್ಮ ಜೊತೆ ಇರುತ್ತೇವೆ ಎಂದರು. ನಂತರ ಮಾತನಾ ಡಿದ ಸುಮಲತಾ, ರಾಜಕಾರಣ ಇಂದು ಇರುತ್ತದೆ–ಹೋಗುತ್ತದೆ. ಆದರೆ ಮಂಡ್ಯದ ಮಣ್ಣಿನ ಋಣ ಯಾವತ್ತೂ ನನ್ನ ಜೊತೆ ಗಿರುತ್ತದೆ. ನಾನು ನಿಮ್ಮನ್ನು ನೋಯಿ ಸುವ ಯಾವುದೇ ನಿರ್ಧಾರವನ್ನು ತೆಗೆದು ಕೊಳ್ಳುವುದಿಲ್ಲ. ಅಂಬರೀಶ್ ಅವರ ಮೇಲೆ ಇಟ್ಟಿದ್ದಂತಹ ಅಭಿಮಾನದಿಂದ ನನಗೆ ನೀವು ಐದು ವರ್ಷಗಳ ಕಾಲ ರಾಜಕೀಯ ಶಕ್ತಿ ತುಂಬಿದ್ದೀರಿ. ಕಳೆದ ಮೂವತ್ತು ವರ್ಷಗಳಿಂದ ಅಂಬರೀಶ್ ಅವರ ಜೊತೆ ಇದ್ದವರು ಈಗ ನನ್ನ ಜೊತೆ ಇದ್ದಾರೆ. ನನಗೆ ಧೈರ್ಯ ತುಂಬಿದ್ದಾರೆ. ಇದೇ ನನ್ನ ಶಕ್ತಿ. ಇದೇ ನನಗೆ ಆಶೀರ್ವಾದ. ಅಂದು ನನ್ನ ಜೊತೆ ಯಾವುದೇ ದೊಡ್ಡ–ದೊಡ್ಡ ಲೀಡರ್‌ಗಳು ಇರಲಿಲ್ಲ. ಮಂಡ್ಯ ಜನ ಅದ್ಯಾವುದನ್ನೂ ಲೆಕ್ಕಿಸದೇ ನನಗೆ ರಾಜ ಕೀಯ ಶಕ್ತಿ ತುಂಬಿದ್ದೀರಿ. ನನಗೆ ಕೆಲವು ಸಂದರ್ಭಗಳಲ್ಲಿ ನೋವಾ ಗಿರಬಹುದು, ಕಷ್ಟವಾಗಿರಬಹುದು. ನಾನು ಕಣ್ಣೀರು ಹಾಕಿದ್ದೂ ಉಂಟು. ಆದರೆ ನಿಮ್ಮ ಪ್ರೀತಿ ಮುಂದೆ ಅದ್ಯಾವುದೂ ನನಗೆ ದೊಡ್ಡ ದಾಗಿ ಕಾಣಲಿಲ್ಲ ಎಂದರು. ನನಗಾಗಿ, ನನ್ನ ಮಗನ ರಾಜಕೀಯ ಭವಿಷ್ಯಕ್ಕಾಗಿ ಯೋಚಿಸಿದ್ದರೆ ನನ್ನ ನಡೆ ಬೇರೆಯೇ ಆಗಿರುತ್ತಿತ್ತು. ಆದರೆ ನನಗೆ ಮಂಡ್ಯ ಜನತೆಯ ಪ್ರೀತಿ, ಅಭಿಮಾನವೇ ಮುಖ್ಯ. ಹೀಗಾಗಿ ಮಂಡ್ಯ ಬಿಟ್ಟು ಬೇರೆಲ್ಲೂ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದೇನೆ ಎಂದರು. ಒಬ್ಬ ಸಂಸದೆಯಾಗಿ ಯಾವ ರೀತಿ ನಡೆದುಕೊಳ್ಳಬೇಕಿತ್ತೋ ಆ ರೀತಿ ನಡೆದುಕೊಂಡು ಮಂಡ್ಯ ಜಿಲ್ಲೆಯ ಘನತೆಯನ್ನು ಎತ್ತಿ ಹಿಡಿದಿದ್ದೇನೆ. ಮಂಡ್ಯ ಜಿಲ್ಲೆ ಬಿಟ್ಟು ಸುಲಭವಾಗಿ ಗೆಲ್ಲಬಹುದಾದ ಬೇರೆ ಕಡೆ ಸ್ಪರ್ಧಿಸಿ ಎಂದರೆ ಯಾರಾದರೂ ಬಿಡುತ್ತಾರೆಯೇ ಹೇಳಿ. ಆದರೆ ನಾನು ಮಂಡ್ಯ ಬಿಟ್ಟು ಬೇರೆ ಕಡೆ ರಾಜಕಾರಣ ಮಾಡಲ್ಲ ಎಂದು ಈ ಹಿಂದೆಯೂ ಹೇಳಿದ್ದೆ. ಈಗಲೂ ಅದನ್ನೇ ಹೇಳುತ್ತಿದ್ದೇನೆ. ಮಂಡ್ಯದಲ್ಲಿ ಇದ್ದರೆ ಅಂಬರೀಶ್ ಜೊತೆ ಇದ್ದ ಹಾಗೆ. ಇದರಲ್ಲಿ ನನ್ನ ಸ್ವಾರ್ಥ ಏನೂ ಇಲ್ಲ ಎಂದು ತಮ್ಮ ಮಾತಿನುದ್ದಕ್ಕೂ ಮಂಡ್ಯದ ಮೇಲಿನ ಅಭಿಮಾನವನ್ನು ತೆರೆದಿಟ್ಟರು. ನಾನು ನಿರ್ಧಾರ ತೆಗೆದುಕೊಳ್ಳಲು ನನಗೂ ಎರಡು ದಿನ ಕಾಲಾವಕಾಶ ನೀಡಿ. ನನ್ನನ್ನು ಕೈಹಿಡಿದ ಲಕ್ಷಾಂತರ ಜನರು ಮಂಡ್ಯದಲ್ಲಿ ಇದ್ದಾರೆ. ಅವರ ಜೊತೆ ಮತ್ತು ಮುಖಂಡರ ಜೊತೆ ಚರ್ಚಿಸಿ ನನ್ನ ನಿರ್ಧಾರ ಪ್ರಕಟಿಸುತ್ತೇನೆ. ಏ. 3ರಂದು ಮಂಡ್ಯದಲ್ಲೇ ಸಭೆ ನಡೆಸಿ ನಿಮ್ಮ ಸಮ್ಮುಖದಲ್ಲೇ ನನ್ನ ನಿರ್ಧಾರ ಪ್ರಕಟಿಸುತ್ತೇನೆ ಎಂದು ಹೇಳಿದರು. ಈ ವೇಳೆ ಭಾವುಕರಾದ ಸುಮಲತಾ ಅವರ ಕಣ್ಣಂಚಿನಲ್ಲಿ ನೀರಾಡಿತು.

ಮಂಡ್ಯ ಜನತೆ ಹಿತದೃಷ್ಟಿಯಿಂದ ನನ್ನ ನಿರ್ಧಾರ

ತೆಗೆದುಕೊಳ್ಳುವ ನಿರ್ಧಾರವಲ್ಲ. ನನ್ನ ಹಾಗೂ ಮಗನ ರಾಜಕೀಯ ಭವಿಷ್ಯದ ಬಗ್ಗೆ ನಾನು ಚಿಂತಿಸುವುದಿಲ್ಲ. ಹೀಗಾಗಿ ಏ.3ರಂದು ಮಂಡ್ಯದಲ್ಲಿ ಸಭೆ ನಡೆಸಿ, ಅಭಿಮಾನಿಗಳು ಹಾಗೂ ಹಿತೈಷಿಗಳ ಸಮ್ಮುಖದಲ್ಲಿ ನನ್ನ ನಿರ್ಧಾರವನ್ನು ಪ್ರಕಟಿಸುತ್ತೇನೆ ಎಂದರು. ಕಳೆದ ಚುನಾವಣೆಯಲ್ಲಿ ಇದ್ದಂತಹ ಪರಿಸ್ಥಿತಿಯೇ ಈಗಲೂ ಮರುಕಳಿಸಿದೆ. ಆಗ ಕಾಂಗ್ರೆಸ್–ಜೆಡಿಎಸ್ ಮೈತ್ರಿಯಿಂದಾಗಿ ಮಂಡ್ಯದಲ್ಲಿ ನನಗೆ ಟಿಕೆಟ್ ಕೊಡಲಾಗುವುದಿಲ್ಲ ಎಂದು ಕಾಂಗ್ರೆಸ್ ಹೇಳಿತ್ತು. ಈಗ ಬಿಜೆಪಿ–ಜೆಡಿಎಸ್ ಮೈತ್ರಿಯಿಂದಾಗಿ ನನಗೆ ಮಂಡ್ಯದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶವಿಲ್ಲದಂತಾಗಿದೆ ಎಂದು ತಿಳಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಿನ್ನೆ ನನ್ನನ್ನು ಭೇಟಿಯಾಗಿ, ನನಗೆ ಉನ್ನತ ಮಟ್ಟದ ಸ್ಥಾನಮಾನ ಕೊಡುವ ಲೆಕ್ಕಾಚಾರ ಬಿಜೆಪಿ ಹೈಕಮಾಂಡ್‌ನಲ್ಲಿದೆ ಎಂದು ತಿಳಿಸಿದರಲ್ಲದೆ, ನನ್ನನ್ನು ಬಿಜೆಪಿಗೆ ಆಹ್ವಾನಿಸಿದ್ದಾರೆ. ನಮ್ಮ ಕಾರ್ಯಕರ್ತರ ಭವಿಷ್ಯವೇನು ಎಂದು ಪ್ರಶ್ನಿಸಿದಾಗ ನೀವು ಹೇಳಿದಂತೆ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸಲು ಸಿದ್ಧವಿರುವುದಾಗಿ ಅವರು ತಿಳಿಸಿದ್ದಾರೆ ಎಂದು ಸುಮಲತಾ ಹೇಳಿದರು. ನಾನು ಮಂಡ್ಯ ಜಿಲ್ಲೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದೇನೆ. ನನ್ನನ್ನು ನಂಬಿದವರನ್ನು ಹಾಗೂ ನನ್ನ ಮೇಲೆ ಅಭಿಮಾನ ಹೊಂದಿರುವವರನ್ನು ಕೈಬಿಡಬಾರದು ಎಂಬ ಕಾರಣಕ್ಕಾಗಿ ಏ.3ರಂದು ಮಂಡ್ಯದಲ್ಲಿ ಸಭೆ ಕರೆಯುತ್ತಿದ್ದೇನೆ. ಸಭೆ ಎಲ್ಲಿ ನಡೆಯುತ್ತದೆ ಎಂಬುದನ್ನು ನಂತರ ತಿಳಿಸುತ್ತೇನೆ ಎಂದ ಅವರು, ಮಂಡ್ಯ ಕ್ಷೇತ್ರವನ್ನು ಬಿಜೆಪಿಯಲ್ಲೇ ಉಳಿಸಿಕೊಂಡರೆ ಅನುಕೂಲವಾಗುತ್ತದೆ ಎಂದು ಪಕ್ಷದ ಮುಖಂಡರಿಗೆ ತಿಳಿಸಿದ್ದೆ. ಆದರೆ ಈಗ ಕ್ಷೇತ್ರ ಜೆಡಿಎಸ್‌ಗೆ ಹಂಚಿಕೆಯಾಗಿದೆ ಎಂದು ಸುಮಲತಾ ಹೇಳಿದರು.

'ಕಾವೇರಿ' ಉಳಿವಿಗಾಗಿ ಕುಮಾರಣ್ಣ ಅನಿವಾರ್ಯ

ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿ, ದೇಶಾದ್ಯಂತ ಬೀಸುತ್ತಿರುವ ಮೋದಿಯವರ ಅಲೆಯಿಂದ ರಾಜ್ಯದಲ್ಲಿ 28 ಕ್ಕೆ 28 ನಮ್ಮ ಮೈತ್ರಿ ಅಭ್ಯರ್ಥಿಗಳು ಗೆಲುವು ಸಾಧಿಸುವುದು ಸತ್ಯ. ಅದೇ ರೀತಿಯಲ್ಲಿ ಇದೇ ಡಿಸೆಂಬರ್ ನಂತರ ಈಗಿರುವ ಕಾಂಗ್ರೆಸ್ ಭ್ರಷ್ಟ ಸರ್ಕಾರ ಬಿದ್ದು, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಜೊತೆಯಲ್ಲಿ ಮತ್ತಿತರ ಶಾಸಕರ ಬೆಂಬಲದೊಂದಿಗೆ ರಾಜ್ಯದಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು. ವೇದಿಕೆಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಡಾ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ.ಶ್ರೀಕಂಠೇಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್, ಜೆಡಿಎಸ್ ಜಿಲಾಧ್ಯಕ್ಷ ಡಿ.ರಮೇಶ್, ಮುಖಂಡರಾದ ನೆಲ್ಲಿಗೆರೆ ಬಾಲು, ಎಲ್.ಎಸ್.ಚೇತನ್ ಶಿವರಾಮೇಗೌಡ, ಪಡಿತರ ವಿತರಕರ ಸಂಘದ ರಾಜ್ಯಾಧ್ಯಕ್ಷ ಟಿ.ಕೃಷ್ಣಪ್ಪ ಹಾಗೂ ಎರಡೂ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

ಶ್ರೀ ವಿಧುಶೇಖರ ಭಾರತೀ ಶ್ರೀಗಳ ಆಗಮನ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಿಂದ ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರಭಾರತೀ ಸ್ವಾಮೀಜಿಯವರನ್ನು ಅದ್ದೂರಿ ಮೆರವಣಿಗೆ ಮೂಲಕ ಶ್ರೀ ಶೃಂಗೇರಿ ಶಂಕರ ಮಠದ ಅಭಿನವ ಶಂಕರಾಲಯಕ್ಕೆ ಶನಿವಾರ ಸಂಜೆ ಕರೆದೊಯ್ಯಲಾಯಿತು.

ಕೊಡುಗೆ ನೀಡಿದವರು. ಶ್ರೀ ಶಾರದಾ ಪೀಠದ 33ನೇ ಪೀಠಾಧಿಪತಿಗಳಾಗಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರು ಸಹ ನಮ್ಮ ಸನಾತನ ಧರ್ಮ ಉಳಿಸಿ ಬೆಳೆಸಲು ಪರಿಶ್ರಮಿಸಿದವರು. ಇವರು ಅನೇಕ ವಿಧವಾದ ಧರ್ಮೋದ್ಧಾರ ಕಾರ್ಯಗಳನ್ನು ಮಾಡಿದ್ದಾರೆ. ಇವರೊಬ್ಬ ಮಹಾಪುರುಷರು. ಇವರು ಶಂಕರಾಚಾರ್ಯರ ಪುನರಾವತಾರವೆಂದೇ ಖ್ಯಾತಿಗೊಂಡಿದ್ದರು. ಅದಕ್ಕಾಗಿಯೇ ವಿದ್ವಾಂಸರು ಇವರನ್ನು 'ಅಭಿನವ ಶಂಕರ' ಎಂದು ಕರೆದರು ಎಂದು ತಿಳಿಸಿದರು.

ಇಂದಿನ ಅಭಿನವ ಶಂಕರಾಲಯವು ಮೈಸೂರು ಮಹಾಸಂಸ್ಥಾನದ ಮಹಾ ವಿದ್ವಾಂಸರಾಗಿದ್ದ ಕುಣಿಗಲ್ ರಾಮಶಾಸ್ತ್ರಿಗಳ ಗೃಹವಾಗಿತ್ತು. ಇಲ್ಲಿ ಅವರ ಪುತ್ರರಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರು ಜನ್ಮತಾಳಿದರು. ಕುಣಿಗಲ್ ರಾಮಶಾಸ್ತ್ರಿಗಳನ್ನು ಅಂದಿನ ಪಂಡಿತರ ವಲಯವು ಶತಕೋಟಿ ರಾಮಶಾಸ್ತ್ರಿಗಳು ಎಂದು ಕರೆಯುತ್ತಿತ್ತು. ಏಕೆಂದರೆ ಅವರು ನ್ಯಾಯಶಾಸ್ತ್ರಕ್ಕೆ ಅತ್ಯುಪಯುಕ್ತವಾದ ಶತಕೋಟಿ ಎಂಬ ಗ್ರಂಥ ರಚನೆ ಮಾಡಿದ್ದರು. ನಮ್ಮ ದೇಶದಲ್ಲಿ ವೈದಿಕ ವಿದ್ಯೆ, ವೇದಶಾಸ್ತ್ರ ವಿದ್ಯೆ ಉಳಿದು ಬೆಳೆಯಲು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರು ಮಹತ್ವದ ಕೊಡುಗೆ ನೀಡಿದ್ದಾರೆ. ಬನಾರಸ್ ಹಿಂದೂ ವಿವಿ ಸ್ಥಾಪನೆ ಮಾಡುವಲ್ಲಿ ಇವರ ವಿಶೇಷ ಅನುಗ್ರಹವಿದೆ. ಇವರ ಪ್ರೇರಣೆ ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ ಉತ್ತರ ಭಾರತದಲ್ಲೂ ಇದೆ ಎಂದು ಹೇಳಿದರು.

ಇದಕ್ಕೂ ಮುನ್ನ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳರವರ ಪುರಪ್ರವೇಶ ಕಾರ್ಯಕ್ರಮ ನಡೆಯಿತು. ಮೈಸೂರಿನ ಮಹಾರಾಜ ಕಾಲೇಜು ಮೈದಾನಕ್ಕೆ ಆಗಮಿಸಿದ ಶ್ರೀಗಳನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಶಂಕರ ಮಠಕ್ಕೆ ಕರೆ ತರಲಾಯಿತು. ಮಂಗಳ ವಾದ್ಯ ಹಾಗೂ ಭಜನಾ ತಂಡಗಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ್ದರೆ ಅಪಾರ ಸಂಖ್ಯೆ ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಶ್ರೀಗಳನ್ನು ಪೂರ್ಣಕುಂಭ ಸಮೇತ ಸ್ವಾಗತಿಸಿ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ ಮೂಲಕ ಭವ್ಯ ಮೆರವಣಿಗೆಯೊಂದಿಗೆ ಮಠಕ್ಕೆ ಕರೆತಲಾಯಿತು. ಮಠದಲ್ಲಿ ವಾಸ್ತವ್ಯ ಹೂಡಲಿರುವ ಶ್ರೀಗಳು ಏ.6ರವರೆಗೆ ನಡೆಯುವ ಶತಮಾನೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಮಾಜಿ ಸಚಿವ ಎಸ್.ಎ. ರಾಮದಾಸ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶೃಂಗೇರಿ ಮಠದ ಆಡಳಿತಾಧಿಕಾರಿ ಪಿ.ಎ. ಮುರಳಿ, ಮುಖ್ಯ ಸಲಹೆಗಾರ ಡಾ.ಗೌರಿಶಂಕರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶಂಕರ ತತ್ವ ಅಭಿಯಾನ ನಟರಾಜ್, ಶಶಿಕಲಾ ಜಯಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಸಪ್ತಮಾತೃಕಾ ದೇವಸ್ಥಾನದ ಧರ್ಮದರ್ಶಿ ಭಾಸ್ಕರ್, ನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಮುಖಂಡರಾದ ಕೆ.ಆರ್.ಸತ್ಯನಾರಾಯಣ, ಸುಧೀಂದ್ರ, ಡಾ.ಕೆ.ವಿ.ಲಕ್ಷ್ಮೀದೇವಿ, ಅಜಯ್‌ಶಾಸ್ತ್ರಿ, ಜೋಗಿ ಮಂಜು ಮತ್ತಿತರರು ಹಾಜರಿದ್ದರು.

ಆರಕ್ಷಕರ ಬಡಾವಣೆಯಲ್ಲಿ 'ರಕ್ಷಣೆ' ಇಲ್ಲ

ದಿನಬೆಳಗಾದರೆ 'ಕಳ್ಳತನ' ಇಲ್ಲಿ ಮಾಮೂಲಿ ವರದಿ



●ಮೋಹನ್ ಕಾಯಕ

ಮೈಸೂರು, ಮಾ.30– 'ಐಪಿಎಸ್' ನಗರದಲ್ಲಿ ಕಳ್ಳರ ಕರಾಮತ್ತು... ಪೊಲೀಸರ ಮನೆಗಳೇ ಖದೀಮರ ಟಾರ್ಗೆಟ್...!

ಮೈಸೂರಿನ ರಿಂಗ್‌ರೋಡ್ (ಟಿ.ನರಸೀಪುರದ ಕಡೆಗೆ) ಸಮೀಪದಲ್ಲಿರುವ ಕೆ.ಆರ್.ಶ್ರೀನಿವಾಸನ್ ಐಪಿಎಸ್ ನಗರ(3ನೇ ಹಂತ ಲಲಿತಾದ್ರಿಪುರ)ದಲ್ಲಿ ಕಳ್ಳರ ಉಪಟಳ ವಿಪರೀತವಾಗಿದ್ದು, ನಿವಾಸಿಗಳ ನೆಮ್ಮದಿಯನ್ನೇ ಹಾಳು ಮಾಡಿದೆ. ಅದರಲ್ಲೂ ಹೊಸದಾಗಿ ಕಟ್ಟುತ್ತಿರುವ ಮನೆಗಳೇ ಕಳ್ಳರ ಟಾರ್ಗೆಟ್ ಆಗಿದ್ದು, ಲಕ್ಷಾಂತರ ರೂ. ಮೌಲ್ಯದ ವಿದ್ಯುತ್ ತಂತಿ ಮತ್ತು ವಯರ್‌ಗಳ ಕಳವು ನಿರಂತರವಾಗಿ ನಡೆಯುತ್ತಲೇ ಇದೆ.

ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದಿಂದ ಅಭಿವೃದ್ಧಿಪಡಿಸಲಾಗಿರುವ ಬಡಾವಣೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರು ಹಾಗೂ ಸೇವೆಯಲ್ಲಿರುವವರೇ ಇದ್ದಾರೆ. ಪೊಲೀಸರ ಬಡಾವಣೆಯಲ್ಲಿಯೇ ಕೈ ಚಳಕ ತೋರುತ್ತಿರುವ ಕಳ್ಳರು, ಕಳೆದೊಂದು ತಿಂಗಳಲ್ಲಿ ನಿರ್ಮಾಣ ಹಂತದಲ್ಲಿರುವ ಐದಾರು ಮನೆಗಳಲ್ಲಿನ ವಿದ್ಯುತ್ ವಯರ್, ಮೋಟಾರ್‌ಗಳನ್ನು ಕದ್ದೊಯ್ದಿದ್ದಾರೆ.

ಸಿಸಿಟಿವಿ ಕ್ಯಾಮರಾ, ಸೆಕ್ಯೂರಿಟಿ ಗಾರ್ಡ್‌ಗಳ ಕಣ್ಣಿಗೂ ಮಣ್ಣೆರೆಚುತ್ತಿರುವ ಖದೀಮರು, ಸಿಕ್ಕ ಸಿಕ್ಕದನ್ನೆಲ್ಲಾ ದೋಚುತ್ತಿದ್ದಾರೆ. ನಿರ್ಮಾಣ ಹಂತದಲ್ಲಿರುವ ಮನೆಗಳಿಗೆ ವಯರಿಂಗ್ ಮಾಡಲಾಗಿದ್ದರೂ ಸ್ವಿಚ್‌ಬೋರ್ಡ್‌ಗಳನ್ನು ಕಳಚಿ ಬೆಲೆ ಬಾಳುವ ವಯರ್‌ಗಳನ್ನು ಎಳೆದುಕೊಂಡು ಹೋಗುತ್ತಿದ್ದಾರೆ. ಚಾಲಾಕಿಗಳು ಕಬ್ಬಿಣದ ರಾಡ್ ಇನ್ನಿತರೆ ಭಾರವಾದ ವಸ್ತುಗಳ ಬದಲು ತೂಕವಿಲ್ಲದ, ಸುಲಭವೂ ಆದ ವಯರ್‌ಗಳ ಕಳ್ಳತನಕ್ಕೆ ಇಳಿದಿರುವುದು ಪೊಲೀಸರ ನಿದ್ದೆಗೆಡಿಸಿದೆ.

ಮಾ.19ರ ರಾತ್ರಿ ವೇಳೆ ಆಗಷ್ಟೇ ವಯರಿಂಗ್ ಮಾಡಲಾಗಿದ್ದ ಮನೆಗೆ, ಹಿಂಬಾಗಿಲಿನಿಂದ ನುಗ್ಗಿರುವ ಕಳ್ಳರು, ಸುಮಾರು 80 ಸಾವಿರ ರೂ.ಮೌಲ್ಯದ ವಯರ್‌ಗಳನ್ನು ಕಟ್ ಮಾಡಿಕೊಂಡು ಹೋಗಿದ್ದಾರೆ. ಅಲ್ಲದೆ ಅದೇ ಮನೆಯಲ್ಲಿ 4 ತಿಂಗಳ ಹಿಂದೆಯಷ್ಟೇ ಸುಮಾರು 15–20 ಸಾವಿರ ರೂ.ಗಳ ಮೋಟಾರ್ ವಯರ್‌ಗಳನ್ನು ಕದ್ದೊಯ್ದಿದ್ದಾರೆ. ಅಲ್ಲದೆ ಒಂದು ತಿಂಗಳ ಹಿಂದೆ ಒಂದೇ ಮನೆಯಲ್ಲಿ ಒಂದೂವರೆ ಲಕ್ಷ ರೂ. ಬೆಲೆ ಬಾಳುವ ವಯರ್‌ಗಳನ್ನು ಕದ್ದಿದ್ದಾರೆ. ಇದೇ ರೀತಿ ದಿನದಿಂದ ದಿನಕ್ಕೆ ಬಡಾವಣೆಯಲ್ಲಿ ಕಳ್ಳತನ ಹೆಚ್ಚಾಗುತ್ತಿದ್ದು, ಆರಕ್ಷಕರ ಮನೆಗಳಿಗೆ ರಕ್ಷಣೆ ನೀಡಲೇಬೇಕಾಗದ ತುರ್ತುಪರಿಸ್ಥಿತಿ ನಿರ್ಮಾಣವಾಗಿದೆ.

ಸಿಸಿಟಿವಿ, ಸೆಕ್ಯೂರಿಟಿಗೂ ಕಂಡಿಲ್ಲ: ಮನೆ ಮುಂದೆ ಸಿಸಿಟಿವಿ ಕ್ಯಾಮರಾ ಅಳವಡಿಸಿದ್ದು, ಸೆಕ್ಯೂರಿಟಿ ಗಾರ್ಡ್ ಒಬ್ಬರನ್ನು ನೇಮಿಸಿದ್ದೇವೆ. ಮಧ್ಯರಾತ್ರಿ ಮನೆ ಹಿಂಬಾಗಿಲಿನಿಂದ ಮನೆಯೊಳಗೆ ಬಂದಿರುವ ಕಳ್ಳರು ಸುಮಾರು 1 ಗಂಟೆ ಕಾಲ ಮನೆಗೆ ಮಾಡಿಸಿದ್ದ ವಯರಿಂಗ್ ಎಲ್ಲವನ್ನು ಎಳೆದು, ಕಿತ್ತುಕೊಂಡು ಹೋಗಿದ್ದಾರೆ. ಇದಕ್ಕೂ ಮೊದಲು ಮೋಟಾರ್ ವಯರ್ ಅನ್ನು ಕದ್ದಿದ್ದರು ಎಂದು ವಯರ್ ಕಳ್ಳತನವಾದ ಮನೆ ಮಾಲೀಕರು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡಿದ್ದಾರೆ.

ವಿಪರೀತ ಕಳ್ಳತನ: ಬಡಾವಣೆಯಲ್ಲಿ ಬರೀ ವಯರ್ ಕಳ್ಳತನ ವಿಪರೀತವಾಗಿದೆ. ನಮ್ಮ ಮನೆಯ ಅಕ್ಕ–ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ಮೂರು ಮನೆಗಳಲ್ಲಿ ಲಕ್ಷಾಂತರ ರೂ.ಮೌಲ್ಯದ ವಯರ್‌ಗಳ ಕಳವಾಗಿದೆ. ರಾತ್ರಿಯಾಗಿ ಬೆಳಕಾಗುವಷ್ಟರಲ್ಲಿ ಯಾರ ಮನೆಯಲ್ಲಿ ಕಳ್ಳತನವಾಗಿದೆ ಎಂದು ಕೇಳುವುದು ಪರಿಪಾಠ ಆಗಿದೆ. ಬಡಾವಣೆಯಲ್ಲಿ ಇಂದು ಈ ಮನೆ, ನಾಳೆ ಪಕ್ಕದ ಮನೆಯಲ್ಲಿ ಕಳ್ಳತನವಾಗಿದೆ ಎಂಬ ಸುದ್ದಿಯೇ ಜಾಸ್ತಿ ಎಂದು ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು ಬಡಾವಣೆಯಲ್ಲಾಗುತ್ತಿರುವ ಸರಣಿ ಕಳ್ಳತನ ಕುರಿತು ತಿಳಿಸಿದರು.

ಬೀಟ್ ಬರ್‍ತಿಲ್ಲ: ಬಡಾವಣೆ ವ್ಯಾಪ್ತಿಯ ಠಾಣೆಯ ಪೊಲೀಸರು ರಾತ್ರಿ ವೇಳೆ ಒಂದೆರಡು ಬಾರಿಯಾದರೂ ಬೀಟ್ ಬಂದರೆ ಕಳ್ಳರಿಗೆ ಭಯವಿರುತ್ತದೆ. ಆದರೆ, ಯಾರೊಬ್ಬರು ಬೀಟ್ ಬರ್‍ತಿಲ್ಲ. ಸಾಕಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ನಾವು ಸೇವೆ ಮಾಡಿದ ಇಲಾಖೆಯವರ ಬಗ್ಗೆ ಮಾತನಾಡಲು ಮುಜುಗರವಾಗುತ್ತೆ ಎಂದು ಕಳ್ಳತನದಿಂದ ನೊಂದ ನಿವಾಸಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ನೋ ಎಫ್‌ಐಆರ್...

ಕಳ್ಳತನವಾಗಿರುವ ಬಗ್ಗೆ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ಕೊಟ್ಟರೂ ಎಫ್‌ಐಆರ್ ದಾಖಲಿಸದೆ, ಬಂದು ಚೆಕ್ ಮಾಡುತ್ತೇವೆ ಎಂದು ಹೇಳುತ್ತಾರೆ. ಒಮ್ಮೆ ಬಂದು ಸ್ಥಳ ಪರಿಶೀಲನೆ ಮಾಡಿದರಷ್ಟೇ. ಯಾವ ಕ್ರಮವೂ ಆಗಿಲ್ಲ. ಇತ್ತ ಬೀಟ್ ಬರಲ್ಲ. ಅತ್ತ ಕಳ್ಳರನ್ನು ಹಿಡಿಯಲ್ಲ. ಅದ್ಯಾವ ರೀತಿ ರಕ್ಷಣೆ ಕೊಡುತ್ತಾರೋ ಕಾಣೆ. ಕಷ್ಟಪಟ್ಟು, ಬ್ಯಾಂಕ್ ಲೋನ್ ತೆಗೆದುಕೊಂಡು ಮನೆ ಕಟ್ಟುತ್ತಿದ್ದೇವೆ. ಇನ್ನೇನು ಮುಗಿತಾ ಇದೆ ಎನ್ನುವಷ್ಟರಲ್ಲಿ ಕಳ್ಳತನದಿಂದ ಖರ್ಚು ಹೆಚ್ಚಾಗುತ್ತಿದೆ.

- ನೊಂದ ನಿವಾಸಿಗಳು

ತಾಯಿಯಿಂದ ಮಾತ್ರ ಮಕ್ಕಳ ಪ್ರತಿಭೆ ಬೆಳಗಲು ಸಾಧ್ಯ: ಸುತ್ತೂರು ಶ್ರೀ



ಮೈಸೂರು ಜಗನ್ಮೋಹನ ಅರಮನೆಯಲ್ಲಿ ಬೆಂಗಳೂರಿನ ಲಯಾಭಿನಯ ಸಂಸ್ಥೆ ವತಿಯಿಂದ ಶ್ರೀಮತಿ ಸುವರ್ಣಮ್ಮ ಸ್ಮರಣಾರ್ಥ ಏರ್ಪಡಿಸಿದ್ದ ಸುವರ್ಣ ಕಲಾ ಉತ್ಸವ ಹಾಗೂ ಸಾಧಕ ಕಲಾವಿದರನ್ನು ಸನ್ಮಾನಿಸುತ್ತಿರುವುದು.

ಮೈಸೂರು, ಮಾ.30(ಎಸ್‌ಪಿಎನ್)– ಭಾರತೀಯ ಪರಂಪರೆಯಲ್ಲಿ ತಾಯಿಗೆ ಪೂಜ್ಯನೀಯ ಸ್ಥಾನವಿದೆ. ಹಾಗಾಗಿ ತಾಯಿಯಿಂದ ಮಾತ್ರ ಮಕ್ಕಳ ಪ್ರತಿಭೆಯನ್ನು ಗುರುತಿಸಲು ಸಾಧ್ಯ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಜಗನ್ಮೋಹನ ಅರಮನೆಯಲ್ಲಿ ಲಯಾಭಿನಯ ಸಂಸ್ಥೆ ವತಿಯಿಂದ ಶ್ರೀಮತಿ ಸುವರ್ಣಮ್ಮ ಸ್ಮರಣಾರ್ಥ ಏರ್ಪಡಿಸಿದ್ದ ಸುವರ್ಣ ಕಲಾ ಉತ್ಸವ ಹಾಗೂ ಸಾಧಕ ಕಲಾವಿದರನ್ನು ಸನ್ಮಾನಿಸಿ ಮಾತನಾಡಿದರು.

ವಿದುಷಿ ಮಹಾಲಕ್ಷ್ಮಿ, ಅವರ ತಾಯಿ ಸುವರ್ಣಮ್ಮ ಅವರ ಹೆಸರಿನಲ್ಲಿ ಪ್ರತಿ ವರ್ಷ ಚಿಕ್ಕ ಮಕ್ಕಳಿಂದ ಕಲೆ, ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಿ ಸ್ಮರಿಸುತ್ತಾರೆ. ಸುವರ್ಣಮ್ಮ ಅವರು, ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲವು ವರ್ಷಗಳ ಹಿಂದೆ ಅನಾರೋಗ್ಯ ಪೀಡಿತರಾಗಿ ಸಾವನ್ನಪ್ಪಿದ್ದಾರೆ. ಅವರ ಹೆಸರಿನಲ್ಲಿ ಮಕ್ಕಳಲ್ಲಿರುವ ಪ್ರತಿಭೆ ಹೊರ ಹಾಕಲು ವೇದಿಕೆ ಒದಗಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಮಕ್ಕಳಿಗೆ ಜಗತ್ತಿನ ಪರಿಚಯ ಮಾಡಿಸುವುದು ತಾಯಿ. ತಾಯಿಗೆ ಸಮಾನ ವಸ್ತು ಜಗತ್ತಿನಲ್ಲಿಲ್ಲ. ತಾಯಿ ಅತಿಥಿ ಸತ್ಕಾರ ಮಾಡುತ್ತಾಳೆ. ಮಕ್ಕಳಿಗೆ ವಿದ್ಯೆ ಕಲಿಸುತ್ತಾಳೆ. ಮಮತೆ ತೋರುತ್ತಾಳೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಆ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತಾಳೆ ಒಟ್ಟಿನಲ್ಲಿ ತಾಯಿ ಮಗುವಿನ ಶ್ರೇಯೋಭಿವೃದ್ಧಿಗಾಗಿ ತಮ್ಮ ಜೀವನ ಶ್ರಮಿಸುತ್ತಾಳೆ. ಹಾಗಾಗಿ ಪ್ರತಿಯೊಬ್ಬರು ತಾಯಿ ಮತ್ತು ಗುರುವನ್ನು ಸದಾ ನೆನೆಯಬೇಕು ಎಂದು ಕಿವಿಮಾತು ಹೇಳಿದರು.

ಮಕ್ಕಳಿಗೆ ಭರತನಾಟ್ಯ, ಸಂಗೀತ, ಚಿತ್ರಕಲೆ ಸೇರಿದಂತೆ ಇತರೆ ಮಾನವಿಕ ಕಲೆಗಳನ್ನು ಕಲಿಸಿ, ಸುಸಂಸ್ಕೃತ ಆಚರಣೆಗಳಲ್ಲಿ ತೊಡಗಿಸಿ, ಮಕ್ಕಳನ್ನು ಉತ್ತಮ ಪ್ರಜೆಯನ್ನಾಗಿ ಮಾಡುವಲ್ಲಿ ತಾಯಿ ಶ್ರಮ, ಪಾತ್ರ ಹೇಳತೀರದು ಎಂದರು.

ನೂಪುರ ಕಲಾವಿದರು ಟ್ರಸ್ಟ್‌ನ ಪ್ರೊ.ಕೆ. ರಾಮಮೂರ್ತಿ ರಾವ್ ಮಾತನಾಡಿ, ತಾಯಿ ದೈವ ಸ್ವರೂಪಿ, ತಾಯಿ ಕರುಣಾಮಯಿ, ತಾಯಿಯ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ಹಾಗಾಗಿ ಇಂದಿನ ಯುವ ಪೀಳಿಗೆ, ತಂದೆ–ತಾಯಿಯ ಸ್ಮರಣೆ ಮಾಡುವಂತೆ ಸಲಹೆ ನೀಡಿದರು.

ಸನ್ಮಾನ: ಈ ವೇಳೆ ಬೆಂಗಳೂರು ದಕ್ಷಿಣ ಶ್ರೀ ರವಿಶಂಕರ ವಿದ್ಯಾಮಂದಿರದ ಪ್ರಾಂಶುಪಾಲೆ ಬಿ.ಗಾಯತ್ರಿ, ಮೈಸೂರು ವಿವಿ ಲಲಿತ ಕಲಾ ವಿಭಾಗದ ನೃತ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಡಾ.ಶೀಲಾ ಶ್ರೀಧರ್, ಸಾಯಿ ಅಭಿನಯ, ತನಿಮ ಪಾತ್ರ, ಅಭ್ಯುದಯ್ ಧ್ಯಾನ್ ಭೂಷಣ್, ಅಭಿಜ್ಞಾನ್ ವೇದಾಂತ ಭೂಷಣ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ಅತಿಥಿ ಕಲಾವಿದರು ಮತ್ತು ಲಯಾಭಿನಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನವಿತ್ತು.

ಮೂರನೇ ದಿನ ಒಬ್ಬರು ನಾಮಪತ್ರ ಸಲ್ಲಿಕೆ



ಅಖಿಲ ಭಾರತ ಹಿಂದೂ ಮಹಾಸಭಾ ಪಕ್ಷದ ಅಭ್ಯರ್ಥಿಯಾಗಿ ಎ.ಎಸ್.ಸತೀಶ್ ಅವರು ಶನಿವಾರ ನಾಮಪತ್ರ ಸಲ್ಲಿಸಿದರು.

ಮೈಸೂರು,ಮಾ.30(ಆರ್‌ಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಬಯಸಿ ಅಖಿಲ ಭಾರತ ಹಿಂದೂ ಮಹಾಸಭಾ ಪಕ್ಷದ ಅಭ್ಯರ್ಥಿಯಾಗಿ ಎ.ಎಸ್.ಸತೀಶ್ ಅವರು ಮೂರನೇ ದಿನವಾದ ಇಂದು ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ನಾಲ್ವರು ಬೆಂಬಲಿಗರೊಂದಿಗೆ ಮೈಸೂರಿನ ಹೊಸ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ನಂತರ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದು ಭಾರತ ಸಂವಿಧಾನ ಆಶಯಗಳನ್ನು ಪ್ರಜ್ವಲಿಸುವ ಜವಾಬ್ದಾರಿ ನಮ್ಮ ಮೇಲಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಅಖಿಲ ಭಾರತ ಹಿಂದೂ ಮಹಾಸಭಾ ಪಕ್ಷದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ ಎಂದರು.

ಅಧಿಸೂಚನೆ ಹೊರಡಿಸಿದ ಮೊದಲ ದಿನ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್) ಪಕ್ಷದ ವಿ.ಆರ್.ಸುನಿಲ್ ಮತ್ತು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್)ಯ ಎಂ.ಎಸ್. ಪ್ರವೀಣ್ ನಾಮಪತ್ರ ಸಲ್ಲಿಸಿದ್ದು, ಈವರೆಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಒಟ್ಟು ಮೂವರು ಉಮೇದುವಾರಿಕೆ ಸಲ್ಲಿಸಿದಂತಾಗಿದೆ.

ಕಾಂಗ್ರೆಸ್ ಬೆಂಬಲಿಸುವಂತೆ ಕುರುಬರ ಸಂಘಕ್ಕೆ ಮಾಜಿ ಅಧ್ಯಕ್ಷ ಬಿ.ಸುಬ್ರಮಣ್ಯ ಕರೆ



ಮೈಸೂರು,ಮಾ.30– 2024ರ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ ಬೆಂಬಲಿಸುವಂತೆ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ಕರೆ ನೀಡಿದ್ದಾರೆ. ಈ ಕುರಿತು ಮಾತನಾಡಿರುವ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲೂ ಕುರುಬ ಸಮಾಜವನ್ನು ಇತರೇ ಪಕ್ಷಗಳು ಕಡೆಗಣಿಸಿದವು. ಬಿಜೆಪಿ–ಜೆಡಿಎಸ್ ಮೈತ್ರಿ ಪಕ್ಷ ಈ ಬಾರಿಯೂ ನಮ್ಮ ಸಮಾಜದ ನಾಯಕರನ್ನು ಕಡೆಗಣಿಸಿದೆ. ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಮಗನಿಗೆ ಟಿಕೆಟ್ ಕೊಡಿಸುವುದಾಗಿ ಹೇಳಿ ವಂಚಿಸಿರುವುದು ಇದಕ್ಕೆ ತಾಜಾ ಉದಾಹರಣೆ. ಅಲ್ಲದೇ ಮುಖ್ಯಮಂತ್ರಿಗಳ ಕನಸಿನ ಯೋಜನೆಗಳಿಂದ ಅನೇಕ ಬಿಜೆಪಿ ನಾಯಕರು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮಾತ್ರವೇ ನಮ್ಮ ಸಮುದಾಯದ ನಾಯಕರಿಗೆ ಟಿಕೆಟ್ ನೀಡಿದೆ. ರಾಜ್ಯದಲ್ಲಿ ಶೇ.10 ರಷ್ಟು ಜನಸಂಖ್ಯೆ ನಮ್ಮ ಸಮುದಾಯದವರು ಇದ್ದಾರೆ. ಆದರೂ ಪ್ರತಿಪಕ್ಷಗಳು ನಮ್ಮ ಸಮಾಜವನ್ನು ಕಡೆಗಣಿಸಿವೆ ಇದರಿಂದ ನಾವು ಸ್ವಾತಂತ್ರ್ಯ ಬಂದು 77 ವರ್ಷ ಕಳೆದಿದ್ದರೂ ರಾಜಕೀಯವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿಲ್ಲ. ಇನ್ನಾದರೂ ನಮ್ಮ ಸಮಾಜ ಎಚ್ಚೆತ್ತುಕೊಳ್ಳಬೇಕು. ನಮ್ಮ ಸಮುದಾಯವನ್ನು ಬೆಳೆಸುವ ನಾಯಕರನ್ನು ಅಧಿಕಾರಕ್ಕೆ ತರಬೇಕು. ಅದಕ್ಕಾಗಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

ತೇಜಸ್ವಿನಿ ಗೌಡ ಕಾಂಗ್ರೆಸ್ ಸೇರ್ಪಡೆ



ನವದೆಹಲಿ, ಮಾ.30– ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ತೇಜಸ್ವಿನಿ ಗೌಡ ಶನಿವಾರ ದೆಹಲಿಯ ಕಾಂಗ್ರೆಸ್ ಕಚೇರಿಯಲ್ಲಿ ಜೈರಾಮ್ ರಮೇಶ್, ಪವನ್ ಖೇರಾ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಯಾದರು.

ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಕೊಟ್ಟ ಕೆಲಸವನ್ನು ನಿಷ್ಠೆಯಿಂದ ಮಾಡಿದ್ದೇನೆ. ಬಿಜೆಪಿಗೆ ರಾಜಕೀಯ ಬರಗಾಲ ಇತ್ತು. ಆಗ ನಾನು ಬಿಜೆಪಿ ಸೇರಿದ್ದೆ. ಆಗ ನರೇಂದ್ರ ಮೋದಿಯವರು ಗುಜರಾತ್ ಸಿಎಂ ಆಗಿದ್ದರು, ಪ್ರಧಾನಿ ಆಗಿರಲಿಲ್ಲ. ಈಗ ಬಿಜೆಪಿ ಸಮೃದ್ಧವಾಗಿದೆ ಬಿಜೆಪಿ ಬಿಟ್ಟು ಬಂದಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ನಿಜವಾಗಲು ಬರಗಾಲ ಇದೆ, ಕಷ್ಟದ ಪರಿಸ್ಥಿತಿ ಇದೆ. ಡಿಕೆ ಶಿವಕುಮಾರ್ ಅವರು ಒಕ್ಕಲಿಗ ಸಮುದಾಯದ ನಾಯಕ. ಬಿಜೆಪಿಯಲ್ಲಿರುವ ಒಕ್ಕಲಿಗ ಸಮುದಾಯದ ನಾಯಕರನ್ನು ತುಳಿಯಲಾಗಿದೆ. ಪ್ರತಾಪ್ ಸಿಂಹ, ಸಿ.ಟಿ.ರವಿ, ಸದಾನಂದಗೌಡರಿಗೆ ಟಿಕೆಟ್ ಕೊಟ್ಟಿಲ್ಲ. ಎಲ್ಲಾ ಮ್ಯಾಚ್ ಫಿಕ್ಸ್ ಮಾಡಿಕೊಂಡು ಪಕ್ಷ ಸಂಘಟನೆ ಮಾಡಿಲ್ಲ. ಕಾಂಗ್ರೆಸ್‌ನಲ್ಲಿ ನನಗೆ ಏನೇ ಜವಾಬ್ದಾರಿ ಕೊಟ್ಟರೂ ಮಾಡುತ್ತೇನೆ. ಡಿ.ಕೆ ಸುರೇಶ್ ಅವರ ಪರವಾಗಿಯೂ ಕೆಲಸ ಮಾಡುತ್ತೇನೆ. ರಾಜ್ಯದ 28 ಕ್ಷೇತ್ರಗಳಲ್ಲಿಯೂ ಪ್ರಚಾರ ಮಾಡುತ್ತೇನೆ ಎಂದರು.

ಡಾ.ರತಿರಾವ್ ಜೀವನ ಕುರಿತ ನಡೆ ನುಡಿಯ ಹಾದಿ ಪುಸ್ತಕ ಬಿಡುಗಡೆ



ಮೈಸೂರಿನ ರಂಗಾಯಣದ ಶ್ರೀರಂಗದಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಆಯೋಜಿಸಿದ್ದ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಹೋರಾಟಗಾರ್ತಿ ಡಾ.ರತಿರಾವ್ ಅವರ ಜೀವನ, ಬದುಕು, ಹೋರಾಟ ಕುರಿತ 'ನಡೆ ನುಡಿಯ ಹಾದಿ' ಪುಸ್ತಕವನ್ನು ಸಮತಾ ವೇದಿಕೆಯ ಮೀರಾನಾಯಕ್ ಬಿಡುಗಡೆ ಮಾಡಿದರು.

ಮೈಸೂರು,ಮಾ.30(ಎಂಟಿವೈ)– ನೊಂದ ಹಾಗೂ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನ್ಯಾಯ ದೊರಕಿಸಿ ಕೊಡಲು ಡಾ.ರತಿರಾವ್ ಮಾಡಿರುವ ಹೋರಾಟ ಹಾಗೂ ತುರ್ತು ಸ್ಪಂದನೆ ಸ್ಮರಣೀಯ ಎಂದು ಮೈಸೂರು ವಿವಿಯ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಪ್ರೀತಿ ಶುಭಚಂದ್ರ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರು ರಂಗಾಯಣದ ಶ್ರೀರಂಗದಲ್ಲಿ ಶನಿವಾರ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಪ್ರಗತಿಪರ ಸಂಘಟನೆಗಳು ಹಾಗೂ ಅಪರಾಜಿತೆ ಪ್ರಕಾಶನ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಹೋರಾಟಗಾರ್ತಿ ಡಾ.ರತಿರಾವ್ ಅವರ ಜೀವನ, ಬದುಕು, ಹೋರಾಟ ಹಾಗೂ ಸೈದ್ಧಾಂತಿಕ ನೆಲೆಗಳನ್ನು ಗುರುತಿಸುವ 'ನಡೆ ನುಡಿಯ ಹಾದಿ' ಪುಸ್ತಕ ಕುರಿತು ಮಾತನಾಡಿದ ಅವರು, ಸಮತಾ ವೇದಿಕೆ ಸ್ಥಾಪಕರಾಗಿ ಡಾ.ರತಿರಾವ್ ಕಳೆದ 50 ವರ್ಷಗಳಿಂದ ಮಾಡಿರುವ ಮಹಿಳಾ ಹೋರಾಟಗಳ ಸಚಿತ್ರಣವುಳ್ಳ ಪುಸ್ತಕವೇ 'ನಡೆ ನುಡಿಯ ಹಾದಿ'ಯಾಗಿದೆ. ಪುಸ್ತಕದ ಶೀರ್ಷಿಕೆಯು ಗಮನಾರ್ಹವೂ ಹಾಗೂ ಮಹತ್ವಪೂರ್ಣವೂ ಆಗಿದೆ. ಸಾಂಸ್ಕೃತಿಕ ನಾಯಕ ಬಸವಣ್ಣನವರ ವಚನಗಳಲ್ಲೂ ನಡೆ ನುಡಿಯ ಸಾಮರಸ್ಯ ಪ್ರಮುಖ ತತ್ವವಾಗಿದೆ. ಇಂತಹ ಶೀರ್ಷಿಕೆಯ ಪುಸ್ತಕ ಡಾ.ರತಿರಾವ್ ಅವರ ಹೋರಾಟದ ಪೂರ್ಣ ಚಿತ್ರಣವನ್ನು ಕಟ್ಟಿಕೊಟ್ಟಿದೆ ಎಂದರು.

ರಾಜಕೀಯ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳ ಜೊತೆಗೆ ಕೌಟುಂಬಿಕ ವಲಯಗಳಲ್ಲಿ ಅದೃಶ್ಯಗೊಳಿಸಿ ಪಕ್ಕಕ್ಕೆ ತಳ್ಳಿರುವ ಮಹಿಳೆಯರನ್ನು ಬೇಷರತ್ತಾಗಿ ಒಳ್ಳಗೊಳ್ಳುವಂತೆ ಮಾಡುತ್ತಾ ಬಂದಿರುವ ಮಹಿಳಾ ಹೋರಾಟಗಳಲ್ಲಿ ರತಿರಾವ್ ನಿರ್ವಹಿಸಿದ ಪಾತ್ರ ಬಹುಮುಖ್ಯ. ಆ ಮೂಲಕ ಸಾಕಷ್ಟು ಮಂದಿಗೆ ಸ್ಫೂರ್ತಿ ಮತ್ತು ಪ್ರೇರಣಾಶಕ್ತಿಯಾಗಿ ರೂಪುಗೊಂಡಿದ್ದಾರೆ. ಎರಡು ಭಾಗಗಳಲ್ಲಿ ಕೃತಿ ರಚನೆಯಾಗಿದೆ. ಮೊದಲ ಭಾಗದಲ್ಲಿ 'ಆಪ್ತರ ಕಣ್ಣಲ್ಲಿ ರತಿ', ಎರಡನೇ ಭಾಗದಲ್ಲಿ 'ಹೋರಾಟದ ಹೆಜ್ಜೆ ಗುರುತುಗಳು' ಶೀರ್ಷಿಕೆಯಲ್ಲಿ ಡಾ.ರತಿರಾವ್ ಅವರ ಹೋರಾಟ ಕುರಿತ ಪುಸ್ತಕ ಹೊರಹೊಮ್ಮಿದೆ. ಕುಟುಂಬದಲ್ಲಿ ರತಿರಾವ್ ಬಗ್ಗೆ ಅವರ ಸಹೋದರಿ ಡಾ.ರೂಪರಾವ್ ಅವರು ಕುಟುಂಬದೊಳಗಿನ ದುಂಬಿ, ಪುಟ್ಟ ಬಂಡುಗಾರ್ತಿ, ಅಸ್ಸೀಮ ಧೈರ್ಯಶಾಲಿ ಎಂದು ಬಣ್ಣಿಸಿದ್ದಾರೆ. ಈಜು ಗೊತ್ತಿಲ್ಲದಿದ್ದರೂ ಅಚಾನಕ್ಕಾಗಿ ನೀರಿನ ಕೊಳಕ್ಕೆ ಬಿದ್ದು, ಪವಾಡದಂತೆ ನೀರಿನಿಂದ ಎದ್ದು ಹೊರಬಂದಿರುವ ರತಿರಾವ್ ವಿಜ್ಞಾನಿ ಮಾತ್ರವಲ್ಲದೆ, ಸಾಮಾಜಿಕ ಅಸಮಾನತೆಯಿಂದ ಕಲುಷಿತಗೊಂಡಂತಹ ವಾತಾವರಣ, ದಮನಿತರು, ಶೋಷಿತ ಮಹಿಳೆಯ ಧ್ವನಿ, ಮಕ್ಕಳ ಧ್ವನಿಯ ಪ್ರತಿನಿಧಿಯಾಗಿ ಅಧಿಕಾರದ ಶಕ್ತಿಗಳ ವಿರುದ್ಧ ಮಾಡಿರುವ ಸಾಹಸಮಯ ಹೋರಾಟವನ್ನು ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ರತಿ ಅವರು ನೊಂದ ಮಹಿಳೆಯರಿಗೆ ನ್ಯಾಯ ಒದಗಿಸಲು ಸಕಾಲದಲ್ಲಿ ಸ್ಪಂದಿಸುತ್ತಿದ್ದರು. ಕಾರ್ಯಾಚರಣೆ ಮಾಡುತ್ತಿದ್ದರು. ಇದು ಶ್ಲಾಘನೀಯ. ಕರ್ನಾಟಕದ ಮಹಿಳಾ ಹೋರಾಟಗಳ ಅನಾವರಣಗೊಂಡಿದೆ. ಅನೇಕ ಹೋರಾಟಗಾರ್ತಿಯರು ರತಿ ಅವರ ಬಗ್ಗೆ ಬರೆದಿದ್ದಾರೆ ಎಂದು ತಿಳಿಸಿದರು.

ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮತಾ ವೇದಿಕೆಯ ಮೀರಾನಾಯಕ್ ಕೃತಿ ಬಿಡುಗಡೆ ಮಾಡಿದರು. ಮಹಿಳಾ ಹೋರಾಟಗಾರ್ತಿಯರಾದ ಸಬೀಹಾ ಭೂಮಿಗೌಡ, ಪ್ರೊ.ಆರ್.ಇಂದಿರಾ, ಮೀನಾ ಮೈಸೂರು, ನಾ.ದಿವಾಕರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶ್ರೇಷ್ಠ ಸಂತ
ಡಾ.ಶ್ರೀ ಶಿವಕುಮಾರ ಸ್ವಾಮಿಗಳು



"ಸಮ ಸಮಾಜದ ನಿರ್ಮಾಣಕ್ಕೆ ಶಿಕ್ಷಣವೊಂದೇ ಸಂಜೀವಿನಿಯೆಂದು ಬಲವಾಗಿ ಪ್ರತಿಪಾದಿಸಿ, ಅದನ್ನು ಸ್ವತಃ ಕಾರ್ಯಾನುಷ್ಠಾನಕ್ಕೆ ತಂದು ಕೋಟ್ಯಾಂತರ ಮಕ್ಕಳ ಬಾಳು ಬೆಳಗಿದ ಶ್ರೇಷ್ಠ ಸಂತರು, ನಮ್ಮ ನಾಡಿನ ನಡೆದಾಡುವ ದೇವರು, ಡಾ. ಶ್ರೀ ಶಿವಕುಮಾರ ಸ್ವಾಮಿಗಳು. ಅವರು ಭೌತಿಕವಾಗಿ ನಮ್ಮೊಂದಿಗಿಲ್ಲದಿದ್ದರೂ ಅವರ ಆಚರಣೆ, ಚಿಂತನೆ, ಬೋಧನೆ ನಮ್ಮ ಬಾಳು ಬೆಳಗುತ್ತಿದೆ ಅಲ್ಲವೆ. ಆ ಮಹಾ ಪುರುಷರ ಜನ್ಮ ದಿನ ಸೋಮವಾರ(ಏ.1). ಅವರ ಸಂಸ್ಮರಣಾರ್ಥ ಈ ಒಂದು ಕಿರು ಲೇಖನ ನಮ್ಮ ಓದುಗರಿಗಾಗಿ



ಬ್ಯಾ.ರಾ.ಪ್ರಸನ್ನಕುಮಾರ್
ಮೊ.9206376889

ಶ್ರೀಗಳ ಮುತ್ತಿನಂತಹ ಪಂಚ ನುಡಿಗಳು

- ಸೇವೆ ಪ್ರಚಾರದ ವಸ್ತುವಲ್ಲ. ಅದು ವ್ಯಕ್ತಿಯಲ್ಲಿ ಅಂತರ್ಗತವಾಗಿ ಅವನನ್ನು ಸಂಜೀವಿಯಾಗಿ ಪೊರೆಯುತ್ತದೆ.
- ಹೆಣ್ಮಕ್ಕಳು ಸಂಸ್ಕಾರಯುತರಾದರೆ ಮಾತ್ರ ಸಮಾಜ ಮತ್ತು ಧರ್ಮ ಉಳಿಯುತ್ತದೆ.
- ನಾ ಮಾಡಿದೆ ಎನ್ನುವ 'ಅಹಂ' ಬಿಡು, ಶುದ್ಧ ಸೇವೆ ಮಾಡಿ ಶ್ರೇಷ್ಠನಾಗು.
- ನೋಟ ಪರಿಶುದ್ಧವಾಗಿರಲಿ, ಬದುಕು ಪವಿತ್ರವಾಗಲಿ.
- ಜನನಾಯಕರ ನಡವಳಿಕೆ ಉತ್ತಮವಾಗಿದ್ದರೆ ಆಡಳಿತವು ಶ್ರೇಷ್ಠವಾಗಿರುತ್ತದೆ.

ಏಳು ಶತಮಾನಗಳ ಇತಿಹಾಸವನ್ನು ಹೊಂದಿರುವ ಸಿದ್ಧಗಂಗಾ ಮಠ, ಬಸವಾದಿ ಶರಣರ ಜ್ಞಾನಾನ್ನ ದಾಸೋಹ ಪರಂಪರೆಯ ವಿರಕ್ತ ಮಠವಾಗಿದೆ. ಮಹಾ ತಪಸ್ವಿ ಶ್ರೀಮಠದ ಸ್ಥಾಪಕರಾದ ಗೋಸಲ ಸಿದ್ದೇಶ್ವರರ ತಪೋ ಪವಾಡದಿಂದ ಬಂಡೆಯಲ್ಲಿ ನೀರು ಚಿಮ್ಮಿ ಅವರ ತಪೋಕ್ಷೇತ್ರ ಸಿದ್ಧಗಂಗಾ ಮಠವಾಯಿತು. ತೋಂಟದ ಸಿದ್ಧಲಿಂಗೇಶ್ವರರ ನೆಚ್ಚಿನ ಭಕ್ತಿಯ ತಾಣವಾಗಿತ್ತು. ಶ್ರೀ ಅಟವಿಸ್ವಾಮಿಗಳು 1917ರಲ್ಲಿ ಸಂಸ್ಕೃತ ಪಾಠಶಾಲೆ, 1938ರಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿದರು. ಶ್ರೀ ಸಿದ್ದಲಿಂಗೇಶ್ವರ ಉಚಿತ ವಿದ್ಯಾರ್ಥಿ ನಿಲಯವು 1917ರಲ್ಲಿ ಪ್ರಾರಂಭವಾಯಿತು.

ಸಾಧೂನಾಂ ದರ್ಶನಂ ಪುಣ್ಯಂ
ತೀರ್ಥಭೂತ ಹಿ ಸಾಧವಃ
ಕಾಲೇನ ಫಲತೇ ತೀರ್ಥಂ
ಸದ್ಯಃ ಸಾಧು ಸಮಾಗಮ

ಸಾಧು ಸಂತರ ದರ್ಶನ ಪುಣ್ಯಕರವಾದುದು. ಸಂತರು ತೀರ್ಥೋದಕ ಸಮಾನರೆಂಬ ಸಂಸ್ಕೃತ ಶ್ಲೋಕದಂತೆ ಅರಿವಿನರಮನೆಯ ಅಭಿನವ ಅಲ್ಲಮ ಸಿದ್ಧಗಂಗಾ ಮಠವೆಂಬ ಮಹಾಮನೆಯ ಅಭಿನವ ಬಸವಣ್ಣ ಶತಮಾನದ ಸಂತ ಭುವನದ ಭಾಗ್ಯ ಯುಗ ಪ್ರವರ್ತಕ ಸಂತ ಜಗದ ದೀಪಧಾರಿ ಸಿದ್ಧಗಂಗೆಯ ಸಿರಿ ಪರಮ ಪೂಜ್ಯ ಜಗದ್ಗುರು ನಿರಂಜನ ಪ್ರಣವ ಸ್ವರೂಪಿ ಪದ್ಮಭೂಷಣ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಶ್ರೀಗಳು ಕುಳಿತಲ್ಲಿ ದೇವಮಂದಿರ, ನಡೆದ ಭೂಮಿಯೆಲ್ಲಾ ಪಾವನವಾಗಿದೆ.

ಪೂಜ್ಯರ ಬಾಲ್ಯ ಮತ್ತು ಶಿಕ್ಷಣ: ರಾಮನಗರ ಜಿಲ್ಲೆಯ ಮಾಗಡಿಯ ವೀರಾಪುರವೆಂಬ ಗ್ರಾಮದಲ್ಲಿ ಪಟೇಲ್ ಹೊನ್ನಪ್ಪ ಮತ್ತು ಗಂಗಮ್ಮ ದಂಪತಿಗಳಿಗೆ 01/04/1908ರ ಬ್ರಾಹ್ಮಿ ಮುಹೂರ್ತದಲ್ಲಿ ಜನಿಸಿದ ಶೈವ ಸಂತನೆ ಶಿವಣ್ಣ. ವೀರಾಪುರದ ಕೂಲಿಮಠದ ಮರಳಿನ ಮೇಲೆ ಅಕ್ಷರ ತಿದ್ದಿ ಪಾಲನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, 1922ರಲ್ಲಿ ಸಿದ್ಧಗಂಗಾ ಮಠದಲ್ಲಿದ್ದುಕೊಂಡು ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್‌ನಲ್ಲಿ 1927ರಲ್ಲಿ ಪ್ರಥಮ ಶ್ರೇಣಿ ಪಡೆದರು. ಗುಬ್ಬಿ ತೋಟದಪ್ಪ ಹಾಸ್ಟೆಲ್‌ನಲ್ಲಿದ್ದು ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿ 1930ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿ, 1965ರಲ್ಲಿ ಕರ್ನಾಟಕ ವಿ.ವಿಯಿಂದ ಡಿ.ಲಿಟ್ ಪಡೆದು ಬೆಂಗಳೂರಿನಲ್ಲಿದ್ದಾಗಲೂ ಸಿದ್ಧಗಂಗಾ ಮಠದ ಹಿರಿಯ ಪೂಜ್ಯರಾದ ಉದ್ದಾನ ಶಿವಯೋಗಿಗಳು ಮತ್ತು ಕಿರಿಯ ಶ್ರೀಗಳಾದ ಮರುಳಾಧ್ಯರ ಆತ್ಮೀಯ ಒಡನಾಡಿಗಳಾಗಿದ್ದರು.

ಪೂಜ್ಯರ ಪೀಠಾರೋಹಣ: ಶ್ರೀಮಠದ ಉತ್ತರಾಧಿಕಾರಿಗಳಾಗಿದ್ದ ಪೂಜ್ಯ ಮರುಳಾರಾಧ್ಯಸ್ವಾಮಿಗಳು ಶಿವೈಕ್ಯರಾದ ಮೇಲೆ ಉದ್ದಾನ ಮಹಾಸ್ವಾಮಿಗಳು ಶಿವಣ್ಣ ನೀನೇ ಶ್ರೀಮಠದ ಎಲ್ಲಾ ಜವಾಬ್ದಾರಿಯನ್ನು ವಹಿಸಿಕೋ ಎಂದರು. ಇದು ಸಿದ್ಧಲಿಂಗೇಶ್ವರನ ಕೃಪಾಶೀರ್ವಾದವಾಗಿರುವುದರಿಂದ ನಮಸ್ಕಾರ ಹಾಕಿಬಿಡು (ಒಪ್ಪಿಕೋ) ಎಂದರು. ಹೀಗೆ ಅನಿರೀಕ್ಷಿತ ಆದೇಶದಿಂದ ಲೋಕೋದ್ಧಾರದ ಜಂಗಮ ಕಂಕಣ ತೊಟ್ಟು 22ರ ಹರಯದಲ್ಲಿ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳೆಂಬ ನಾಮಾಂಕಿತದಿಂದ ಶಿವದೀಕ್ಷೆ ಪಡೆದು 1930 ಮಾರ್ಚ್ 3ರಂದು ಸಿದ್ಧಗಂಗೆಯ ವಿರಕ್ತ ಮಠದ ಪೂಜ್ಯರ ಪೀಠಾರೋಹಣವಾಯಿತು. 1941ರ ಜನವರಿ 11ರಂದು ಉದ್ದಾನ ಶಿವಯೋಗಿಗಳು ಶಿವೈಕ್ಯರಾದ ಮೇಲೆ ಸಂಪೂರ್ಣವಾಗಿ ಲೋಕಸಂಗ್ರಹ ಕಾಯಕಕ್ಕೆ ಸಮರ್ಪಿತವಾದರು.

ಪೂಜ್ಯರ ಶಿಸ್ತಿನ ದಿನಚರಿ: ಹಳೆಮಠ, ಮಠದ ಕಚೇರಿ, ಅಡುಗೆ ಮನೆ, ಪ್ರಸಾದ ನಿಲಯ, ಶಾಲೆಗೆ ಮಧ್ಯಭಾಗದಲ್ಲಿದ್ದ ಸಿದ್ಧಗಂಗಾ ಮಠದ ಮಾರ್ಕಂಡೇಯ ನಿಲಯದಲ್ಲಿ ಉಳಿದುಕೊಂಡು ರಾತ್ರಿ ಎರಡುವರೆ ಗಂಟೆಗೆ ಎದ್ದು ಹಳೆ ಮಠದಲ್ಲಿ ಪೂಜೆ ಪ್ರಸಾದ ಮುಗಿಸಿ ಐದುವರೆಗೆ ಅಲ್ಲಿಂದ ಹೊರಬರುತ್ತಿದ್ದರು. ಇನ್ನು ಉಳಿದ ಸಮಯ ಶಿವಶರಣರ ಬಗ್ಗೆ ಅಧ್ಯಯನ, ದಿನಪತ್ರಿಕೆಗಳ ಅವಲೋಕನ, ಭಕ್ತರ ಭೇಟಿ, ವಿದ್ಯಾರ್ಥಿಗಳೊಂದಿಗೆ ಸಂವಾದ ಸಾಮೂಹಿಕ ಪ್ರಾರ್ಥನೆ ಗಣ್ಯರೊಂದಿಗೆ ಮಾತುಕತೆ ಇಷ್ಟೆಲ್ಲಾ ಚಟುವಟಿಕೆಗಳು ಮುಗಿಯುವ ಹೊತ್ತಿಗೆ ಹೊತ್ತು ರಾತ್ರಿ 11ರ ನಂತರವೇ ತಪೋನಿದ್ರೆಗೆ ತೆರಳುತ್ತಿದ್ದರು.

ನಡೆದಾಡುವ ದೇವರಿಗೆ ಮಕ್ಕಳೇ ದೇವರು: 1975ರಲ್ಲಿ ಶಾಲೆ ತೆರೆದಾಗ 2000 ಮಕ್ಕಳಿದ್ದರು. ಇಂದು ಬಾಲವಾಡಿಯಿಂದ ಉನ್ನತ, ತಾಂತ್ರಿಕ, ತಾಂತ್ರಿಕೇತರ, ವೈದ್ಯಕೀಯ, ವೈದ್ಯಕೀಯೇತರ, ಕೌಶಲ್ಯಾಧಾರಿತ ಜನಶಿಕ್ಷಣ, ಶಿಕ್ಷಕ ತರಬೇತಿ ಸಂಸ್ಥೆ ಹೀಗೆ 156ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು 43505 ವಿದ್ಯಾರ್ಥಿಗಳು 4000 ನೌಕರರು ಮತ್ತವರ ಕುಟುಂಬವನ್ನು ಶ್ರೀಮಠವು ಪೊರೆಯುತ್ತಿದೆ. ಶಾಲೆಯ ಮಕ್ಕಳಿಗೆ ತಂದೆತಾಯಿಯಾಗಿ, ಶಿಕ್ಷಣವರಸಿ ಬಂದ ಮಕ್ಕಳಿಗೆ ಮನೆಯ ಮರೆಸಿ ಕಲಿಕೆ ಕಡೆಗೆ ಮನಸ್ಸನ್ನು ಕೇಂದ್ರೀಕರಿಸುವ ಗುರುವಾಗಿ, ಸತ್ಯನಿಷ್ಠೆ ಕಾಯಕದ ಮಾರ್ಗದರ್ಶಕರಾಗಿ, ಮೌಲ್ಯಯುತ ಸಮಾಜದ ನಿರ್ಮಾಪಕರಾಗಿ, ಸದೃಢ ಶಿಕ್ಷಣದ ಪ್ರೇರಕರಾಗಿ, ಸರಳ ಸಂಪನ್ನತೆಯ ದಾರ್ಶನಿಕನಾಗಿ 21ನೆಯ ಶತಮಾನದ ಶಿಕ್ಷಣ, ಧರ್ಮ, ಸಮಾಜ ಸುಧಾರಕ ಸಂತನಾಗಿ ನಿತ್ಯ ನಿರಂಜನ ಪ್ರಣವ ಸ್ವರೂಪಿಯಾಗಿ ಎಂದೆಂದಿಗೂ ಅಜರಾಮರ ನಕ್ಷತ್ರವಾಗಿ ಅಚಂದ್ರಾರ್ಕ ಜನರ ಹೃದಯ ಮಾನಸದಲ್ಲಿ ನಡೆದಾಡುವ ದೇವರಾದರು.

ಮಹಾ ದಾಸೋಹಿ: ಅಟವಿ ಮಹಾಸ್ವಾಮಿಗಳು ಭಕ್ತರ ಅನ್ನ ದಾಸೋಹಕ್ಕಾಗಿ ಹಚ್ಚಿದ ಒಲೆ ಆರದೆ ಇಂದಿಗೂ ಉರಿಯುತ್ತಿದೆ. ದಾಸೋಹ ಪದದ ಅರ್ಥವೇ ಶಿವಕುಮಾರಸ್ವಾಮಿಗಳು ಸರ್ವ ಸಮಾನತೆಯಿಂದ ಒಟ್ಟಿಗೆ ಕುಳಿತು ಉಣ್ಣುವ ಆನಂದದ ಭಾಗ್ಯವನ್ನು ನೀಡಿ 12ನೆಯ ಶತಮಾನದ ದಾಸೋಹಕ್ಕೆ ಮರುಜನ್ಮ ನೀಡಿ ತ್ರಿವಿಧ ದಾಸೋಹಿಗಳಾದರು.

ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಶ್ರೀಗಳು ಲಿಂಗೈಕ್ಯವಾದ ದಿನವನ್ನು ದಾಸೋಹ ದಿನವೆಂದು ಘೋಷಿಸಿ ಪ್ರತಿ ವರ್ಷ ಜನವರಿ 21ನ್ನು ದಾಸೋಹ ದಿನವನ್ನಾಗಿ ಕರ್ನಾಟಕ ಸರ್ಕಾರ ಆಚರಿಸುತ್ತಿದೆ. ಬಸವಣ್ಣ ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದರು, ಮನವಿಡಿದು ದಾಸೋಹವ ಮಾಡಿ ಲಿಂಗ ಪ್ರಸಾದಿಯಾದರು, ಧನವಿಡಿದು ದಾಸೋಹವ ಮಾಡಿ ಜಂಗಮ ಪ್ರಸಾದಿಯಾದರು ಎನ್ನುವ ಸಿದ್ಧರಾಮರ ವಚನವನ್ನು ಶಿವಕುಮಾರ ಶ್ರೀಗಳಿಗೂ ನೇರವಾಗಿ ಅನ್ವಯಿಸಬಹುದಾಗಿದೆ.


ಸುತ್ತೂರು ಮಠ ಮತ್ತು ಶ್ರೀಗಳು: ಶ್ರೀಗಳ ಪಟ್ಟಾಧಿಕಾರದ ದಿನದಿಂದಲೂ ಸುತ್ತೂರು ಮಠದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಉಭಯ ಶ್ರೀಗಳು ನಡೆಸುವ ಸಮಾಜಮುಖಿ ಧಾರ್ಮಿಕ ಶೈಕ್ಷಣಿಕ ಕಾಯಕಗಳಲ್ಲಿ ಪರಸ್ಪರ ಸಹಕಾರ, ಸಲಹೆ, ಮಾರ್ಗದರ್ಶನಗಳನ್ನು ಭಕ್ತರ ಆಶಯದಂತೆ ಇಂದಿಗೂ ನಡೆಸಿಕೊಂಡು ಬರುತ್ತಿರುವುದು ಸಂತೋಷದ ವಿಷಯವಾಗಿದೆ.

ದೊರೆಯಲಿ ಭಾರತ ರತ್ನ: ಯಾವುದೇ ಫಲಾಪೇಕ್ಷೆಯಿಲ್ಲದೆ ಸರ್ವಸಂಗ ಪರಿತ್ಯಾಗಿಯಾಗಿ ಮಾನವ ಕಲ್ಯಾಣಕ್ಕಾಗಿ ಸಮರ್ಪಿಸಿಕೊಂಡಿದ್ದ ಶ್ರೀಗಳಿಗೆ 2007ರಲ್ಲಿ 'ಕರ್ನಾಟಕ ರತ್ನ ಪ್ರಶಸ್ತಿ' ಮತ್ತು 2015ರಲ್ಲಿ 'ಪದ್ಮಭೂಷಣ' ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಇಷ್ಟಾದರೂ 'ಭಾರತ ರತ್ನ' ಪ್ರಶಸ್ತಿಯನ್ನು ನೀಡದಿರುವುದು ಭಕ್ತರಿಗೆ ನೋವಾಗಿದೆ.

ಪೂಜ್ಯರ ಬದುಕೇ ದೊಡ್ಡ ಸಂದೇಶ: 21/01/2019ರಂದು ಶ್ರೀಗಳ ದಿವ್ಯಚೇತನ ಲೋಕದಿಂದ ನಿರ್ಗಮಿಸಿತು. ಈಗ ಶಿಕ್ಷಣ ಶ್ರೀಮಂತರ, ಕೊಳಕು ರಾಜಕಾರಣಿಗಳ, ಬಂಡವಾಳಶಾಹಿಗಳ, ಭ್ರಷ್ಟ ಅಧಿಕಾರಿಗಳ ಲಾಬಿಯಾಗಿ, ಕಪ್ಪುಹಣ ಬಿಳುಪಾಗಲು ಅಧಿಕೃತ ಹವಾಲ ಹಣದ ಕೇಂದ್ರವಾಗಿ ವಿದ್ಯಾರ್ಥಿ ಮತ್ತು ಪೋಷಕರನ್ನು ಕಂಗೆಡಿಸಿ, ಕಲಿಕೆ ವ್ಯಾಪಾರವಾಗಿರುವ ಸಂದರ್ಭದಲ್ಲಿ ಪರಮ ಪೂಜ್ಯರ ಬದುಕಿನ ಸಂದೇಶವನ್ನು ನಾವು ಅರ್ಥ ಮಾಡಿಕೊಂಡು ಆತ್ಮಾವಲೋಕನಕ್ಕಾಗಿ ಅವರ ಬದುಕಿನ ತತ್ವವನ್ನು ನಮ್ಮ ಹೃದಯಗಳಲ್ಲಿ ಸ್ಥಾಪಿಸಿಕೊಳ್ಳುವ ಅಗತ್ಯವಿದೆ. ಈಗಿನ ಪರಮಪೂಜ್ಯರಾದ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು ಶಿವಕುಮಾರಸ್ವಾಮಿಗಳ ಆದರ್ಶವನ್ನು ಪಾಲಿಸಿಕೊಂಡು ಬರುತ್ತಿರುವುದು ಶ್ರೀಮಠದ ಬಗ್ಗೆ ಭಕ್ತರ ಅಭಿಮಾನ ನೂರ್ಮಡಿಯಾಗಿದೆ.

ಮಕ್ಕಳ ಚಿತ್ರಕಥೆ
ನೀವೆಲ್ಲರೂ ಏಕೆ ಸಾಲುಗಟ್ಟಿ ನಿಂತಿದ್ದೀರಿ..?


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



(1) ಅಥೆನ್ಸ್ ನಗರದಲ್ಲಿ ಒಮ್ಮೆ ಸುಮಾರು 7 ಅಥವಾ 8 ವರ್ಷದ ಪುಟ್ಟ ಬಾಲಕ ನಡೆದುಕೊಂಡು ಹೋಗುತ್ತಿರುತ್ತಾನೆ. ಆ ಬಾಲಕ ರಸ್ತೆಯ ಒಂದು ಬದಿ ನೋಡಿದಾಗ ಒಂದಷ್ಟು ಜನ ಸಾಲುಗಟ್ಟಿ ನಿಂತಿದ್ದರು.

(2) ಅವರ ಬಳಿ ಹೋಗಿ "ಈ ರೀತಿ ಏಕೆ ಸಾಲುಗಟ್ಟಿ ನಿಂತಿದ್ದೀರಿ, ಏನು ಕೊಡುತ್ತಾರೆ...?" ಎಂದು ಪ್ರಶ್ನಿಸಿದ. ಅದಕ್ಕೆ ಸಾಲಿನಲ್ಲಿ ನಿಂತವನೊಬ್ಬ "ಇಲ್ಲೇನು ಕೊಡುವುದಿಲ್ಲಾ...ಇಲ್ಲೊಬ್ಬ ಖ್ಯಾತ ಜ್ಯೋತಿಷಿ ಬಂದಿದ್ದಾರೆ..ಕೈ ನೋಡಿ ಭವಿಷ್ಯ ಹೇಳುತ್ತಾರೆ..ಹಸ್ತ ಸಾಮುದ್ರಿಕರು ಎಂದು ಕರೆಯುತ್ತಾರೆ ಅವರನ್ನ.. ಹಾಗಾಗಿ ನಾವುಗಳೂ ಕೂಡ ನಮ್ಮ ನಮ್ಮ ಭವಿಷ್ಯ ಕೇಳಬೇಕೆಂದು ನಿಂತಿದ್ದೇವೆ...!"ಎಂದ.

(3) ಆ ಬಾಲಕ "ನಾನೂ ನಿಂತುಕೊಳ್ಳುತ್ತೇನೆ ಹಾಗಾದರೆ...!" ಎಂದ. ಅದಕ್ಕೆ ಅಲ್ಲಿದ್ದವರೆಲ್ಲಾ ಬೇಡ ಮಗೂ.. ನೀನಿನ್ನೂ ಚಿಕ್ಕವ.. ದೊಡ್ಡವನಾಗು ಆಮೇಲೆ ಭವಿಷ್ಯ ಕೇಳು...!" ಎಂದರು. ಆಗ ಆ ಹುಡುಗ "ದೊಡ್ಡವನಾದ ಮೇಲೆ ಕೇಳಿ ಪ್ರಯೋಜನವೇನು..? ನಾನು ಈಗಲೇ ಭವಿಷ್ಯ ಕೇಳಬೇಕು... ಅದರ ಪ್ರಕಾರ ಜೀವನವನ್ನ ಬದಲಾಯಿಸಿಕೊಳ್ಳಬೇಕಲ್ಲಾ,,,!" ಎಂದ.



(4) ಅಲ್ಲಿದ್ದವರೆಲ್ಲಾ "ಸರಿ, ಹಾಗಾದರೆ ನೀನೂ ನಿಲ್ಲು..!" ಎಂದರು. ಬಹಳ ಸಮಯ ತಾಳ್ಮೆಯಿಂದ ಕಾಯುತ್ತಾ ನಿಂತುಕೊಂಡ ಆ ಪುಟ್ಟ ಬಾಲಕ. ಒಬ್ಬೊಬ್ಬರಾಗಿ ತಮ್ಮ ತಮ್ಮ ಭವಿಷ್ಯ ಕೇಳಿಕೊಂಡು ಹೊರಡುತ್ತಿದ್ದರು, ಕಡೆಗೆ ಇವನ ಸರದಿ ಬಂತು. ಒಂದಾದ ಮೇಲೊಂದು ಜನರ ಕೈ ನೋಡುತ್ತಿದ್ದ ಹಸ್ತ ಸಾಮುದ್ರಿಕನ ಮುಂದೆ ತನ್ನ ಪುಟ್ಟ ಕೈ ಚಾಚಿದ. ಆಗ ಹಸ್ತ ಸಾಮುದ್ರಿಕ ಕಿರುನಗೆ ಸೂಸುತ್ತಾ "ನೀನಿನ್ನೂ ಸಣ್ಣವ,, ದೊಡ್ಡವನಾದಮೇಲೆ ಬಾ, ಈಗ ಹೋಗು...!" ಎಂದ.

(5) ತಕ್ಷಣ ಆ ಬಾಲಕ "ದೊಡ್ಡವನಾದ ಮೇಲೆ ಕೇಳಿ ಏನೂ ಪ್ರಯೋಜನವಿಲ್ಲಾ...ನಾನು ಮುಂದೆ ಏನಾಗುತ್ತೇನೆ ಎಂದು.. ಈಗಲೇ ಹೇಳಿ..!" ಎಂದ. ಹಸ್ತ ಸಾಮುದ್ರಿಕ ಕೈ ನೋಡಿದ ಆಶ್ಚರ್ಯವಾಯಿತು ಅವನಿಗೆ. ಬಳಿಯಲ್ಲೇ ಇದ್ದ ಬಿಳಿ ಪುಡಿಯನ್ನು ಹಚ್ಚಿ 5 ನಿಮಿಷ ನೋಡಿದ. ಆ ಬಾಲಕನಿಗೆ "ಏನು ಕೈ ನಿನ್ನದು..? ಇಂತಹ ಕೈಯನ್ನು ನನ್ನ ಜೀವನದಲ್ಲಿಯೇ ನೋಡಿರಲ್ಲಿಲ್ಲಾ.... ಅದ್ಭುತವಾದ ಕೈ. ಇದು..ಚಕ್ರವರ್ತಿ ಹಸ್ತ. ನೀನು ಚಕ್ರವರ್ತಿಯಾಗಬೇಕಾದ ಹುಡುಗ ಕಣೋ..! ಆದರೆ ಏನು ಮಾಡುವುದು....? ಇಲ್ಲೊಂದು ಗೆರೆ ಇಲ್ಲಾ ನೋಡು ನಿನಗೆ... ಆ ಗೆರೆ ಇದ್ದಿದ್ದರೆ ನೀನು ಖಂಡಿತ ಚಕ್ರವರ್ತಿಯೇ ಆಗುತ್ತಿದ್ದೆ, ಬೇರೆ ದಾರಿಯೇ ಇಲ್ಲಾ... ಆದರೆ ಏನು ಮಾಡುವುದು..? ನಿನಗೆ ದೈವಬಲ ಇಲ್ಲವಲ್ಲಾ...!" ಎಂದ.

(6) ಆ ಹುಡುಗ ತಕ್ಷಣ ಎದ್ದುನಿಂತು ಆ ಜ್ಯೋತಿಷಿ ನೋಡುತ್ತಿರುವ ಹಾಗೆಯೇ ತನ್ನ ಜೇಬಿನಿಂದ ಒಂದು ಹರಿತವಾದ ಚಾಕು ತೆಗೆದು "ಎಲ್ಲಿರಬೇಕಿತ್ತು ಹೇಳಿ ಆ ಗೆರೆ...? ಇಲ್ಲಿರಬೇಕಿತ್ತಾ...?" ಎಂದು ಕೇಳುತ್ತಲೇ ಸರ್ರನೇ ಕೊಯ್ದುಕೊಂಡುಬಿಟ್ಟ, ಚಿಲ್ಲೆಂದು ರಕ್ತ ಚಿಮ್ಮಿಬಿಟ್ಟಿತು. ಆ ಜ್ಯೋತಿಷಿ ಗಾಬರಿಯಾಗಿಬಿಟ್ಟ ಕೈಯಲ್ಲಿ ರಕ್ತ ಹರಿಯುತ್ತಿದೆ, ಚಾಕುವಿನಿಂದ ರಕ್ತ ತೊಟ್ಟಿಕ್ಕುತ್ತಿದೆ... ಆದರೆ ಹುಡುಗನ ಕಣ್ಣಲ್ಲಿ ಮಿಂಚು ಕಡಿಮೆಯಾಗಿಲ್ಲ. ಅದನ್ನು ನೋಡಿ ಜ್ಯೋತಿಷಿ ಹೇಳಿದನಂತೆ "ಮಹಾರಾಯ ನಿನ್ನ ಮನಸ್ಸಿನಲ್ಲಿ ಈ ಗಟ್ಟಿತನ ಇದ್ದರೆ, ಛಲ ಇದ್ದರೆ, ನಿನಗೆ ಯಾವ ಗೆರೆಯೂ ಬೇಕಾಗಿಲ್ಲಾ. ನೀನು ಖಂಡಿತ ಚಕ್ರವರ್ತಿಯಾಗುತ್ತೀಯಾ ಹೋಗು...!" ಎಂದುಬಿಟ್ಟ. ಆ ಹುಡುಗ ಮುಂದೆ ಬೆಳೆದು "ಅಲೆಕ್ಸಾಂಡರ್ ದಿ ಗ್ರೇಟ್ ಆದ". ಅದೂ ಸಹ ತನ್ನ ಕೇವಲ 36ನೇ ವಯಸ್ಸಿಗೆ.

ನೀತಿ:– ಕೈ ಯಲ್ಲಿ ಗೆರೆ ಮುಖ್ಯ ಅಲ್ಲ... ಮನಸ್ಸಲ್ಲಿ ನಂಬಿಕೆ, ಶ್ರದ್ದೆ ಮುಖ್ಯ. ನಿಮ್ಮ ಮನಸ್ಸಿನಲ್ಲಿ ಶ್ರದ್ದೆ ಇದೆಯಾ, ನೀವೂ ಪ್ರಯತ್ನ ಮಾಡಿ ನಿಮಗೆ ಆಗದೇ ಇರುವಂತಹುದು ಯಾವುದೂ ಇಲ್ಲಾ. ದೌರ್ಬಲ್ಯಕ್ಕೆ ಮದ್ದು, ನಮ್ಮ ದೌರ್ಬಲ್ಯವನ್ನೇ ಕುರಿತು ಯೋಚಿಸುವುದಲ್ಲಾ...! ನಮ್ಮಲ್ಲಿರುವ "ಅನಂತಶಕ್ತಿ" ಕುರಿತು ಚಿಂತಿಸುವುದು.



ವಾರಭವಿಷ್ಯ
31.03.2024 ರಿಂದ 6.04.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮೀನ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ–ಕುಂಭ, ಬುಧ–ಮೇಷ, ಗುರು–ಮೇಷ, ಶುಕ್ರ–ಕುಂಭ, ಮೀನ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಆಕಸ್ಮಿಕ ಘಟನೆಗಳು ಸಂಭವಿಸುತ್ತವೆ. ಬಂದ ಜನರ ವಿರೋಧ, ಪರಸ್ಥಳಕ್ಕೆ ಪ್ರಯಾಣ, ಶರೀರಾಲಸ್ಯ, ಧಾತುಕ್ಷಯ ಹಾಗೂ ನಿರ್ಬಲತೆ, ವಾರ ಮಧ್ಯಾನಂತರ ಯತ್ನ ಕಾರ್ಯ ಜಯ, ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಲಭಿಸುತ್ತದೆ. ಆಜ್ಞಾ ಸಿದ್ಧಿ. ನೂತನ ವಸ್ತ್ರಾಭರಣ ಪ್ರಾಪ್ತಿ, ಹೊಸ ಮಿತ್ರರ ಪರಿಚಯ, ಮನೋರಂಜನಾ ವೆಚ್ಚಗಳು ಹೆಚ್ಚಾಗುವುದು.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ–1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶರೀರ ಸೌಖ್ಯ, ಆರೋಗ್ಯ ಭಾಗ್ಯವು ಅಧಿಕಾರಿ ವರ್ಗದವರಿಂದ ಸಹಾಯ. ಗುರುತರವಾದ ಕೆಲಸಗಳು ಸೋಪಾನವಾಗಿ ನಡೆಯುವುದು. ವಾಹನ ಖರೀದಿಯ ಬಯಕೆ ಈಡೇರುವುದು. ಮೃಷ್ಟಾನ್ನ ಭೋಜನ ಹಾಗೂ ಸ್ತ್ರೀ ಸೌಖ್ಯವು. ವಾರದ ಉತ್ತರಾರ್ಧಕ್ಕೆ ಶತ್ರು ರೋಗಾದಿ ನಾಶ. ಪುಣ್ಯ ಕೆಲಸಗಳಲ್ಲಿ ಆಸಕ್ತಿ. ವಾರಾಂತ್ಯಕ್ಕೆ ಅಜೀರ್ಣ ಬಾಧೆ, ತಲೆ ತಿರುಗುವಿಕೆ ಕಾಡಬಹುದು.

ಶ್ರೀದೇವಿ ದರ್ಶನ, ಶುಭ ಸಂಖ್ಯೆ–9.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಕಷ್ಟಪಟ್ಟಿದ್ದರ ಫಲ ದೊರೆಯಲಿದೆ. ವ್ಯಾಪಾರ, ವ್ಯವಹಾರಗಳು ಲಾಭದಲ್ಲಿ ನಡೆಯುವುದು. ವಿವಾಹಾಕಾಂಕ್ಷಿಗಳ ಮುಖದಲ್ಲಿ ಹರುಷದ ನಕ್ಷತ್ರ ಮಿನುಗಲಿದೆ. ಸಜ್ಜನರ ಸಹವಾಸದಿಂದ ಜ್ಞಾನ ವೃದ್ಧಿ, ಉನ್ನತ ಶಿಕ್ಷಣಾರ್ಥಿಗಳಿಗೆ ಸಫಲತೆ ದೊರೆಯಲಿದೆ. ಹೊಸ ಯೋಜನೆಗಳ ಸಾಕಾರಕ್ಕೆ ದೈವಾನುಕೂಲವಿದೆ. ವಾರದ ಕಡೆಗೆ ಅನಾರೋಗ್ಯ ಕಾಡಬಹುದು.

ಶ್ರೀ ವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ–4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆರಂಭದಲ್ಲಿ ದಿಢೀರ್ ಧನಲಾಭವಾಗುವ ಸಂಭವ. ಪ್ರಮುಖ ವ್ಯಕ್ತಿಗಳಿಂದ ಮಹತ್ವದ ಮಾಹಿತಿ ದೊರೆತರೂ ಕಾರ್ಯಗಳು ಮುಂದೂಡಲ್ಪಡುತ್ತವೆ. ಆಫೀಸ್ ಕೆಲಸದ ಹೊರೆ ಹೆಚ್ಚಾಗುವುದು. ಗೃಹ ನಿರ್ಮಾಣ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ವಾರದ ಉತ್ತರಾರ್ಧಕ್ಕೆ ಹಣಕಾಸಿನ ವ್ಯವಹಾರ ಸುಗಮವಾಗಿ ಸಾಗುವುದು. ಮನೆ ಮಂದಿಯೊಂದಿಗೆ ಪವಿತ್ರ ಸ್ಥಳಗಳಿಗೆ ಭೇಟಿ ನೀಡುತ್ತೀರಿ.

ಶ್ರೀ ದುರ್ಗಾಪಾದ ಸೇವನೆ. ಶುಭ ಸಂಖ್ಯೆ–5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ತಪ್ಪನ್ನು ಅವಲೋಕಿಸಿಕೊಂಡು ಮುಂದಕ್ಕೆ ಸಾಗಿರಿ. 'ಶ್ರದ್ಧಾವಾನ್ ಲಭತೇ ಫಲಂ' ಎಂಬ ಆರ್ಯೋಕ್ತಿಯಂತೆ ನಿಮ್ಮ ನಿರಂತರ ಪರಿಶ್ರಮ ಫಲ ನೀಡಲಿದೆ. ಗಣ್ಯ ವ್ಯಕ್ತಿಗಳ ಪರಿಚಯ ಉಂಟಾಗುತ್ತದೆ. ವಿಚಾರಣಾಧೀನ ಉದ್ಯೋಗಿಗಳು ಹಿರಿಯ ಅಧಿಕಾರಿಗಳೊಂದಿಗೆ ವಿವಾದಗಳನ್ನು ಬಗೆಹರಿಸಿಕೊಳ್ಳಬಹುದು. ಕ್ರಯ–ವಿಕ್ರಯಗಳಿಗೆ ಅನುಕೂಲಕರ ಸಮಯ, ನೆರೆಹೊರೆಯಲ್ಲಿ ಸೌಹಾರ್ದತೆ ಇರಲಿ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–6.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಹೊಸ ವೃತ್ತಿ ದೊರೆಯುವುದು. ಅನ್ಯ ಕ್ಷೇತ್ರವಾಸದಿಂದ ಶಾರೀರಿಕವಾಗಿ ತೊಂದರೆ, ಅನ್ನಪಾನಗಳಲ್ಲಿ ಲೋಪ ಉಂಟಾಗುವುದು. ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕುಂಠಿತವಾಗುವುದು. ಹೊಸ ಹೂಡಿಕೆಗಳನ್ನು ಅನುಭವವಿಲ್ಲದೆ ಮಾಡಿ ಕೈ ಸುಟ್ಟುಕೊಳ್ಳದಿರಿ. ಸಂಬಂಧಿಕರೊಂದಿಗೆ ಸೌಹಾರ್ದತೆ ಹೆಚ್ಚಾಗುತ್ತದೆ. ವಿವಾಹ ಸಂಬಂಧಿ ಮಾತುಕತೆಗಳು ಮುಂದೂಡಲ್ಪಡುತ್ತವೆ. ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಧನಲಾಭವಾಗುವುದು.

ಶ್ರೀ ವೆಂಕಟೇಶ್ವರ ಉಪಾಸನೆ. ಶುಭ ಸಂಖ್ಯೆ–3

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ಅದ್ಭುತ ಕ್ರಿಯಾಶಕ್ತಿಯಿಂದ ಜೀವನದಲ್ಲಿ ಎದುರಾಗುವ ಎಲ್ಲಾ ಸಮಸ್ಯೆಗಳನ್ನು ಜಾಣತನದಿಂದ ನಿಭಾಯಿಸುವಿರಿ. ವಿವಾಹಯೋಗ್ಯರಿಗೆ ವನಿತಾರತ್ನ ದೊರೆಯುವ ಸಾಧ್ಯತೆ ಇದೆ. ಹೊಸ ವೃತ್ತಿ ಆರಂಭಿಸಲು ಬ್ಯಾಂಕ್ ಹಣಕಾಸು ಸಹಾಯ ದೊರೆಯುವುದು. ಜ್ಯುವೆಲ್ಲರಿ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರದಿಂದ ಅಧಿಕ ಧನಲಾಭವಾಗುವುದು.

ಶ್ರೀ ತ್ರಿಪುರ ಸುಂದರಿ ಧ್ಯಾನ. ಶುಭ ಸಂಖ್ಯೆ–1

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

'ಕೈಕೆಸರಾದರೆ ಬಾಯಿ ಮೊಸರು'. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ. 'ಮುಂದಾಗಬೇಕಾಗಿರುವ ಸಾಧನೆಯತ್ತ ನೋಡಿ, ಖರ್ಚು–ವೆಚ್ಚಗಳು ಹೆಚ್ಚಾದರೂ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಸಮಯಕ್ಕೆ ಸರಿಯಾಗಿ ಹಣ ಒದಗುವುದು. ಸಣ್ಣ ಕೈಗಾರಿಕೆಯವರಿಗೆ ಹೆಚ್ಚಿನ ಆರ್ಡರ್‌ಗಳು ಬರಲಿದೆ. ಗುಪ್ತ ವಿದ್ಯೆ ಕಲಿಯಲು ಆಸಕ್ತಿ ಉಂಟಾಗುವುದು.

ಶ್ರೀ ಯೋಗ ನರಸಿಂಹ ದರ್ಶನ. ಶುಭ ಸಂಖ್ಯೆ–8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಶುಭ ಫಲಗಳು, ವ್ಯಾಪಾರ, ವಹಿವಾಟುಗಳು ಹೆಚ್ಚಿನ ಧನಲಾಭವನ್ನು ತರುವುದು. ಶಿಕ್ಷಣಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಕ್ಕೆ ಪ್ರಯಾಣ ಮಾಡುವ ಸಾಧ್ಯತೆ ಇರುತ್ತದೆ. ಸಾಮಾಜಿಕ ಸೇವೆಯಿಂದ ಪ್ರಸಿದ್ಧಿಗೆ ಬರುವಿರಿ, ರಾಹುಗ್ರಹ ಅಶುಭ ಇರುವುದರಿಂದ ಯಾವುದೇ ಹುಚ್ಚು ಸಾಹಸಕ್ಕೆ ಕೈ ಹಾಕದಿರಿ. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಪ್ತಾಹದ ಆದಿಗೆ ಚಂದ್ರಗ್ರಹದ ಶುಭ ಸಂಚಾರದಿಂದ ನಿಮ್ಮಲ್ಲಿ ಉತ್ತಮ ಚಿಂತನೆಗಳೂ, ವ್ಯಾವಹಾರಿಕವಾಗಿ ಚುರುಕು ಬುದ್ಧಿಯೂ ಕಂಡು ಬರುವುದು. ನಿಮ್ಮ ಸುತ್ತ ಅಸೂಯಾಪರರು ಇದ್ದು ನಿಮ್ಮ ಉತ್ತಮ ಕೆಲಸವನ್ನು ಕೆಡಿಸಬಹುದು. ಯಾವ ಕಾರಣಕ್ಕೂ ಭಾವೋದ್ವೇಗಕ್ಕೆ ಗುರಿಯಾಗದಿರಿ. ಆಸೆಗಳಿಗೆ ಕಡಿವಾಣ ಹಾಕಿದರೆ ದುಂದು ವೆಚ್ಚಗಳು ತಾನಾಗಿಯೇ ನಿಲ್ಲುವುದು.

ಶ್ರೀ ಶನಿಸ್ತುತಿ ಶುಭ ಸಂಖ್ಯೆ–4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಪೂರ್ವಾಪರ ಚಿಂತಿಸದೆ ಮಾಡುವ ಕೆಲಸದಿಂದ ಧನ ನಷ್ಟಕ್ಕೆ ಗುರಿಯಾಗುವಿರಿ. ಸ್ಥಿರಾಸ್ತಿ ಕ್ರಯ ವಿಕ್ರಯದ ಮಾತುಗಳು ಮುಂದೂಡಲ್ಪಡುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳಿಂದ ಬಿಸಿ ಮುಟ್ಟಲಿದೆ. ನಿಮ್ಮವರೇ ದುಃಖಕ್ಕೆ ಕಾರಣವಾಗಬಹುದು. ರಾಜಕೀಯದವರಿಗೆ ವಿರೋಧಗಳು, ಟೀಕೆಗಳು ಹೆಚ್ಚಾಗುವುದು. ಆರೋಗ್ಯವೂ ಅಷ್ಟಕ್ಕಷ್ಟೆ, ವಿಧಿಯಂತೆ ನಿರ್ವಹಿಸಿ ಭಗವಂತನನ್ನು ಸೇವಿಸಿ.

ಶ್ರೀ ಶನಿಮಹಾತ್ಮ ಕಥೆ ಓದಿ. ಶುಭ ಸಂಖ್ಯೆ–2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

'ಗಾಳಿ ಬಂದಾಗ ತೂರಿಕೋ' ಎಂಬ ನಾಣ್ನುಡಿಯಂತೆ ಗ್ರಹಗಳ ಶುಭ ಗೋಚರ ಇರುವಾಗ ಬಹುನಿರೀಕ್ಷಿತ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಕೃಷಿಕರ್ಮದಲ್ಲಿ ನಿರೀಕ್ಷಿತ ಧನಲಾಭ ಉಂಟಾಗುವುದು. ಪುತ್ರಾದಿಗಳಿಗೆ ಶುಭ ಸಂದೇಶ ಬರುವುದು. ಸಹೋದರರಲ್ಲಿ ಮನಸ್ತಾಪಗಳು ಉಂಟಾಗಬಹುದು. ದುಡುಕಿ ನಡೆದರೆ ಸಂಕಷ್ಟಗಳಿಗೆ ಗುರಿಯಾಗುವಿರಿ.

ಶ್ರೀ ದತ್ತಗುರು ಧ್ಯಾನ. ಶುಭ ಸಂಖ್ಯೆ–5.

ಮೈಸೂರು ಮಿತ್ರ

ವ್ಯಕ್ತಿ ಪೂಜೆ ಮೂಲಕ ಬಿಜೆಪಿ ಸರ್ವಾಧಿಕಾರಿ ಆಡಳಿತಕ್ಕೆ ನಾಂದಿ

ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಆರೋಪ

ಹುಣಸೂರು, ಮಾ.30– ಸಂವಿಧಾನದಲ್ಲಿ ವ್ಯಕ್ತಿ ಪೂಜೆ ಇಲ್ಲ. ಆದರೆ ಬಿಜೆಪಿ ವ್ಯಕ್ತಿ ಪೂಜೆ ಮಾಡುವ ಮೂಲಕ ಸರ್ವಾಧಿಕಾರಿ ಆಡಳಿತಕ್ಕೆ ನಾಂದಿ ಹಾಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಆರೋಪಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಗರದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಉಳಿವಿಗೆ ಸಂವಿಧಾನದ ಮೇಲೆ ನಂಬಿಕೆ ಇರುವವರಿಗೆ ಅಧಿಕಾರ ಸಿಗಬೇಕು. ಬಿಜೆಪಿ ಸರ್ಕಾರ ಬಡವರ, ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ ಸರ್ಕಾರವಲ್ಲ ಬದಲಿಗೆ ಹಣವಂತರು, ಬಂಡವಾಳ ಶಾಹಿಗಳ ಪಕ್ಷವಾಗಿದೆ ಎಂದು ಲೇವಡಿ ಮಾಡಿದರು.

ದೇಶದಲ್ಲಿ ಜನರಿಗೆ ಮುಕ್ತವಾಗಿ ಮಾತನಾಡುವ ಸ್ವಾತಂತ್ರ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದ ತಪ್ಪನ್ನು ಎತ್ತಿ ಹಿಡಿದರೆ ಆ ಧ್ವನಿಯನ್ನು ಹತ್ತಿಕ್ಕುವ ಕೆಲಸ ಮೋದಿ ಸರ್ಕಾರ ಮಾಡುತ್ತಿದೆ ಎಂದ ಅವರು, ಸುಳ್ಳು ಭರವಸೆ ನೀಡಿ ಜನರನ್ನು ನಂಬಿಸಿ ಕಳೆದ ಹತ್ತು ವರ್ಷಗಳಿಂದ ಆಡಳಿತ ನಡೆಸಿದ ಮೋದಿ ಸರ್ಕಾರದ ಸಾಧನೆ ಶೂನ್ಯವಾಗಿದ್ದು, ಈ ಬಾರಿ ಜನರೆ ತಕ್ಕ ಉತ್ತರ ನೀಡಲಿದ್ದಾರೆ ಎಂದರು.

ಸಂವಿಧಾನ ಬದಲಾವಣೆಗೆ ಹೊರಟಿರುವ ಬಿಜೆಪಿ ಸರ್ಕಾರ ದೇಶಕ್ಕೆ ಬೇಕಾ ಎಂದು ಪ್ರಶ್ನಿಸಿದ ಅವರು ಚುನಾವಣೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು 50 ಸಾವಿರ ಮತಗಳ ಲೀಡ್ ಕೊಡಿ. ನಿಮ್ಮ ನಾಯಕ ಮಂಜುನಾಥ್ ಅವರಿಗೆ ಉತ್ತಮ ಸ್ಥಾನಮಾನ ಸಿಗಲಿದೆ ಎಂದರು.



ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಮೋದಿ ಸರ್ಕಾರದ ವಿರುದ್ಧ ಹರಿಹಾಯ್ದು, ಎಸಿ ಕೊಠಡಿಯಲ್ಲಿ ಕುಳಿತವರಿಗೆ ಮತ ನೀಡುವುದರಿಂದ ಶ್ರೀಸಾಮಾನ್ಯರಿಗೆ ಯಾವುದೇ ಪ್ರಯೋಜನವಿಲ್ಲ. ಬೀದಿಯಲ್ಲಿ ನಿಂತು ಹೋರಾಟ ನಡೆಸುವವರಿಗೆ ಮತ ನೀಡುವುದರಿಂದ ಜನಸಾಮಾನ್ಯರ ನೋವಿಗೆ ಸ್ಪಂದಿಸುವ ವ್ಯಕ್ತಿ ಲೋಕಸಭೆಯಲ್ಲೂ ಪ್ರತಿಧ್ವನಿಸಲು ಸಹಕಾರವಾಗಲಿದೆ ಎಂದರು.

ದೇಶದಲ್ಲಿ ಬಿಜೆಪಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಗೊಂಡು ಮೂರನೇ ಬಾರಿ ಅಧಿಕಾರಕ್ಕೆ ಬರಲಿದೆ ಎಂದು ಕೆಲವು ಮಾಧ್ಯಮಗಳು ಬಿತ್ತರಿಸುತ್ತಿದ್ದು, ಅದು ಸತ್ಯಕ್ಕೆ ದೂರ. ಮಾಧ್ಯಮಗಳು ಸತ್ಯ ಹೇಳುತ್ತಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ ಮಾತನಾಡಿ, 2014ಕ್ಕೂ ಮುನ್ನಾ ನಾವು ಅಧಿಕಾರಕ್ಕೆ ಬಂದರೆ ಯುವಕರಿಗೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದ ಬಿಜೆಪಿ, 10 ವರ್ಷಗಳಲ್ಲಿ 20 ಕೋಟಿ ಉದ್ಯೋಗ ಸೃಷ್ಟಿಸಬೇಕಿತ್ತು. ಆದರೆ ಸುಳ್ಳು ಆಶ್ವಾಸನೆ ನೀಡಿ ಮೋದಿ ಜನರಿಗೆ ಮೋಸ ಮಾಡುತ್ತಿದ್ದಾರೆ. ಹೀಗಾಗಿ ಈ ಸರ್ಕಾರವನ್ನು ಕಿತ್ತೊಗೆಯಬೇಕಿದೆ. ಅಲ್ಲದೇ ಈ ಹಿಂದೆ ಹಲವು ಭಾಗ್ಯಗಳನ್ನು ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಇದೀಗ 5 ಗ್ಯಾರಂಟಿಗಳನ್ನು ನೀಡಿದ್ದಾರೆ. ಇವುಗಳನ್ನು ಸದುಪಯೋಗಪಡಿಸಿಕೊಂಡು ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ. ಬಿ.ಜೆ.ವಿಜಯ ಕುಮಾರ್, ಮಾಜಿ ಜಿಪಂ ಉಪಾಧ್ಯಕ್ಷೆ ಗೌರಮ್ಮ, ಮುಖಂಡರಾದ ರಮೇಶ್, ಭಾಗ್ಯ, ಹೆಚ್.ಎನ್.ಪ್ರೇಮ್ ಕುಮಾರ್, ಅರುಣ್, ರಾಮು, ಜಯರಾಂ, ಡಿ.ಕುನ್ನೇಗೌಡ, ಅಣ್ಣಯ್ಯ ನಾಯಕ, ಬಸವರಾಜ್, ಪುಟ್ಟರಾಜ್ ಸೇರಿದಂತೆ ಹಲವು ಮುಖಂಡರಿದ್ದರು.

ಹೈಫೈ ಪ್ರಧಾನಿ ಮೋದಿ: ಕೆ.ವೆಂಕಟೇಶ್

ಹುಣಸೂರು: ದೇಶದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ, ತಳಮಟ್ಟದ ನಾಗರಿಕರ ಸಮಸ್ಯೆ ತಿಳಿಯದೆ ಧಾರ್ಮಿಕ ಭಾವನಾತ್ಮಕ ವಿಚಾರದಲ್ಲಿ ದೇಶ ಆಳುತ್ತಿದೆ ಎಂದು ಸಚಿವ ಕೆ.ವೆಂಕಟೇಶ್ ತಿಳಿಸಿದರು.

ದೇಶದ ನಾಗರಿಕರ ದುಃಖ–ದುಮ್ಮಾನ ತಿಳಿಯುವ ಮನಸ್ಥಿತಿ ಇಲ್ಲದೆ ಆಡಳಿತ ನಡೆಸುತ್ತಿರುವ ಹೈಫೈ ಪ್ರಧಾನಿ ಮೋದಿ ದೆಹಲಿಯಲ್ಲಿ ಕಳೆದ ಒಂದೂವರೆ ವರ್ಷದಿಂದ ಅನ್ನದಾತರು ಅಹೋರಾತ್ರಿ ಧರಣಿ ನಡೆಸುತ್ತಿದ್ದರೂ, ಅವರೊಂದಿಗೆ ಮಾತು ಕತೆ ನಡೆಸುವ ಮನಸ್ಥಿತಿ ಇಲ್ಲದ ವ್ಯಕ್ತಿಯಿಂದ ಅನ್ನದಾತ ಏನನ್ನು ನಿರೀಕ್ಷಿಸಲು ಸಾಧ್ಯ ಎಂದರು.

ಮೋದಿ ಸರ್ವಾಧಿಕಾರಿ ಧೋರಣೆಯಿಂದಾಗಿ ಸಂವಿಧಾನಾತ್ಮಕವಾಗಿ ನಾಗರಿಕರಿಗೆ ಸಿಕ್ಕ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳುವ ತಂತ್ರಗಾರಿಕೆ ನಡೆದಿದೆ. ಮಾಧ್ಯಮದವರು ಮೋದಿ ಅವರನ್ನು ಓಲೈಕೆ ಮಾಡುತ್ತಿದ್ದು ನಿಜವಾದ ಪರಿಸ್ಥಿತಿ ಮತದಾರರಿಗೆ ಬಿತ್ತರಿಸುವಲ್ಲಿ ಸೋತಿದ್ದಾರೆ ಎಂದರು. ಮೋದಿ ವಿರುದ್ಧ ಧ್ವನಿ ಎತ್ತುವವರನ್ನು ಇ.ಡಿ, ಐ.ಟಿ ಇಲಾಖೆ ಛೂ ಬಿಟ್ಟು ಕತ್ತು ಹಿಸುಕುವ ಕೆಲಸ ನಡೆಸಿದೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಟಿಲ್ಲು–2 (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಗಾಡ್ಜಿಲ್ಲಾ ಕಾಂಗ್ (ಇಂ)	4 ಪ್ರದರ್ಶನಗಳು
ಸಂಗಂ	
ಟಿಲ್ಲು–2 (ತೆ)	4 ಪ್ರದರ್ಶನಗಳು
ಲಿಡೋ	
Mr. & Mrs. ಮನ್ಮಥ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಗಧೀರ (ತೆ)	4 ಪ್ರದರ್ಶನಗಳು
ಪ್ರಭಾ	
ದಿ ಗೋಟ್ ಲೈಫ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

DRC CINEMAS

ದೂ : 4240422/4241800

ಸ್ಕ್ರೀನ್ 1	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.1.30ಕ್ಕೆ, ರಾ.7.05ಕ್ಕೆ, ಆಡುಜೀವಿತಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.50ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.12.50ಕ್ಕೆ, ಮ.2.50ಕ್ಕೆ, ಕ್ರೂವ್ (ಹಿಂ): ಸಂ.4.50ಕ್ಕೆ, ರಾ.7.20ಕ್ಕೆ, ಟಿಲ್ಲು ಸ್ಕ್ವೇರ್ (ತೆ): ರಾ.9.55ಕ್ಕೆ.
ಸ್ಕ್ರೀನ್ 3	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.10.25ಕ್ಕೆ, ರಾ.10.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.12.45ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.30ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.50ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಟಿಲ್ಲು ಸ್ಕ್ವೇರ್ (ತೆ): ಬೆ.9.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಮ.12.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.2.45ಕ್ಕೆ, ಯುವ (ಕ): ಸಂ.6ಕ್ಕೆ, ಆಡುಜೀವಿತಂ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಕ್ರೂವ್ (ಹಿಂ): ಬೆ.10.55ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ಟಿಲ್ಲು ಸ್ಕ್ವೇರ್ (ತೆ): ಸಂ.4.25ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ)(ಇಂ): ಬೆ.11.25ಕ್ಕೆ, ಸಂ.5ಕ್ಕೆ, ರಾ.7.40ಕ್ಕೆ, ರಾ.10.20ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.2.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಥಂಬರ್ಥ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕ್ಷಯ ರೋಗ ಹರಡದಂತೆ ತಡೆಗಟ್ಟಬಹುದು: ಟಿ.ರವಿಕುಮಾರ್



ಸರಗೂರಿನ ಬಾನುಲಿ ಕೇಂದ್ರದಲ್ಲಿ ಆರೋಗ್ಯಾಧಿಕಾರಿ ಟಿ.ರವಿಕುಮಾರ್ ಮಾತನಾಡಿದರು.

ಸರಗೂರು, ಮಾ.30– ಚಿಕಿತ್ಸೆ ಪಡೆಯುವ ಮೂಲಕ ಕ್ಷಯ ರೋಗ ಹರಡದಂತೆ ತಡೆಗಟ್ಟಬಹುದು ಎಂದು ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ತಿಳಿಸಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಬಾನುಲಿ ಕೇಂದ್ರದಲ್ಲಿ ಆಯೋಜಿಸಿದ್ದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಓರ್ವ ಕ್ಷಯ ರೋಗಿ ಚಿಕಿತ್ಸೆ ಪಡೆಯದಿದ್ದರೇ 1 ವರ್ಷದಲ್ಲಿ 10 ರಿಂದ 15 ಮಂದಿಗೆ ರೋಗ ಹರಡಬಹುದು. ಕ್ಷಯ ರೋಗ ಒಬ್ಬರಿಂದ ಒಬ್ಬರಿಗೆ ಗಾಳಿ ಮುಖಾಂತರ ಹರಡುತ್ತದೆ. 2 ವಾರಕ್ಕಿಂತ ಹೆಚ್ಚು ಕಾಲ ಕೆಮ್ಮುವುದು, ರಾತ್ರಿ ವೇಳೆ ಜ್ವರ ಬರುವುದು, ಹಸಿವಾಗದಿರುವುದು, ತೂಕ ಕಡಿಮೆಯಾಗುವುದು, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು ಕಾಣಿಸಿಕೊಳ್ಳುವುದು ಇತ್ಯಾದಿ ಕ್ಷಯರೋಗದ ಲಕ್ಷಣಗಳಾಗಿದ್ದು, ಇವು ಕಂಡು ಬಂದಲ್ಲಿ ಹತ್ತಿರದ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಪಡೆಯಬೇಕು. ಪ್ರತಿ ವರ್ಷದಂತೆ ಈ ವರ್ಷವೂ 'ಹೌದು ಕ್ಷಯರೋಗವನ್ನು ಕೊನೆಗಾಣಿಸಬಹುದು' ಎಂಬ ಘೋಷವಾಕ್ಯದೊಂದಿಗೆ ಕ್ಷಯ ರೋಗ ಕೊನೆಗಾಣಿಸಲು ಗ್ರಾಪಂ ಮೂಲಕ ಅರಿವು ಮೂಡಿಸಲಾಗುವುದು ಎಂದರು.

ನಮ್ಮ ತಾಲೂಕಿನಲ್ಲಿ ಕ್ಷಯರೋಗ ಪತ್ತೆ ಮಾಡಲು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಸರಗೂರಿನ ವಿವೇಕಾನಂದ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲೂ ಕ್ಷಯರೋಗಕ್ಕೆ ಸಂಬಂಧಿಸಿದಂತೆ ಉಚಿತ ಚಿಕಿತ್ಸೆ, ಕ್ಷ–ಕಿರಣ ಪರೀಕ್ಷೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಕ್ಷಯ ರೋಗಿಗಳು ಚಿಕಿತ್ಸೆ ವೇಳೆ ಪೌಷ್ಠಿಕ ಆಹಾರ ಪಡೆಯಲು 6 ತಿಂಗಳವರೆಗೆ 500 ರೂ.ನಂತೆ ಅವರ ಬ್ಯಾಂಕ್ ಖಾತೆಗೆ ಮೂರು ಸಾವಿರ ರೂ.ಗಳನ್ನು ನಿಕ್ಷಯ ಪೋಷಣ್ ಯೋಜನೆಯಡಿ ನೀಡಲಾಗುವುದು. ಅಲ್ಲದೇ ಈ ಯೋಜನೆ ಅಡಿ ದಾನಿಗಳ ಸಹಕಾರದಿಂದ ರೋಗಿಗಳನ್ನು ದತ್ತು ಪಡೆದು 6 ತಿಂಗಳವರೆಗೆ ಪೌಷ್ಠಿಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲಾಗುವುದು ಎಂದರು.

ಬಾನುಲಿ ಕೇಂದ್ರದ ವ್ಯವಸ್ಥಾಪಕ ನಿಂಗರಾಜು, ಸಿಬ್ಬಂದಿಗಳಾದ ಲೀಲಾವತಿ, ಶ್ರೀಕಾಂತ್, ಶಿವಲಿಂಗ, ಸ್ಫೂರ್ತಿ, ಅನಿತಾ ಇದ್ದರು.

ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿ: ಯದುವೀರ್

ಬೆಟ್ಟದಪುರ, ಮಾ.30– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇಲ್ಲಿಗೆ ಸಮೀಪದ ಸೂಳೆಕೋಟೆ ಆಂಜನೇಯಸ್ವಾಮಿ ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಗ್ರಾಮಕ್ಕೆ ಆಗಮಿಸಿದ ಯದುವೀರ್ ಅವರನ್ನು ಗ್ರಾಮಸ್ಥರು ಅದ್ಧೂರಿಯಾಗಿ ಬರಮಾಡಿಕೊಂಡರು. ಬಳಿಕ ಗ್ರಾಮದಲ್ಲಿ ವಿಶೇಷ ಸಭೆ ನಡೆಸಿ ಮಾತನಾಡಿದ ಅವರು, ಅಂದಿನ ಕಾಲದಲ್ಲಿ ಮಹಾರಾಜರು ಅರಮನೆಯಲ್ಲಿ ಕುಳಿತು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಅಲ್ಲದೇ ದೇಶದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ ಮಹಾರಾಣಿ ಕಾಲೇಜನ್ನು ಆರಂಭಿಸಿ ಮಹಿಳೆಯರ ವಿದ್ಯಾಭ್ಯಾಸಕ್ಕೆ ನೆರವಾಗಿದ್ದರು. ಆದ್ದರಿಂದ ಮಹಾರಾಜರು ಕೇವಲ ಅರಮನೆಯಲ್ಲಿ ಕೂರುವುದಿಲ್ಲ. ಸಾರ್ವಜನಿಕರ ಸಮಸ್ಯೆ ಅರಿತು ಅವರಿಗೆ ಬೇಕಾದ ಸೌಲಭ್ಯ ಕಲ್ಪಿಸುವುದು ಮಹಾರಾಜರ ಕೆಲಸ ಹೀಗಾಗಿ ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿದರೇ ಅರಮನೆಯಲ್ಲಿ ಕೂರದೇ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುತ್ತೇನೆ ಎಂದರು.



ಸೂಳೆಕೋಟೆ ಆಂಜನೇಯಸ್ವಾಮಿ ದೇವಾಲಯದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿಶೇಷ ಪೂಜೆ ಸಲ್ಲಿಸಿದರು.

ಮಾಜಿ ಶಾಸಕ ಕೆ.ಮಹದೇವ್ ಮಾತನಾಡಿ, ಈ ದೇಶಕ್ಕೆ ಮೈಸೂರು ಮಹಾರಾಜರ ಕೊಡುಗೆ ಅಪಾರ. ಮಹಾರಾಜರು ಗೆದ್ದರೆ ನಾಡಿನ ಅಭಿವೃದ್ಧಿ ಸಾಧ್ಯ. ಆದ್ದರಿಂದ ಅವರಿಗೆ ಸಾರ್ವಜನಿಕರು ಮತ ನೀಡಿ ಗೆಲ್ಲಿಸಬೇಕು ಎಂದರು.

ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಮುಂದಿನ ದಿನಗಳಲ್ಲಿ ಮೈಸೂರು ಕ್ಷೇತ್ರದ ಪ್ರತಿ ಹಳ್ಳಿಗೂ ತೆರಳಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮತಯಾಚಿಸಲಿದ್ದಾರೆ ಎಂದರು.

ಈ ವೇಳೆ ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ ಜಿಲ್ಲಾ ಉಪಾಧ್ಯಕ್ಷ ಸೋಮಶೇಖರ್, ತಾಲೂಕು ಪ್ರಧಾನ ಕಾರ್ಯದರ್ಶಿ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್, ಜಯರಾಮೇಗೌಡ, ಆರ್.ಟಿ.ಸತೀಶ್ ಚಂದ್ರ, ಮೋಹನ್ ರಾಜ್, ಕೊಪ್ಪ ಗ್ರಾಪಂ ಅಧ್ಯಕ್ಷೆ ಶೀಲಾ, ಮಾಜಿ ಅಧ್ಯಕ್ಷ ರೇಣುಕಾಸ್ವಾಮಿ, ದೊಡ್ಡಪ್ಪನಹಳ್ಳಿ ಗ್ರಾಪಂ ಅಧ್ಯಕ್ಷ ಹರೀಶ್, ವೇದಮೂರ್ತಿ, ಶಿವಮೂರ್ತಿ ಸೇರಿದಂತೆ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ಹಾಜರಿದ್ದರು.


ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್‌ಗೆ ಸಿದ್ದಪ್ಪಸ್ವಾಮಿ ಅಧ್ಯಕ್ಷ

ತಿ.ನರಸೀಪುರ, ಮಾ.30– ಪಟ್ಟಣದ ಎಪಿಎಂಸಿ ಆವರಣದಲ್ಲಿ ನಡೆದ ಸಭೆಯಲ್ಲಿ ತಾಲೂಕಿನ ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ನೂತನ ಅಧ್ಯಕ್ಷರಾಗಿ ಕನ್ನಹಳ್ಳಿ ಮೋಳೆ ಸಿದ್ದಪ್ಪಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಕೃಷ್ಣಾಪುರ ರಾಮಶೆಟ್ಟಿ ಅವರ ಅಧಿಕಾರವಧಿ ಮುಕ್ತಾಯಗೊಂಡ ಹಿನ್ನೆಲೆ ಹಾಗೂ ತಾಲೂಕಿನಲ್ಲಿ ಅರ್ಧಕ್ಕೆ ನಿಂತಿರುವ ಉಪ್ಪಾರ ಸಮುದಾಯ ಭವನಗಳ ಕಾಮಗಾರಿ ಪೂರ್ಣಗೊಳಿಸಲು ಕ್ರಿಯಾಶೀಲ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡುವ ಉದ್ದೇಶದಿಂದ ಸಿದ್ದಪ್ಪಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಉಪ್ಪಾರ ಮಹಾಸಭಾ ಅಧ್ಯಕ್ಷ ಕಾವೇರಿಪುರ ಮಹದೇವಶೆಟ್ಟಿ ತಿಳಿಸಿದರು.

ಕೆಲ ದಿನಗಳ ಹಿಂದೆ ಸಮಾಜದ ಕೆಲವು ಸದಸ್ಯರ ಸಮ್ಮುಖದಲ್ಲಿ ಸಿದ್ದಶೆಟ್ಟಿ ಎಂಬಾತ ತಾನೇ ಅಧ್ಯಕ್ಷ ಎಂದು ಸ್ವಯಂ ಘೋಷಣೆ ಮಾಡಿಕೊಂಡಿದ್ದರು. ಆದರೆ ಇಂದು ತಾಲೂಕಿನ ಎಲ್ಲಾ ಗ್ರಾಮದ ಮುಖಂಡರು, ಯಜಮಾನರ ಸಮ್ಮುಖದಲ್ಲಿ ಸಿದ್ದಪ್ಪಸ್ವಾಮಿ ಅವರನ್ನು ಆಯ್ಕೆ ಮಾಡಿದ್ದೇವೆ. ಹಾಗಾಗಿ ಸಿದ್ದಶೆಟ್ಟಿಯವರು ಮಾಡಿಕೊಂಡಿರುವ ಸ್ವಯಂ ಘೋಷಿತ ಆಯ್ಕೆಗೆ ಯಾವುದೇ ಮಾನ್ಯತೆ ಇಲ್ಲ, ಸಿದ್ದಶೆಟ್ಟಿಗೂ ನಮ್ಮ ಸಂಘಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಮಹದೇವಶೆಟ್ಟಿ ತಿಳಿಸಿದರು.

ನೂತನ ಅಧ್ಯಕ್ಷ ಸಿದ್ದಪ್ಪಸ್ವಾಮಿ ಮಾತನಾಡಿ, ಹೆಳವರಹುಂಡಿ ಬಳಿ ಅಪೂರ್ಣಗೊಂಡಿರುವ ಉಪ್ಪಾರ ಸಮುದಾಯ ಭವನ ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸಮುದಾಯ ಭವನ ನಿರ್ಮಾಣಕ್ಕೆ ಮಾಜಿ ಸಂಸದ ದಿ.ಧ್ರುವನಾರಾಯಣ್ 20 ಲಕ್ಷ ಅನುದಾನ ನೀಡಿ ಸಹಕಾರ ನೀಡಿದ್ದರು. ಇದೀಗ ಸಚಿವ ಡಾ.ಹೆಚ್.ಸಿ.ಮಹದೇವಪ್ಪ 1 ಕೋಟಿ ರೂ. ಅನುದಾನ ನೀಡುವ ಭರವಸೆ ನೀಡಿದ್ದಾರೆ. ಹಾಗಾಗಿ ನನ್ನ ಅಧ್ಯಕ್ಷ ಸ್ಥಾನದ ಅವಧಿಯಲ್ಲಿ ಸಮುದಾಯ ಭವನ ಕಾಮಗಾರಿ ಪೂರ್ಣಗೊಳಿಸಲು ಪ್ರಯತ್ನ ಮಾಡುವುದಾಗಿ ತಿಳಿಸಿದರು.



ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷರಾಗಿ ಸಿದ್ದಪ್ಪಸ್ವಾಮಿ ಆಯ್ಕೆಯಾದರು.

ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶಾಂತರಾಜು ಮಾತನಾಡಿದರು. ತಾಪಂ ಮಾಜಿ ಸದಸ್ಯ ಗಿರೀಶ್, ಎಪಿಎಂಸಿ ಮಾಜಿ ಸದಸ್ಯ ಮಾವಿನಹಳ್ಳಿ ಪುಟ್ಟಸ್ವಾಮಿ, ಕರೋಹಟ್ಟಿ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಬನ್ನೂರು ಸಿದ್ದಶೆಟ್ಟಿ, ಕೆಂಪಯ್ಯನಹುಂಡಿ ಮಹೇಶ್, ಮಾದೇಶ್, ರಮೇಶ್, ಕನ್ನಳ್ಳಿ ಮೋಳೆ ಕೆ.ಮಹದೇವಶೆಟ್ಟಿ, ಮೂಗೂರು ಮೋಳೆ ಬೆಳ್ಳಿ, ಗ್ರಾಪಂ ಸದಸ್ಯ ರಾಜೇಶ್, ಹೊಸಳ್ಳಿಮೋಳೆ ಚಿನ್ನಸ್ವಾಮಿ, ಶಂಕರ, ತೊಟ್ಟವಾಡಿ ನಾಗಣ್ಣ, ಹಳೇ ಕೆಂಪಯ್ಯನಹುಂಡಿ ರಾಜಣ್ಣ, ಮಾದೇಶ್, ಶ್ರೀನಿವಾಸ ಮೂರ್ತಿ, ಕೊತ್ತೇಗಾಲ ಮಹದೇವ್, ರವಿ ಮತ್ತಿತರರಿದ್ದರು.

ಕಂಪಲಾಪುರದಲ್ಲಿ ಸಾರ್ವಜನಿಕರ ಸಭೆ: ಯದುವೀರ್ ಭಾಗಿ



ಪಿರಿಯಾಪಟ್ಟಣ, ಮಾ.30– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಕಂಪಲಾಪುರದಲ್ಲಿ ಬಿಜೆಪಿ ವತಿಯಿಂದ ಸಾರ್ವಜನಿಕರ ಸಭೆ ನಡೆಯಿತು.

ಈ ವೇಳೆ ಕರ್ನಾಟಕ ಕಾವಲು ಪಡೆಯ ಸುಬ್ರಹ್ಮಣ್ಯ ಹಾಗೂ ಶೇಖರ್ ಅವರು ಬಿಜೆಪಿಗೆ ಸೇರ್ಪಡೆಯಾದರು. ಬಳಿಕ ಪಿರಿಯಾಪಟ್ಟಣದ ನಳಪಾಕ್ ಹೋಟೆಲ್‌ನಲ್ಲಿ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಾರ್ಯಕರ್ತರ ಜೊತೆ ಉಪಹಾರ ಸೇವಿಸಿ ನಂತರ ಮಂಜುನಾಥ ಕನ್ವೆನ್ಷನ್ ಹಾಲಿನಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಂಡರು. ಈ ವೇಳೆ ಎನ್‌ಡಿಎ ಅಭ್ಯರ್ಥಿ ಯದುವೀರ್‌ಗೆ ಪಿರಿಯಾಪಟ್ಟಣ ಕ್ಷೇತ್ರದಿಂದ ಅತೀ ಹೆಚ್ಚು ಮತ ನೀಡುವಂತೆ ಸಂಕಲ್ಪ ಮಾಡಲಾಯಿತು. ಈ ಸಂದರ್ಭ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಕೆ.ಮಹದೇವ್, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಶಾಸಕ ಬಸವರಾಜ್, ಪಿರಿಯಾಪಟ್ಟಣ ಮಂಡಲ ಅಧ್ಯಕ್ಷ ರಾಜೇಂದ್ರ, ಚುನಾವಣಾ ಸಂಚಾಲಕ ರಾಜೇಗೌಡ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಆಸ್ತಿ ತೆರಿಗೆಯ ಮೇಲೆ ಶೇ.5ರಷ್ಟು ರಿಯಾಯಿತಿ

ಮೈಸೂರು,ಮಾ.30– 2024–25 ನೇ ಸಾಲಿನ ಆಸ್ತಿ ತೆರಿಗೆಯನ್ನು ಏ.1ರಿಂದ 30ರವರೆಗೆ ಪಾವತಿಸುವ ಆಸ್ತಿ ಮಾಲಿಕರಿಗೆ ಶೇ.5ರಷ್ಟು ರಿಯಾಯಿತಿ ನೀಡಲಾಗುತ್ತಿದ್ದು, ಮೇ 1ರಿಂದ ಜೂ.30ರವರೆಗೆ ಆಸ್ತಿ ತರಿಗೆ ಪಾವತಿಸುವವರಿಗೆ ಯಾವುದೇ ರಿಯಾಯಿತಿ ಮತ್ತು ದಂಡ ಇರುವುದಿಲ್ಲ. ಜೂನ್–2024ರ ನಂತರ ತೆರಿಗೆಯನ್ನು ಪಾವತಿಸಿದ್ದಲ್ಲಿ ಪ್ರತಿ ತಿಂಗಳಿಗೆ ಶೇ.2ರಷ್ಟು ದಂಡವನ್ನು ವಿಧಿಸಲಾಗುತ್ತದೆ ಎಂದು ನಂಜನಗೂಡು ನಗರ ಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಶ್ರೀಪಟ್ಟಲದಮ್ಮ ಜಾತ್ರಾ ಮಹೋತ್ಸವ

ಗಾವಡಗೆರೆ, ಮಾ.30– ಹುಣಸೂರು ತಾಲೂಕಿನ ಗಾವಡಗೆರೆ ಗ್ರಾಮದಲ್ಲಿ ಶನಿವಾರ ಶ್ರೀಪಟ್ಟಲದಮ್ಮ ದೇವಿ ಕೊಂಡೋತ್ಸವ ಹಾಗೂ ಜಾತ್ರಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.



ಜಾತ್ರಾ ಮಹೋತ್ಸವ ಅಂಗವಾಗಿ ದೇವಸ್ಥಾನವನ್ನು ಬಣ್ಣ ಬಣ್ಣದ ವಿದ್ಯುತ್ ದೀಪ ಹಾಗೂ ರಂಗೋಲಿಯಿಂದ ಸಿಂಗರಿಸಲಾಗಿತ್ತು. ಮುಂಬಯಿ, ಪುಣೆ, ಬೆಂಗಳೂರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಇನ್ನು ಹರಕೆ ಹೊತ್ತ 500ಕ್ಕೂ ಹೆಚ್ಚು ಮಹಿಳೆಯರು ಬಾಯಿಗೆ ಬೀಗ ಹಾಕಿಸಿಕೊಂಡು ಶುಕ್ರವಾರ ರಾತ್ರಿ ಇಡೀ ನಡೆದ ಶ್ರೀ ಪಟ್ಟಲದಮ್ಮನವರ ಉತ್ಸವದೊಂದಿಗೆ ಸಾಗಿ ಶನಿವಾರ ಮುಂಜಾನೆ ನಡೆದ ಕೊಂಡೋತ್ಸವದಲ್ಲಿ ಭಾಗಿಯಾಗಿ ಹರಕೆ ತೀರಿಸಿದರು.

ಉತ್ಸವಕ್ಕೆ ವಿವಿಧ ಜಾನಪದ ಕಲಾತಂಡಗಳು ಮೆರಗು ನೀಡಿದವು. ಅದರಲ್ಲೂ ಕೇರಳದ ಚೆಂಡೆ ವಾದ್ಯ ಎಲ್ಲರ ಗಮನ ಸೆಳೆಯಿತು. ಈ ವೇಳೆ ಯುವಕರು ಹೆಜ್ಜೆ ಹಾಕಿ ಸಂಭ್ರಮಿಸಿದರು.

ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಮಜ್ಜಿಗೆ, ಪಾನಕ ವಿತರಿಸಿದರೇ, ಗುರುಲಿಂಗ ಜಂಗಮ ದೇವರ ಮಠ ಪೀಠಾಧ್ಯಕ್ಷ ಶ್ರೀನಟರಾಜ ಸ್ವಾಮೀಜಿ ಭಕ್ತರಿಗೆ ಅನ್ನ ಸಂತರ್ಪಣೆ ನಡೆಸಿದರು. ಕೊಂಡೋತ್ಸವದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಭೈರನಾಯಕ ನಿಧನ




ಸರಗೂರು, ಮಾ.30– ಪಟ್ಟಣದ 9ನೇ ವಾರ್ಡ್ ನಿವಾಸಿ ಭೈರನಾಯಕ(57) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುನೀಲ್ ಬೋಸ್‌ಗೆ 'ಬಿ' ಫಾರಂ ನೀಡಿದ ಡಿ.ಕೆ. ಶಿವಕುಮಾರ್

ತಿ.ನರಸೀಪುರ ಮಾ.30– ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರಿಗೆ ಶನಿವಾರ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಬಿ' ಫಾರಂ ನೀಡಿದರು.

ನಂತರ ಮಾತನಾಡಿದ ಡಿ.ಕೆ.ಶಿವಕುಮಾರ್, ಇದೇ ಮೊದಲ ಬಾರಿಗೆ ಸಂಸತ್ ಸದಸ್ಯರಾಗಲು ಕಾಂಗ್ರೆಸ್ ಪಕ್ಷ ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮುಖಂಡರು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆಯಲ್ಲಿ ಗೆಲ್ಲಬೇಕು. ನಾಮಪತ್ರ ಸಲ್ಲಿಕೆ ಸೇರಿದಂತೆ ಚುನಾವಣಾ ಪ್ರಚಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಾನು ಬರುತ್ತೇನೆ. ಕೇಂದ್ರ ಸರ್ಕಾರದ ವೈಫಲ್ಯಗಳು ಮತ್ತು ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಜನರ ಮುಂದಿಟ್ಟು ಚುನಾವಣೆಯಲ್ಲಿ ಗೆಲ್ಲಬೇಕು ಎಂದು ಸುನೀಲ್ ಬೋಸ್‌ಗೆ ಶುಭ ಕೋರಿದರು.



ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿ, 2008ರ ವಿಧಾನಸಭಾ ಚುನಾವಣೆಯಿಂದ ಸಕ್ರಿಯ ರಾಜಕಾರಣ ಆರಂಭಿಸಿ, ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿ, ಸಚಿವ ಹೆಚ್.ಸಿ.ಮಹದೇವಪ್ಪ ಅವರ ಜೊತೆ ಜನಸೇವೆ ಮಾಡುತ್ತಿದ್ದೇನೆ. ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ಅಧ್ಯಕ್ಷರಿಂದ 'ಬಿ' ಫಾರಂ ಸ್ವೀಕರಿಸಿದ್ದು ನಿಜಕ್ಕೂ ಸಂತೋಷವಾಗುತ್ತಿದೆ ಎಂದರು.

ಏ.3ರಂದು ನಾಮಪತ್ರ ಸಲ್ಲಿಕೆ: ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರು ಏ.3ರಂದು ಬೆಳಗ್ಗೆ 11 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಶಾಸಕರಾದ ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಡಿ.ರವಿಶಂಕರ್, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಮಾಜಿ ಶಾಸಕರು, ಹಿರಿಯ ಮುಖಂಡರು, ಕಾರ್ಯಕರ್ತರು ಸೇರಿದಂತೆ ಇನ್ನಿತರರು ಉಪಸ್ಥಿತರಿರುವರು. ಬಿ ಫಾರಂ ಪಡೆಯುವ ವೇಳೆ ಪಕ್ಷದ ಯುವ ವಕ್ತಾರೆ ಐಶ್ವರ್ಯ ಮಹಾದೇವ್, ಆಪ್ತ ಸಹಾಯಕ ಲಕ್ಷ್ಮಿನಾರಾಯಣ ಹಾಗೂ ಇನ್ನಿತರರಿದ್ದರು.

ಮಾಜಿ ಪ್ರಧಾನಿಗಳಾದ ಚರಣ್ ಸಿಂಗ್, ನರಸಿಂಹ ರಾವ್, ಮಾಜಿ ಸಿಎಂ ಕರ್ಪೂರಿ ಠಾಕೂರ್, ಕೃಷಿ ವಿಜ್ಞಾನಿ ಡಾ.ಸ್ವಾಮಿನಾಥನ್‌ರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ಪ್ರದಾನ



ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಪರವಾಗಿ ಅವರ ಮೊಮ್ಮಗ ಜಯಂತ್ ಸಿಂಗ್ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಸ್ವೀಕರಿಸಿದರು.



ಪಿ.ವಿ.ನರಸಿಂಹ ರಾವ್ ಪರವಾಗಿ ಪುತ್ರ ಪಿ.ವಿ. ಪ್ರಭಾಕರ್ ರಾವ್ ಪ್ರಶಸ್ತಿ ಸ್ವೀಕರಿಸಿದರು.



ಕರ್ಪೂರಿ ಠಾಕೂರ್ ಅವರ ಪರವಾಗಿ ಪುತ್ರ ರಾಮನಾಥ ಠಾಕೂರ್ ಪ್ರಶಸ್ತಿ ಸ್ವೀಕರಿಸಿದರು.



ಡಾ. ಎಂ.ಎಸ್.ಸ್ವಾಮಿನಾಥನ್ ಅವರ ಪರವಾಗಿ ಪುತ್ರಿ ನಿತ್ಯಾ ರಾವ್ ಪ್ರಶಸ್ತಿ ಸ್ವೀಕರಿಸಿದರು.

ನವದೆಹಲಿ, ಮಾ.30– ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಸೇರಿದಂತೆ ಐವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪ್ರತಿಷ್ಠಿತ 'ಭಾರತ ರತ್ನ'ವನ್ನು ಶನಿವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರದಾನ ಮಾಡಿದರು.

ಮಾಜಿ ಪ್ರಧಾನಿಗಳಾದ ಚೌಧರಿ ಚರಣ್ ಸಿಂಗ್, ಪಿವಿ ನರಸಿಂಹ ರಾವ್, ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್, ಕೃಷಿ ವಿಜ್ಞಾನಿ ಡಾ.ಎಂ.ಎಸ್. ಸ್ವಾಮಿನಾಥನ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರದಾನ ಮಾಡಲಾಯಿತು.

ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಚರಣ್ ಸಿಂಗ್ ಪರವಾಗಿ ಅವರ ಮೊಮ್ಮಗ ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಸಿಂಗ್, ಪಿ. ವಿ.ನರಸಿಂಹರಾವ್ ಪರವಾಗಿ ಅವರ ಪುತ್ರ ಪಿ.ವಿ. ಪ್ರಭಾಕರ ರಾವ್ ಪ್ರಶಸ್ತಿ ಸ್ವೀಕರಿಸಿದರು.

ಬಿಹಾರದ ಮಾಜಿ ಸಿಎಂ ಕರ್ಪೂರಿ ಠಾಕೂರ್ ಪರವಾಗಿ ಅವರ ಪುತ್ರ ರಾಮನಾಥ ಠಾಕೂರ್, ಕೃಷಿ ವಿಜ್ಞಾನಿ ಡಾ.ಎಂ. ಎಸ್. ಸ್ವಾಮಿನಾಥನ್ ಪರ ಅವರ ಪುತ್ರಿ ನಿತ್ಯಾರಾವ್ ಪ್ರಶಸ್ತಿ ಸ್ವೀಕರಿಸಿದರು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಚಿತ್ರನಟ ಪ್ರಕಾಶ್ ಹೆಗ್ಗೋಡು ಇನ್ನಿಲ್ಲ



ಸಾಗರ: ಕನ್ನಡದ 35 ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದ, ರಂಗಭೂಮಿ, ಪರಿಸರ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಯೇಸುಪ್ರಕಾಶ್ ಕಲ್ಲುಕೊಪ್ಪ(58) ಶನಿವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದ್ದಾರೆ. ಮೃತರು ಪ್ರಶಸ್ತಿ ವಿಜೇತ ಶಿಕ್ಷಕಿ ಶೈಲಜಾ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ. ಚಿತ್ರರಂಗದಲ್ಲಿ ಪ್ರಕಾಶ್ ಹೆಗ್ಗೋಡು ಎಂದು ಗುರ್ತಿಸಲ್ಪಡುತ್ತಿದ್ದ ಯೇಸು ಪ್ರಕಾಶ್, ಚಿತ್ರನಾಯಕ ಯಶ್ ಜತೆ ರಾಜಾಹುಲಿ ಸೇರಿದಂತೆ ದರ್ಶನ್, ಪುನೀತ್ ರಾಜಕುಮಾರ್ ಮೊದಲಾದವರ ಚಿತ್ರಗಳಲ್ಲಿ ಗಮನ ಸೆಳೆದಿದ್ದರು. ನೀನಾಸಂ ಜೊತೆ ನಿಕಟ ಸಂಬಂಧ ಹೊಂದಿದ್ದ ಯೇಸು ವಿವಿಧ ನಾಟಕಗಳಲ್ಲಿ, ಕಿರುತೆರೆಯಲ್ಲಿ ಕೂಡ ಕಾಣಿಸಿಕೊಂಡಿದ್ದರು.ಇತ್ತೀಚಿನ ದಿನಗಳಲ್ಲಿ ಹೊಸನಗರದ ಸಾರಾ ಸಂಸ್ಥೆಯ ಜೊತೆ ಗುರ್ತಿಸಿಕೊಂಡು ಕೆರೆ ಪುನರುಜ್ಜೀವನ, ಪರಿಸರ ಸದೃಢತೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೆ ಸಾಗರದ ಸುತ್ತಮುತ್ತಲೇ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿ ಭಾಗಿಯಾಗಿದ್ದರು. ಸಾರಾ ಸಂಸ್ಥೆಯ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ತಮಿಳಿನ ಖ್ಯಾತ ಖಳನಟ ಡೇನಿಯಲ್ ಬಾಲಾಜಿ ನಿಧನ



ಚೆನ್ನೈ, ಮಾ.30– ತಮಿಳು ನಟ ಡೇನಿಯಲ್ ಬಾಲಾಜಿ ತೀವ್ರ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಅವರಿಗೆ 48 ವರ್ಷ ವಯಸ್ಸಾಗಿತ್ತು. ವೆಟ್ಟೈಯಾಡು ವಿಲಯಾಡುವಿನಲ್ಲಿ ಅಮುಧನ್, ವಡಾ ಚೆನ್ನೈನ ತಂಬಿ ಪಾತ್ರಗಳಿಂದ ಡೇನಿಯಲ್ ಬಾಲಾಜಿ ಹೆಸರುವಾಸಿಯಾಗಿದ್ದಾರೆ, ತಮ್ಮ ವೈವಿಧ್ಯಮಯ ಪ್ರತಿಭೆ, ಬೆಳ್ಳಿತೆರೆ ಮೇಲೆ ಮನಮೋಹಕ ವರ್ಚಸ್ಸಿಗೆ ಹೆಸರುವಾಸಿಯಾಗಿದ್ದ ನಟನಿಗೆ ಕಳೆದ ರಾತ್ರಿ ತೀವ್ರ ಎದೆನೋವು ಕಾಣಿಸಿಕೊಂಡಿತು. ಕೂಡಲೇ ಅವರನ್ನು ಚೆನ್ನೈನ ಕೊಟ್ಟಿವಾಕಂನಲ್ಲಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಹೃದಯ ಸ್ತಂಭನದಿಂದ ಮೃತಪಟ್ಟಿದ್ದಾರೆ.

ರಾಕಿಂಗ್ ಸ್ಟಾರ್ ಯಶ್ ಅಭಿನಯದ ಕಿರಾತಕ ಚಿತ್ರದಲ್ಲಿ ವಿಲನ್ ಆಗಿ ನಟಿಸುವ ಮೂಲಕ ಕನ್ನಡಿಗರ ಮನೆಮಾತಾಗಿದ್ದ ನಟ ಡೇನಿಯಲ್ ಬಾಲಾಜಿ ಬಹು ಭಾಷಾನಟನಾಗಿಯೂ ಗುರುತಿಸಿಕೊಂಡಿದ್ದರು.

ಧಾರಾವಾಹಿ ಮೂಲಕ ತಮ್ಮ ಸಿನಿವೃತ್ತಿಯನ್ನು ಆರಂಭಿಸಿದ ಬಾಲಾಜಿ ಅವರು ಚಿತ್ತಿ ಧಾರಾವಾಹಿಯಲ್ಲಿ ಮಾಡಿದ ಡೇನಿಯಲ್ ಪಾತ್ರ ವ್ಯಾಪಕ ಮನ್ನಣೆ ಮತ್ತು ಜನಮೆಚ್ಚುಗೆ ಗಳಿಸಿ ಆ ಪಾತ್ರ ಮೂಲಕವೇ ಅವರು ನಂತರ ಡೇನಿಯಲ್ ಬಾಲಾಜಿ ಎಂದು ಜನಪ್ರಿಯರಾದರು. ನಟನೆ ಹೊರತುಪಡಿಸಿ ಬಾಲಾಜಿ ದೇವರ ಮೇಲೆ ಅಪಾರ ನಂಬಿಕೆ ಉಳ್ಳವರಾಗಿದ್ದರು. ಅವಡಿಯಲ್ಲಿ ದೇವಾಲಯವನ್ನು ನಿರ್ಮಿಸುತ್ತಿದ್ದರು ಎಂದು ಹೇಳಲಾಗುತ್ತಿದೆ.

ಮಾಜಿ ಗೃಹ ಸಚಿವ ಶಿವರಾಜ್ ಪಾಟೀಲ್ ಸೊಸೆ ಬಿಜೆಪಿ ಸೇರ್ಪಡೆ

ಮುಂಬೈ, ಮಾ.30– ಮಾಜಿ ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್ ಸೊಸೆ ಅರ್ಚನಾ ಪಾಟೀಲ್ ಬಿಜೆಪಿ ಸೇರ್ಪಡೆಗೊಂಡಿದ್ದಾರೆ. ಮಹಾರಾಷ್ಟ್ರ ಡಿಸಿಎಂ ದೇವೇಂದ್ರ ಫಡ್ನವೀಸ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಚಂದ್ರಕಾಂತ್ ಬವಾಂಕುಲೆ ನೇತೃತ್ವದಲ್ಲಿ ಅರ್ಚನಾ ಪಾಟೀಲ್ ಬಿಜೆಪಿ ಸೇರ್ಪಡೆಯಾದರು. ಅರ್ಚನಾ ಪಕ್ಷಕ್ಕೆ ಸೇರ್ಪಡೆಯಾಗಿರುವುದರಿಂದ ಪಕ್ಷಕ್ಕೆ ಹೆಚ್ಚಿನ ಬಲ ಸಿಗಲಿದೆ ಲಾತೂರ್ ಹಾಗೂ ಮರಾಠ್ವಾಡ ಪ್ರದೇಶಗಳಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಫಡ್ನವೀಸ್ ಹೇಳಿದ್ದಾರೆ.

15ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 15 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಸುನೀತಿ, ಕೃತಿಕಾ, ವಿಕ್ರಮ್, ಬಿಪಿನ್, ಸವಿತಾ

ಶ್ರೀ.ಎಂ.ಆರ್. ಸತ್ಯನಾರಾಯಣ
ಮ್ಯಾನೇಜರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಕಛೇರಿ, ಎಂ.ಡಿ.ಪಿ. ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ, ಮೈಸೂರು ನಗರ, ಹೆಬ್ಬಾಳ್ 2ನೇ ಹಂತ, 8 ನೇ ಮುಖ್ಯ ರಸ್ತೆ, ಮನೆ ನಂಬರ್: 1714 ರ ನಿವಾಸಿಯಾದ ಶ್ರೀಮತಿ. ಸುಚೇತ ಸಂಜಯ್ ಕೊಂ: ಎಸ್. ಸಂಜಯ್ ಇವರಿಂದ ನನ್ನ ಕಕ್ಷಿದಾರರಾದ ಬೆಂಗಳೂರು –560021, ರಾಜಾಜಿನಗರ, 2ನೇ ಬ್ಲಾಕ್, ಸುಬ್ರಮಣ್ಯ ನಗರ, ಬಿ. ಬ್ಲಾಕ್, 5ನೇ ಕ್ರಾಸ್, ನಂಬರ್: 3667/20 ರ ನಿವಾಸಿಯಾದ ಶ್ರೀ. ನಿಶ್ಚಲ್ ಕೆ. ಲಕ್ಷ್ಮಣ್ ಬಿನ್ ಲಕ್ಷ್ಮಣ್ ಕಲಸಯ್ಯ, ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಭಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಬಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣ ಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2 ನೇ ಫೇಸ್, ಇಲ್ಲಿರುವ ಪೂರ್ವ–ಪಶ್ಚಿಮ: 12 ಮೀಟರ್, ಉತ್ತರ–ದಕ್ಷಿಣ: 18 ಮೀಟರ್, ಒಟ್ಟು ವಿಸ್ತೀರ್ಣ: 216 ಚದರ ಮೀಟರ್ ಅಳತೆಯ ಆಸ್ತಿ ಸಂಖ್ಯೆ: 1324 ಮತ್ತು ಇದಕ್ಕೆ ಚಕ್ಕುಬಂದಿ. ಪೂರ್ವಕ್ಕೆ:– ನಿವೇಶನ ಸಂಖ್ಯೆ: 1325, ಪಶ್ಚಿಮಕ್ಕೆ:– ನಿವೇಶನ ಸಂಖ್ಯೆ: 1323, ಉತ್ತರಕ್ಕೆ: 60 ಅಡಿ ರಸ್ತೆ, ದಕ್ಷಿಣಕ್ಕೆ:– ನಿವೇಶನ ಸಂಖ್ಯೆ: 1329

ಸಹಿ/- ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು
KAR 1996-2000, #2-3, First Floor, PRI Complex, 67/7A, New Sayyajirao Road, Fort Mohalla, Mysore 570004 India Cell: 93431 12535
E-mail: mnprakashkalappa@gmail.com
ದಿನಾಂಕ: 30/03/2024

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು — ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871

ಹುಣಸೂರು — ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626

ಮಂಡ್ಯ — ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325

ಶ್ರೀರಂಗಪಟ್ಟಣ — ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

ಯಳಂದೂರು — ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191

ಚಾಮರಾಜನಗರ — ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

ಟಿ. ನರಸೀಪುರ — ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ — ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426

ಕೆ.ಆರ್. ನಗರ — ಕೆ.ಟಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. 9448021368

ಮಳವಳ್ಳಿ — ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806

ಕೊಳ್ಳೇಗಾಲ — ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರಳಿಕೇರಿ ಬೀದಿ, ಕೊಳ್ಳೇಗಾಲ 9916621007

ಹಾಸನ — ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ — ರಘು, ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

ಜಯಪುರ — ಬಿಳಿಗಿರಿ, ಜಯಪುರ 9945479288

ಪಿರಿಯಾಪಟ್ಟಣ — ವೀರೇಶ್, ಪಿರಿಯಾಪಟ್ಟಣ 8660057128

ವಿರಾಜಪೇಟೆ — ಮಂಜುನಾಥ, ವಿರಾಜಪೇಟೆ 9900949353

ಕೆ.ಆರ್.ಪೇಟೆ — ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

ಹೆಚ್.ಡಿ.ಕೋಟೆ — ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

ಕೆ.ಎಂ.ದೊಡ್ಡಿ — ಸತೀಶ್ ವಿ.ಎಲ್, ಕೆ.ಎಂ.ದೊಡ್ಡಿ 9242120338

ನಂಜನಗೂಡು — ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226

ಹುಣಸೂರು — ಹೆಚ್.ಆರ್. ಕೃಷ್ಣಕುಮಾರ್ (ಬಿನ್ ರಾಮೇಗೌಡ) ನಂದಿನಿ ಮಾರಾಟ ಕೇಂದ್ರ ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

ಕೊಳ್ಳೇಗಾಲ — ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷೀದಾರರು ಅದರ ಮಾಲೀಕರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಮಾಲೀಕರನ್ನು ಹೊರತುಪಡಿಸಿ ಇತರ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅದರ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಲಾಗುವುದು.,

ಷೆಡ್ಯೂಲ್: ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ, ಬೀರಂಬಳ್ಳಿ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನುಗಳು:

ಕ್ರಮ ಸಂಖ್ಯೆ	ಸರ್ವೇ ನಂಬರ್	ಮಾಲೀಕರ ಹೆಸರು	ವಿಸ್ತೀರ್ಣ ಎಕರೆ	ವಿಸ್ತೀರ್ಣ ಗುಂಟೆ	ಚಕ್ಕುಬಂದಿ (ಸರ್ವೇ ನಂಬರ್)
1.	38/1	ಎಂ. ಆರ್. ಮಂಜುನಾಥಸ್ವಾಮಿ ಬಿನ್. ಎಂ. ಬಿ. ರುದ್ರಸ್ವಾಮಿ	00	39	ಪೂರ್ವ : 38/2 ಪಶ್ಚಿಮ : 22 ಮತ್ತು 24 ಉತ್ತರ : 38/7 ಮತ್ತು 38/8 ದಕ್ಷಿಣ : 9
2.	38/2	ಸರ್ವಮಂಗಳ ಕೋಂ. ಶಿವಪ್ರಸಾದ್	03	26	ಪೂರ್ವ : 38/9 ಪಶ್ಚಿಮ : 38/1 ಉತ್ತರ : 38/3, 38/4, 38/5, 38/6 ದಕ್ಷಿಣ : 9 ಮತ್ತು 42
3.	38/3	ಭ್ರಮರಾಂಬಿಕ ಕೋಂ. ರಾಜೇಂದ್ರಪ್ರಸಾದ್	00	36	ಪೂರ್ವ : 38/9 ಪಶ್ಚಿಮ : 38/4 ಉತ್ತರ : ಓಣಿ ದಕ್ಷಿಣ : 38/2
4.	38/4	ಎಂ. ಆರ್. ಸೋಮಶೇಖರಸ್ವಾಮಿ ಬಿನ್ ಎಂ. ಬಿ. ರುದ್ರಸ್ವಾಮಿ	00	34	ಪೂರ್ವ : 38/3 ಪಶ್ಚಿಮ : 38/5 ಉತ್ತರ : ಓಣಿ ದಕ್ಷಿಣ : 38/2
5.	38/5	ಎಂ. ಆರ್. ಸಿದ್ದಲಿಂಗಸ್ವಾಮಿ ಬಿನ್ ಎಂ. ಬಿ. ರುದ್ರಸ್ವಾಮಿ	00	17.08	ಪೂರ್ವ : 38/4 ಪಶ್ಚಿಮ : 38/6 ಉತ್ತರ : ಓಣಿ ದಕ್ಷಿಣ : 38/2
6.	38/6	ಜಗದಾಂಬಿಕ ಎಂ. ಆರ್. ಬಿನ್. ಎಂ. ಬಿ. ರುದ್ರಸ್ವಾಮಿ	00	17.08	ಪೂರ್ವ : 38/5 ಪಶ್ಚಿಮ : 38/7 ಉತ್ತರ : ಓಣಿ ದಕ್ಷಿಣ : 38/2
7.	38/7	ಎಂ. ಆರ್. ಶಿವಕುಮಾರ ಬಿನ್ ಎಂ. ಬಿ. ರುದ್ರಸ್ವಾಮಿ	00	35	ಪೂರ್ವ : 38/6 ಪಶ್ಚಿಮ : 38/8 ಉತ್ತರ : ಓಣಿ ದಕ್ಷಿಣ : 38/1
8.	38/8	ಎಂ. ಆರ್. ಚೆನ್ನಬಸವಸ್ವಾಮಿ ಬಿನ್ ಎಂ. ಬಿ. ರುದ್ರಸ್ವಾಮಿ	00	35	ಪೂರ್ವ : 38/7 ಪಶ್ಚಿಮ : 22 ಮತ್ತು 24 ಉತ್ತರ : ಓಣಿ ದಕ್ಷಿಣ :38/1

ಸಹಿ/–ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು
KAR 1996-2000, #2-3, First Floor, PRI Complex, 67/7A, New Sayyajirao Road, Fort Mohalla, Mysore 570004 India Cell: 93431 12535 E-mail: mnprakashkalappa@gmail.com
ದಿನಾಂಕ: 30.03.2024, ಮೈಸೂರು